ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶುಭಾಶಯಗಳು
ನಮ್ಮೆಲ್ಲ ಓದುಗರು, ಜಾಹೀರಾತುದಾರರು, ಏಜೆಂಟರು ಹಾಗೂ ಹಿತೈಷಿಗಳಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು. ಪರಾಭವ ಸಂವತ್ಸರ ನಮ್ಮೆಲ್ಲರ ದುರ್ಗುಣಗಳನ್ನು ದೂರಮಾಡಲಿ.

ಬಿಡುವು
ಯುಗಾದಿ ಹಬ್ಬದ ನಿಮಿತ್ತ ಮಾರ್ಚ್ 19ರಂದು ನಮ್ಮ ಕಾರ್ಯಾಲಯಕ್ಕೆ ಬಿಡುವು ಇರುವುದರಿಂದ ಶುಕ್ರವಾರದ ಸಂಚಿಕೆ ಪ್ರಕಟಗೊಳ್ಳುವುದಿಲ್ಲ. ಪತ್ರಿಕೆ ಇಲ್ಲ ಎಂದು ಚಿಂತಿಸಬೇಡಿ, ಕ್ಷಣಕ್ಷಣದ ಸುದ್ದಿಗಳು, ವಿಡಿಯೊಗಳು www.vishwavani.news ಹಾಗೂ vishwavanitv ಯುಟ್ಯೂಬ್ ಚಾನೆಲ್ ಮೂಲಕ ಲಭ್ಯ.

ಸೊಂಪಾದ ಪುಟಗಳು


ಇರಾನಿನ ಸಾವಿರ ವರ್ಷಗಳ ನಾಗರಿಕತೆಯೂ, ಐವತ್ತು ವರ್ಷಗಳ ಸಂಕೋಲೆಯೂ
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6


ಯುದ್ಧ ಎಂದರೆ ಎಲ್ಲರಿಗೂ ಬಹಳ ಇಷ್ಟ
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಪ್ರತಿಯೊಬ್ಬರಲ್ಲೂ ದೌರ್ಬಲ್ಯಗಳು ಇರುವುದು ಸ್ವಾಭಾವಿಕ. ಅದು ಯಾರನ್ನೂ ಬಿಟ್ಟಿಲ್ಲ. ನಿಮ್ಮ ದೌರ್ಬಲ್ಯಗಳೇನು ಎಂಬುದನ್ನು ನೀವೇ ಗುರುತಿಸಿ, ಅವನ್ನು ನಿಮ್ಮ ತಾಕತ್ತನ್ನಾಗಿ ಪರಿವರ್ತಿಸುವುದು ಹೇಗೆ ಎಂಬುದರ ಬಗ್ಗೆ ಯೋಚಿಸಬೇಕು.

ವಕ್ರತುಂಡೋಕ್ತಿ

ಜೀವನಕ್ಕೆ ಬೇಕಾದವುಗಳನ್ನೆಲ್ಲಾ ದೇವರು ಸೃಷ್ಟಿಸಿಕೊಡುತ್ತಾನೆ. ಉಳಿದವುಗಳನ್ನು ಚೈನಾ ಸೃಷ್ಟಿಸುತ್ತದೆ.

ತಿಮರೋಡಿ ಗಡಿಪಾರು ಮೇಲ್ಮನವಿ ಅರ್ಜಿ ವಜಾ

ಬೆಂಗಳೂರು: ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ್ದ ಗಡಿಪಾರು ಆದೇಶ ವಿರೋಧದ ಮೇಲ್ಮನವಿ ಅರ್ಜಿಯನ್ನು ಹೈಕೋರ್ಟ್ ವಿಭಾಗೀಯ ಪೀಠ ವಜಾಗೊಳಿಸಿದೆ.

ಏಕಸದಸ್ಯ ಪೀಠದ ಆದೇಶವನ್ನು ಸಮರ್ಥಿಸಿಕೊಂಡ ನ್ಯಾಯಾಲಯ, ತಿಮರೋಡಿಗೆ ಆರು ತಿಂಗಳ ಕಾಲ ದಕ್ಷಿಣ ಕನ್ನಡ ಜಿಲ್ಲೆ ಪ್ರವೇಶ ನಿಷೇಧವನ್ನು ಮುಂದುವರಿಸಿದೆ. , ಹೈಕೋರ್ಟ್‌ನ ಈ ಆದೇಶದಿಂದ ತಿಮರೋಡಿ ಅವರು ದಕ್ಷಿಣ ಕನ್ನಡ ಜಿಲ್ಲೆಯನ್ನು ತೊರೆಯುವುದು ಈಗ ಅನಿವಾರ್ಯವಾಗಿದೆ. ಈಗಾಗಲೇ ಪೊಲೀಸರು ತಿಮರೋಡಿ ಅವರ ಮನೆಗೆ ಭೇಟಿ ನೀಡಿ, ಆದೇಶದ ಪ್ರತಿಯನ್ನು ಮನೆ ಬಾಗಿಲಿಗೆ ಅಂಟಿಸಿದ್ದಾರೆ. ಜಿಲ್ಲೆಯಾದ್ಯಂತ ಈ ಬೆಳವಣಿಗೆಯು ತೀವ್ರ ಕುತೂಹಲ ಕೆರಳಿಸಿದ್ದು, ಮುಂದಿನ ಆರು ತಿಂಗಳು ಅವರು ಜಿಲ್ಲೆಯಿಂದ ಹೊರಗುಳಿಯ ಬೇಕಿದೆ.

ಕಮಲ ಮುಡಿದ ಅಸ್ಸಾಂ ಕೈ ನಾಯಕ

ದೆಹಲಿ: ಅಸ್ಸಾಂ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳು ಬಾಕಿಯಿರುವಂತೆಯೇ ಕಾಂಗ್ರೆಸ್‌ಗೆ ದೊಡ್ಡ ಹೊಡೆತ ಬಿದ್ದಿದ್ದು, ಹಾಲಿ ಸಂಸದ ಪ್ರದ್ಯುತ್ ಬೊರ್ಡೊಲಾಯ್ ಬುಧವಾರ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಮಂಗಳವಾರ ಪಕ್ಷಕ್ಕೆ ರಾಜೀನಾಮೆ ನೀಡಿದ್ದ ಬೊರ್ಡೊಲಾಯ್ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

ಫನ್‌ತರಂಗ
- ರಘುಪತಿ ಶೃಂಗೇರಿ -

"ಯುಗಾದಿ ಹಬ್ಬದ ಶುಭಾಶಯಗಳು"

ಇರಾನ್ ಕ್ಷಿಪಣಿ ತಾಣಗಳ ಮೇಲೆ ದಾಳಿ, ಜಲಮಾರ್ಗ ಸದ್ಯವೇ ನಮ್ಮ ವಶ: ಟ್ರಂಪ್

ಹೊರ್ಮುಜ್ ಬಳಿ ಅಮೆರಿಕ ಬಾಂಬ್

ಇಸ್ರೇಲ್ ದಾಳಿಗೆ ಇರಾನ್ ಗುಪ್ತಚರ ಮುಖ್ಯಸ್ಥ ಬಲಿ, ಇದಕ್ಕೆಲ್ಲ ಬಗ್ಗಲ್ಲ ಎಂದ ಇರಾನ್

ಟೆಹರಾನ್: ಇರಾನ್-ಇಸ್ರೇಲ್, ಅಮೆರಿಕ ಯುದ್ಧ 19ನೇ ದಿನಕ್ಕೆ ಕಾಲಿಟ್ಟಿದ್ದು, ಸಂಘರ್ಷ ಕೊನೆಗೊಳ್ಳುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ. ಈ ನಡುವೆ ಇರಾನ್ ಹಿಡಿತದಲ್ಲಿರುವ ಹೊರ್ಮುಜ್ ಜಲಸಂಧಿ ಬಳಿ ಅಮೆರಿಕ ಬುಧವಾರ ಭಾರೀ ದಾಳಿ ನಡೆಸಿದೆ. ಕಚ್ಚಾ ತೈಲ ಹಡಗುಗಳ ಸುಗಮ ಸಂಚಾರಕ್ಕೆ ನಿರ್ಣಾಯಕವಾಗಿರುವ ಈ ಜಲಮಾರ್ಗ ಸದ್ಯವೇ ನಮ್ಮ ವಶವಾಗಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಹೊರ್ಮುಜ್ ಜಲಸಂಧಿ ಬಳಿಯ ಇರಾನ್‌ನ ಕರಾವಳಿಯುದ್ದಕ್ಕೂ ಇದ್ದ ಕ್ಷಿಪಣಿ ತಾಣಗಳ ಮೇಲೆ ಅಮೆರಿಕ 5,000 ಪೌಂಡ್ ಬಂಕರ್ ಬಸ್ಟರ್ ಬಾಂಬ್ ಸುರಿಮಳೆ ಸುರಿಸಿದೆ. ನಿರ್ಣಾಯಕ ಜಲಮಾರ್ಗವನ್ನು ಮತ್ತೆ ತೆರೆಯುವ ಉದ್ದೇಶದಿಂದ ಅಮೆರಿಕ ಶಸ್ತ್ರಾಗಾರದಲ್ಲಿರುವ ಕೆಲವು ಶಕ್ತಿಶಾಲಿ ಬಾಂಬ್‌ಗಳ ಮೂಲಕ ದಾಳಿ ನಡೆಸಿದೆ. ಈ ತಾಣಗಳಲ್ಲಿರುವ ಇರಾನಿನ ಹಡಗು ವಿರೋಧಿ ಕ್ರೂಸ್ ಕ್ಷಿಪಣಿಗಳು ಜಲಸಂಧಿ ಯಲ್ಲಿ ಅಂತರರಾಷ್ಟ್ರೀಯ ಹಡಗು ಸಾಗಣೆಗೆ ಅಪಾಯ ವನ್ನುಂಟುಮಾಡಿದವು. ಹೀಗಾಗಿ, ಅವುಗಳನ್ನು ಹೊಡೆದುರುಳಿಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ.

ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತಗೊಳಿಸಲು, ಯುದ್ಧ ನೌಕೆಗಳನ್ನು ನಿಯೋಜಿಸುವಂತೆ ಟ್ರಂಪ್, ನ್ಯಾಟೋ ರಾಷ್ಟ್ರಗಳಿಗೆ ಮನವಿ ಮಾಡಿದ್ದರು. ಆದರೆ ಈ ರಾಷ್ಟ್ರಗಳು ಟ್ರಂಪ್ ಕೋರಿಕೆಯನ್ನು ತಳ್ಳಿ ಹಾಕಿದ್ದವು. ಇದನ್ನು ಪ್ರಸ್ತಾಪಿಸಿರುವ ಟ್ರಂಪ್, ಮಿತ್ರ ರಾಷ್ಟ್ರಗಳ ಸಹಾಯ ಇಲ್ಲದ ಹೊರತಾಗಿಯೂ ಹೊರ್ಮುಜ್ ನಿಯಂತ್ರಣಕ್ಕೆ ಪಡೆಯಲು ನಮಗೆ ಹೆಚ್ಚು ಸಮಯ ಬೇಕಾಗಿಲ್ಲ' ಎಂದು ಹೇಳಿದ್ದಾರೆ.

ಇರಾನ್‌ಗೆ ಮತ್ತೆ ಹೊಡೆತ

ಇರಾನಿನ ಗುಪ್ತಚರ ಮುಖ್ಯಸ್ಥ ಇಸ್ಮಾಯಿಲ್ ಖತೈಬ್ ತಾನು ನಡೆಸಿದ ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಹೇಳಿಕೊಂಡಿದೆ. ಇರಾನ್ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಅವರ ಹತ್ಯೆ ವರದಿ ಬೆನ್ನಿಗೇ ಬಂದಿರುವ ಈ ವರದಿಯನ್ನು ಇರಾನ್ ದೃಢೀಕರಿಸಿಲ್ಲ. ಸೋಮವಾರ ನೂತನ ಸರ್ವಾಧಿಕಾರಿ ಮೊಜ್ತಾಬಾ ಖಮೇನಿ ಅವರ ನಿಕಟವರ್ತಿ 67 ವರ್ಷದ ಲಾರಿಜಾನಿ ಇಸ್ರೇಲ್ ದಾಳಿಗೆ ಬಲಿಯಾಗಿದ್ದರು. ಆದರೆ ನಾಯಕರ ಹತ್ಯೆ ಯುದ್ಧಕ್ಕೆ ತಡೆಯಾಗದು. ಇಸ್ಲಾಮಿಕ್ ಗಣರಾಜ್ಯ ಇರಾನ್ ಬಲವಾದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆ ಹೊಂದಿದೆ ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಹೇಳಿದ್ದಾರೆ.

ಯುಎಇಗೆ ಮೋದಿ ಕಾಲ್

ದೆಹಲಿ: ವಿಷಮ ಪರಿಸ್ಥಿತಿಯಲ್ಲೂ ಭಾರತದ ಪರ ನಿಂತಿರುವ ಅರಬ್ ಸಂಯುಕ್ತ ಸಂಸ್ಥಾನದ ಅಧ್ಯಕ್ಷರ ಜತೆ ಪ್ರಧಾನಿ ನರೇಂದ್ರ ಮೋದಿ ಬುಧವಾರ ದೂರವಾಣಿ ಮಾತುಕತೆ ನಡೆಸಿದ್ದಾರೆ.
'ಯುಎಇ ಅಧ್ಯಕ್ಷ ನನ್ನ ಸಹೋದರ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ಮಾತನಾಡಿ ಈದ್ ಶುಭಾಶಯ ತಿಳಿಸಿದ್ದೇನೆ. ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಯನ್ನು ಚರ್ಚಿಸಿದ್ದೇವೆ' ಎಂದು ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿರುವ ಮೋದಿ, ಯುಎಇ ಮೂಲಸೌಕರ್ಯಗಳ ಮೇಲಿನ ಎಲ್ಲಾ ದಾಳಿಗಳನ್ನು ಭಾರತ ಖಂಡಿಸುತ್ತದೆ ಎಂದು ಹೇಳಿದ್ದಾರೆ.

1600 ಭಾರತೀಯರು ವಾಪಸ್: ಕೊಲ್ಲಿ ರಾಷ್ಟ್ರಗಳಲ್ಲಿ ಸಿಲುಕಿರುವ ಭಾರತೀಯರನ್ನು ಕರೆ ತರುವ ಕೆಲಸ ನಿರಂತರವಾಗಿ ಸಾಗಿದ್ದು, ಐದು ಕತಾರ್ ಏರ್‌ವೇಸ್ ವಿಮಾನಗಳಲ್ಲಿ ಸುಮಾರು 1,600 ಭಾರತೀಯ ಪ್ರಜೆಗಳು ಬುಧವಾರ ಭಾರತಕ್ಕೆ ಆಗಮಿಸಿದ್ದಾರೆ. ಎರಡು ವಿಮಾನಗಳು ದೆಹಲಿಗೆ, ಮುಂಬೈ, ಕೊಚ್ಚಿ ಮತ್ತು ತಿರುವನಂತಪುರಂಗೆ ತಲಾ ಒಂದು ವಿಮಾನಗಳು ತೆರಳಿವೆ ಎಂದು ರಾಯಭಾರ ಕಚೇರಿ ತಿಳಿಸಿದೆ. ಇರಾನ್ ನಿರಂತರ ದಾಳಿಯ ಕಾರಣ ಕತಾರ್ ವಾಯುಪ್ರದೇಶವನ್ನು ಮುಚ್ಚಲಾಗಿದ್ದು ಪ್ರಸ್ತುತ ಕತಾರ್ ಏರ್‌ವೇಸ್ ಸೀಮಿತ, ನಿಗದಿತವಲ್ಲದ ವಿಮಾನಗಳನ್ನು ಮಾತ್ರ ನಿರ್ವಹಿಸುತ್ತಿದೆ ಎಂದು ರಾಯಭಾರ ಕಚೇರಿ ತಿಳಿಸಿದೆ.

ಚೀನಾಗೆ ತೆರಳುತ್ತಿದ್ದ ಟ್ಯಾಂಕರ್ ಭಾರತಕ್ಕೆ ಯೂಟರ್ನ್

ಮಂಗಳೂರಿಗೆ ಬರುತ್ತಿದೆ ರಷ್ಯಾ ತೈಲ

ದೆಹಲಿ: ಭಾರತದ ಮನವಿಯನ್ನು ಮನ್ನಿಸಿರುವ ರಷ್ಯಾ ಚೀನಾದತ್ತ ಹೊರಟಿದ್ದ ತೈಲ ತುಂಬಿದ ಟ್ಯಾಂಕರನ್ನು ಭಾರತಕ್ಕೆ ಕಳುಹಿಸಿದೆ. ದಕ್ಷಿಣ ಚೀನಾ ಸಮುದ್ರದಲ್ಲಿದ್ದ ಹಡಗು ಈಗ ಯೂಟರ್ನ್ ಹೊಡೆದು ಮಂಗಳೂರಿನತ್ತ ಆಗಮಿಸಿದೆ. ಹಡಗು ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಜನವರಿ ಅಂತ್ಯದಲ್ಲಿ ಬಾಲ್ಟಿಕ್ ಸಮುದ್ರದ ಬಂದರಿನಿಂದ ಯುರಲ್ಸ್ ಕಚ್ಚಾತೈಲವನ್ನು ಅಕ್ವಾ ಟೈಟಾನ್ ಹಡಗಿಗೆ ಲೋಡ್ ಮಾಡಲಾಗಿತ್ತು. ಚೀನಾದ ರಿಝಾವೊ ಬಂದರಿನತ್ತ ಹೊರಟಿದ್ದ ಈ ಹಡಗು ಯೂಟರ್ನ್ ಹೊಡೆದಿದ್ದು ಮಾರ್ಚ್ 21 ರಂದು ನವಮಂಗಳೂರಿಗೆ ಆಗಮಿಸುವ ಸಾಧ್ಯತೆಯಿದೆ. ತೈಲ ಪೂರೈಕೆಯಲ್ಲಿ ಸಮಸ್ಯೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ವಾರ ಭಾರತ ರಷ್ಯಾದಿಂದ 30 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಖರೀದಿಸಿದೆ.ವೋರ್ಟೆಕ್ಸಾ ಲಿಮಿಟೆಡ್ ಪ್ರಕಾರ ರಷ್ಯಾದ ತೈಲವನ್ನು ಹೊತ್ತುಕೊಂಡು ಚೀನಾಗೆ ಸಾಗಿಸುತ್ತಿದ್ದ ಕನಿಷ್ಠ ಏಳು ಟ್ಯಾಂಕರ್‌ಗಳು ಪ್ರಯಾಣ ಮಧ್ಯೆ ಗಮ್ಯಸ್ಥಾನವನ್ನು ಬದಲಾಯಿಸಿ ಭಾರತದತ್ತ ಆಗಮಿಸುತ್ತಿವೆ.

ಹೋಟೆಲ್‌ಗಳಿಗೆ 10% ಸಿಲಿಂಡರ್: ಎಲ್‌ಪಿಜಿ ಬಿಕ್ಕಟ್ಟು ತೀವ್ರಗೊಂಡ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿದ್ದು ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸಿಲಿಂಡರ್ ಪೂರೈಕೆಯಲ್ಲಿ ಶೇ.100ರಷ್ಟು ಆದ್ಯತೆ ನೀಡಲು ಸೂಚನೆ ನೀಡಿದೆ. ಆದರೆ, ಹೋಟೆಲ್‌ಗಳಿಗೆ ಕೇವಲ 10% ಗ್ಯಾಸ್ ವಿತರಣೆಗೆ ಸೂಚಿಸಲಾಗಿದೆ.

ಗುರುವಾರದಿಂದ ಹೋಟೇಲ್‌ಗಳಿಗೆ ಗ್ಯಾಸ್ ವಿತರಣೆಗೆ ಸರಕಾರ ಸೂಚಿಸಿದೆ. ಆದರೆ ಅಗತ್ಯ ವಲಯಗಳಿಗೆ ಪ್ರಮುಖ ಆದ್ಯತೆ ನೀಡಲಾಗಿದೆ. ಸೀಡ್ ಪ್ರೊಸೆಸಿಂಗ್, ಆಯಿಲ್ ಉತ್ಪಾದನೆ, ಏರ್ ಲೈನ್ಸ್ ರೈಲ್ವೆ ಗೆ ಶೇ.70ರಷ್ಟು ಸಿಲಿಂಡರ್ ಮೀಸಲಿಡಲು ಸರಕಾರ ಅನಿಲ ಪೂರೈಕೆ ಡೀಲರ್‌ಗಳಿಗೆ ಸೂಚಿಸಿದೆ.

ಕೇಂದ್ರಕ್ಕೆ ಪ್ರತಿ ತಿಂಗಳು ₹30,000 ಕೋಟಿ ಹೊರೆ

ದೆಹಲಿ: ಕಚ್ಚಾ ತೈಲ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಗಿಂತ ಹೆಚ್ಚಾದರೆ ಕೇಂದ್ರ ಸರ್ಕಾರದ ಮೇಲೆ ಪ್ರತಿ ತಿಂಗಳು 30000 ಕೋಟಿ ರೂ. ಹೆಚ್ಚಿನ ವೆಚ್ಚ ತಗುಲಲಿದೆ. 2026-27ರ ಆರ್ಥಿಕ ವರ್ಷದಲ್ಲಿ ಭಾರತದ ಚಾಲ್ತಿ ಖಾತೆ ಕೊರತೆ ಜಿಡಿಪಿಯ ಶೇ. 2ರಷ್ಟು ಹೆಚ್ಚಾಗಬಹುದು. ವಾರ್ಷಿಕವಾಗಿ 3.6 ಲಕ್ಷ ಕೋಟಿ ರೂ. ಹೆಚ್ಚಿನ ಹೊರೆಯಾಗಬಹುದು ಎಂದು ಎಲಾರಾ ಸೆಕ್ಯುರಿಟೀಸ್ ವರದಿ ತಿಳಿಸಿದೆ. ಹೊರ್ಮುಜ್ ಜಲಸಂಧಿಯಲ್ಲಿ ಭಾರತದ ಧ್ವಜಾರೋಹಣ ಮಾಡಿದ ಹಡಗುಗಳಲ್ಲಿ 2 ಲಕ್ಷ ಮೆಟ್ರಿಕ್ ಟನ್ ಎಲ್‌ಪಿಜಿ, ಮತ್ತು 16.7 ಲಕ್ಷ ಮೆಟ್ರಿಕ್ ಟನ್ ಕಚ್ಚಾ ತೈಲ ಸಿಲುಕಿಕೊಂಡಿದೆ ಎಂದು ಕೇಂದ್ರ ಜಲಮಾರ್ಗ ಸಚಿವಾಲಯ ತಿಳಿಸಿದೆ.

ಬಿಜೆಪಿ ಮುಖಂಡ ದೇವರಾಜೇಗೌಡ ಸೇರಿ 52 ಜನರ ಹೆಸರು ಪ್ರಸ್ತಾಪ

ಪ್ರಜ್ವಲ್ ಸೆಕ್ಸ್ ವಿಡಿಯೋ ಸೋರಿಕೆ: 39 ಜನರ ವಿರುದ್ಧ ಚಾರ್ಜ್ ಶೀಟ್

ಬೆಂಗಳೂರು/ಹಾಸನ: ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಅಧಿಕಾರಿಗಳು ಬಿಜೆಪಿ ಮುಖಂಡ ದೇವರಾಜೇಗೌಡ, ನವೀನ್ ಗೌಡ, ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್ ಸೇರಿದಂತೆ 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಹಾಸನದ ಹಿರಿಯ ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸಿದ 13,712 ಪುಟಗಳ ದೋಷಾರೋಪ ಪಟ್ಟಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಹಾಸನದಲ್ಲೇ 70 ಪೆನ್‌ಡ್ರೈವ್‌ಗಳನ್ನು ಖರೀದಿಸಲಾಗಿತ್ತು ಎಂಬ ಅಂಶ ಬೆಳಕಿಗೆ ಬಂದಿದೆ.

ದೋಷಾರೋಪ ಪಟ್ಟಿಯಲ್ಲಿ ಒಟ್ಟು 52 ಜನರ ಹೆಸರನ್ನು ಪ್ರಸ್ತಾಪಿಸಲಾಗಿದ್ದು, ಈ ಪೈಕಿ 39 ಆರೋಪಿಗಳ ವಿರುದ್ಧ ಬಲವಾದ ಸಾಕ್ಷ್ಯಾಧಾರಗಳು ಸಿಕ್ಕಿವೆ. ಮಹಿಳೆಯರ ಸಮ್ಮತಿಯಿಲ್ಲದೆ ಚಿತ್ರೀಕರಿಸಲಾದ ವೀಡಿಯೋಗಳನ್ನು ಡಿಜಿಟಲ್ ರೂಪದಲ್ಲಿ ಹಂಚಿಕೆ ಮಾಡಿರುವುದು ಗಂಭೀರ ಅಪರಾಧವಾಗಿದೆ ಎಂದು ಎಸ್‌ಐಟಿ ಹೇಳಿದೆ.

→ 8

ಪ್ರೀತಂಗೌಡ, ಶ್ರೇಯಸ್ ಆಪ್ತರಿಗೆ ರಿಲೀಫ್

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಅಶ್ಲೀಲ ವೀಡಿಯೋ ವೈರಲ್ ಪ್ರಕರಣದಲ್ಲಿ ಮಾಜಿ ಶಾಸಕ ಪ್ರೀತಂಗೌಡ ಮತ್ತು ಸಂಸದ ಶ್ರೇಯಸ್ ಪಟೇಲ್ ಅವರ ಆಪ್ತರಿಗೆ ದೊಡ್ಡ ಮಟ್ಟದ ರಿಲೀಫ್ ಸಿಕ್ಕಿದೆ. ಪ್ರೀತಂ ಗೌಡ ಆಪ್ತರಾದ ಶರತ್ ಮತ್ತು ಕಿರಣ್, ಹಾಗೆಯೇ ಶ್ರೇಯಸ್ ಪಟೇಲ್ ಆಪ್ತರಾಗಿರುವ ಪುಟ್ಟರಾಜು ಅವರಿಗೆ ಆರೋಪಗಳಿಂದ ಮುಕ್ತಿ ದೊರೆತಿದೆ. ವಿಶೇಷ ತನಿಖಾ ತಂಡ ಈ ಮೂವರ ಹೆಸರುಗಳನ್ನು ತಮ್ಮ ದೋಷಾರೋಪ ಪಟ್ಟಿಯಿಂದ ಕೈಬಿಟ್ಟಿದೆ.

59 ರಾಜ್ಯಸಭಾ ಸದಸ್ಯರಿಗೆ ಬೀಳ್ಕೊಡುಗೆ

ದೆಹಲಿ: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಎನ್‌ಸಿಪಿ ನಾಯಕ ಶರದ್ ಪವಾರ್ ಸೇರಿದಂತೆ ಏಪ್ರಿಲ್ ಮತ್ತು ಜುಲೈ ನಡುವೆ ಸದನದಿಂದ ನಿವೃತ್ತರಾಗುತ್ತಿರುವ 59 ಸದಸ್ಯರಿಗೆ ಬುಧವಾರ ರಾಜ್ಯಸಭೆಯಿಂದ ಗೌರವ ಪೂರ್ವಕ ಬೀಳ್ಕೊಡುಗೆ ನೀಡಲಾಯಿತು. ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲ ಸದಸ್ಯರಿಗೆ ನೆನಪಿನ ಸ್ಮರಣಿಕೆಗಳನ್ನು ನೀಡಿ ಗೌರವಿಸಿದರು.ಬಳಿಕ




ಮಾತನಾಡಿದ ಮೋದಿ, 'ಸಂಸತ್ತು ಮುಕ್ತ ವಿಶ್ವವಿದ್ಯಾಲಯ. ಹೊರಹೋಗುವ ಸಂಸದರು, ಇಲ್ಲಿ ಪಡೆದ ಅನುಭವವನ್ನು ಜನರಿಗೆ ತಲುಪಿಸಬೇಕು' ಎಂದರು.

ಇದೇ ವೇಳೆ ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಶ್ಲಾಘಿಸಿದ ಪ್ರಧಾನಿ ಮೋದಿ, ಇವರು ತಮ್ಮ ಜೀವನದ ಅರ್ಧಕ್ಕಿಂತ ಹೆಚ್ಚು ಸಮಯವನ್ನು ಸಂಸತ್ತಿನ ಕಲಾಪಗಳಲ್ಲಿ ಕಳೆದ ಧೀಮಂತ ನಾಯಕರು ಎಂದರು.

ನಾಲ್ವರಲ್ಲೊಬ್ಬರಿಗೆ ಟಿಕೆಟ್: ಸಿಎಂ ಸಂಧಾನ ಯಶಸ್ವಿ

ಎಚ್.ವೈ. ಮೇಟಿ ಕುಟುಂಬಕ್ಕೆ ಬಾಗಲಕೋಟೆ ಟಿಕೆಟ್ ಫಿಕ್ಸ್

ಬೆಂಗಳೂರು: ರಾಜ್ಯದಲ್ಲಿ ಘೋಷಣೆಯಾಗಿರುವ ಉಪಚುನಾವಣೆಯಲ್ಲಿ ಕುಟುಂಬ ಕದನಕ್ಕೆ ಸಾಕ್ಷಿಯಾಗಿದ್ದ ಬಾಗಲಕೋಟೆ ವಿಧಾನಸಭೆಯ ಗೊಂದಲವನ್ನು ತಗ್ಗಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಹುತೇಕ ಯಶಸ್ವಿಯಾಗಿದ್ದಾರೆ.

ಹಿರಿಯ ಶಾಸಕ ಎಚ್.ವೈ. ಮೇಟಿ ಅವರ ನಿಧನದಿಂದ ತೆರವಾಗಿದ್ದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಮೇಟಿ ಕುಟುಂಬವೇ ಸ್ಪರ್ಧಿಸುವುದು ನಿಶ್ಚಿತವಾಗಿದ್ದರೂ, ಯಾರೂ ಎನ್ನುವ ಗೊಂದಲ ಮನೆ ಮಾಡಿತ್ತು. ಅದರಲ್ಲಿಯೂ ಮೇಟಿ ಪುತ್ರ ಮಲ್ಲಿಕಾರ್ಜುನ ಹಾಗೂ ಪುತ್ರ ಮಹಾದೇವಿ ನಡುವೆ ಟಿಕೆಟ್‌ಗಾಗಿ ಭಾರಿ ಪೈಪೋಟಿ ನಡೆದಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಬುಧವಾರ ಸಂಧಾನ ಸಭೆ ನಡೆಯಿತು.

ಮೇಟಿ ಅವರ ಕಿರಿಯ ಪುತ್ರಿ ಮಹಾದೇವಿ ಮೇಟಿ, ಹಿರಿಯ ಪುತ್ರ ಮಲ್ಲಿಕಾರ್ಜುನ, ಕಿರಿಯ ಪುತ್ರ ಉಮೇಶ, ಪುತ್ರಿಯರಾದ ಬಾಯಕ್ಕ ನಡುವೆ ಟಿಕಟ್‌ಗಾಗಿ ಪೈಪೋಟಿ ಏರ್ಪಟ್ಟಿತ್ತು. ಮುಖ್ಯವಾಗಿ ಟಿಕೆಟ್ ಸಿಗದಿದ್ದರೆ ಬಂಡಾಯವಾಗಿ ಸ್ಪರ್ಧೆ ಮಾಡುವುದಾಗಿ ಮಹಾದೇವಿ ಬಹಿರಂಗ ಎಚ್ಚರಿಕೆ ನೀಡಿದ್ದರು. ಮುಖ್ಯಮಂತ್ರಿಗಳ ಮಧ್ಯಸ್ಥಿಕೆಯ ಸಭೆಯಲ್ಲಿಯೂ ಆರಂಭದಲ್ಲಿ ಮಹಾದೇವಿ ಅವರು ಟಿಕೆಟ್ ತಮಗೆ ನೀಡಬೇಕು, ಇಲ್ಲದೇ ಹೋದರೆ 20ರಂದು ಬಂಡಾಯವಾಗಿ ಸ್ಪರ್ಧಿಸುವುದಾಗಿ ಮುಖ್ಯಮಂತ್ರಿಗಳ ಮುಂದೆಯೇ ಸ್ಪಷ್ಟಪಡಿಸಿದ್ದು, ಗೊಂದಲಕ್ಕೆ ಕಾರಣವಾಗಿತ್ತು.

ಮೇಟಿಯವರ ಹಿರಿಯ ಪುತ್ರ ಮಲ್ಲಿಕಾರ್ಜುನ, ಕಿರಿಯ ಪುತ್ರ ಉಮೇಶ, ಪುತ್ರಿಯರಾದ ಬಾಯಕ್ಕ, ಮಹಾದೇವಿ ಅವರನ್ನು ಬೆಂಗಳೂರಿಗೆ ಕರೆಯಿಸಿಕೊಂಡು ಸಭೆ ನಡೆಸಿದ್ದು, ಸಭೆಯಲ್ಲಿ ಮೇಟಿ ಕುಟುಂಬಕ್ಕೆ ಟಿಕೆಟ್ ನೀಡುವ ಬಗ್ಗೆ ಫೈನಲ್ ಆಗಿದೆ. ಸಂಧಾನ ವೇಳೆ ನಾಲ್ವರಲ್ಲಿ ಒಬ್ಬರಿಗೆ ನೀಡಿದರೆ ಉಳಿದವರು ಪಕ್ಷಕ್ಕೆ ಕೆಲಸ ಮಾಡಬೇಕೆಂದು ಸಿದ್ದರಾಮಯ್ಯ ಸಭೆಯಲ್ಲಿ ಖಡಕ್ ಆಗಿ ಹೇಳಿದ್ದಾರೆ. ಇದಕ್ಕೆ ಮೇಟಿ ಮಕ್ಕಳು ಸಹ ಒಪ್ಪಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಮೂಲಕ ಬಾಗಲಕೋಟೆ ಉಪ ಚುನಾವಣೆ ಕಾಂಗ್ರೆಸ್ ಟಿಕೆಟ್ ಮೇಟಿ ಕುಟುಂಬಕ್ಕೆ ಎನ್ನುವುದು ಸ್ಪಷ್ಟವಾಗಿದೆ.

ಬಾಗಲಕೋಟೆಯಲ್ಲಿ ಮೇಟಿ ಕುಟುಂಬದವರು ಟಿಕೆಟ್ ಕೇಳುತ್ತಿದ್ದಾರೆ. ಮೇಟಿ ಮಕ್ಕಳಾದ ಮಲ್ಲಿಕಾರ್ಜುನ, ಉಮೇಶ್, ಮಹಾದೇವಿ ಟಿಕೆಟ್ ಕೇಳುತ್ತಿದ್ದಾರೆ. ಯಾರಿಗೆ ಟಿಕೆಟ್ ಕೊಟ್ಟರೂ ಒಟ್ಟಿಗೆ ಕೆಲಸ ಮಾಡಬೇಕು ಎಂದಿದ್ದೇನೆ. ಅದಕ್ಕೆ ಮಲ್ಲಿಕಾರ್ಜುನ, ಉಮೇಶ್, ಮಹಾದೇವಿ ಒಪ್ಪಿಕೊಂಡಿದ್ದಾರೆ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಶಾಸಕರು ಡಿನ್ನರ್ ಸಭೆ ಮಾಡಿರುವ ಬಗ್ಗೆ ಮಾಹಿತಿ ಇಲ್ಲ. ಶಾಸಕರನ್ನು ನಿಯಂತ್ರಣ ಮಾಡುವುದು ಸಿಎಂ. ಶಾಸಕಾಂಗ ಪಕ್ಷದ ನಾಯಕರಾದ ಸಿಎಂಗೆ ಶಾಸಕರು ಶಿಸ್ತು ಪಾಲಿಸುವಂತೆ ನೋಡಿಕೊಳ್ಳುವ ಜವಾಬ್ದಾರಿ ಹೆಚ್ಚಾಗಿರುತ್ತದೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಎರಡ್ಮೂರು ದಿನದಲ್ಲಿ ಅಭ್ಯರ್ಥಿ ಅಂತಿಮ

ನಾನು ಹಾಗೂ ಮುಖ್ಯಮಂತ್ರಿ ಈ ವಿಚಾರವಾಗಿ ಚರ್ಚೆ ಮಾಡಿದ್ದು, ವರದಿ ಇನ್ನು ಬಂದಿಲ್ಲ. ಮುಖ್ಯಮಂತ್ರಿಗಳು ಮೇಟಿ ಅವರ ಕುಟುಂಬದವರನ್ನು ಕರೆಸಿ ಚರ್ಚೆ ಮಾಡಿದ್ದಾರೆ. ದಾವಣಗೆರೆ ಚುನಾವಣಾ ಆಕಾಂಕ್ಷಿಗಳು ನನ್ನನ್ನು ಭೇಟಿ ಮಾಡುತ್ತಿದ್ದಾರೆ. ಅಂತಿಮ ತೀರ್ಮಾನ ಹೈಕಮಾಂಡ್ ತೆಗೆದುಕೊಳ್ಳಲಿದೆ. ಎರಡು ಮೂರು ದಿನದಲ್ಲಿ ಟಿಕೆಟ್ ಅಂತಿಮಗೊಳಿಸಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ
ಯುಗಾದಿ ವಿಶೇಷಾಂಕ 2026
ಇದೀಗ ಮಾರುಕಟ್ಟೆಯಲ್ಲಿ! ₹75/-

ವೈವಿಧ್ಯಮಯ ಲೇಖನಗಳು
ಗಡಿನಾಡಿನಲ್ಲಿ ನೀಲಕಂಠ ಶ್ರೀಗಳ ನಿರಂತರ ಕ್ರಾಂತಿ
ಮನರಂಜನಾ ಲೋಕದಲ್ಲಿ ಎಐ ಸುನಾಮಿ?
ಬಡೆಕ್ಕಿಲ ಪ್ರದೀಪ್
ಶ್ಯಾಮಲಾ ಎಂಬ ಹೆಸರಿನ ಸುಂದರ ನಗರಿ
ಮಾಯಾ ಬಾಲಚಂದ್ರ
ನೀಲ ಸಾಮ್ರಾಟನ ಪ್ರಸವ ಪ್ರಸಂಗ
ಸಂತೋಷಕುಮಾರ ಮೆಹೆಂದಳೆ ಮತ್ತು ಬೈಯ್ಯಣ್ಣ
ರಾಮ್ಸರ್ ತಾಣಗಳಲ್ಲಿ ಜೀವ ವೈವಿಧ್ಯ
ರಾ.ನಂ.ಚಂದ್ರಶೇಖರ
ಚಹಾಯಣ
ಚಂದ್ರಶೇಖರ ಹೆಗಡೆ ಬಾದಾಮಿ
ಲೇಡೀಸ್ ಬೋಗಿ
ಗೌರಿ ಚಂದ್ರಕೇಸರಿ
ಮತ್ತು ಇತರ ಬರಹಗಳು

ಮನಸೆಳೆಯುವ ಕಥೆಗಳು
ಹುದುಗಿಟ್ಟ ಪ್ರೀತಿ
ಬಿ.ಕೆ.ಮೀನಾಕ್ಷಿ
ರಾಯರ ವಿಲ್‌ನಲ್ಲಿ ಏನಿತ್ತು?
ಗೀತಾ ಕುಂದಾಪುರ
ಲಕ್ಷ್ಮಿ ಟೈಲರ್ಸ್
ದೀಪಕ್ ಕೋರಡಿ
ಮಸೂರವಿಲ್ಲದ ಒಡೆದ ಕನ್ನಡಕ
ಶ್ರವಣ ಕುಮಾರಿ
ಪರಿಸರದ ಹಿಂದೆ ಹೊರಟವ!
ಶಶಿಧರ ಹಾಲಾಡಿ
ಮತ್ತು ಇನ್ನಷ್ಟು ಕಥೆಗಳು

ಮನೋಜ್ಞ ಕವನಗಳು
ಮೆಲುನಗೆಯ ಮಂದಮಾರುತ
ಬೆಂ.ಶ್ರೀ.ರವೀಂದ್ರ
ಅವನಿಗೆ ಅವನೇ ಗೊಮ್ಮಟ
ನಾ. ಮೊಗಸಾಲೆ
ರಾಗ ರೋಗ
ಚಿಂತಾಮಣಿ ಕೊಡ್ಲೆಕೆರೆ
ವರ್ತಮಾನ
ವಾಸುದೇವ ನಾಡಿಗ್
ಓದುಗರ ವೇದಿಕೆ
ಬಿಳಿ ಕೋಟಿನ ದೇವರು!

ಚಲನಚಿತ್ರ ಲೋಕದ ಬಣ್ಣದ ಪಟಗಳು, ಚುಟುಕಗಳು ಹನಿಗವನಗಳು ಮತ್ತು ಇನ್ನಷ್ಟು ಓದಿನ ಸರಕು!

ಸಮಾಚಾರ ಸಣ್ಣದಲ್ಲ

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿ

ಬಳ್ಳಾರಿ: ಜಿಲ್ಲಾದ್ಯಂತ 65 ಕೇಂದ್ರಗಳಲ್ಲಿ ಮಾರ್ಚ್ 18 ರಿಂದ ಏಪ್ರಿಲ್ 2 ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ -1 ನಡೆಯಲಿದೆ. ಪರೀಕ್ಷಾ ದಿನದಂದು ಅವ್ಯವಹಾರಗಳನ್ನು ತಡೆಗಟ್ಟಲು ಹಾಗೂ ಪರೀಕ್ಷೆ ಸಮಯದಲ್ಲಿ ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಆದೇಶಿಸಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್‌ಆವರಣದಲ್ಲಿನ ಜೆರಾಕ್ಸ್ ಸೆಂಟರ್‌ಮತ್ತು ಇಂಟರ್ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಲಾಗಿದೆ. ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ ಎಂದು ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಮಾ.27 ರಂದು 'ನಿಧಿ ಆಪ್ಕೆ ನಿಕಟ್'

ಬಳ್ಳಾರಿ: ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ಮಾ.27 ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ನಗರದ ಕೆಎಸ್ ಆರ್ಟಿಸಿ ಸಂಸ್ಥೆಯಲ್ಲಿ 'ನಿಧಿ ಆಪ್ಕೆ ನಿಕಟ್ : ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ' ಎಂಬ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಕಾರ್ಮಿಕರ, ಪಿಂಚಣಿದಾರರ ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು ಮತ್ತು ಅರಿವು ಮೂಡಿಸುವ ಹಾಗೂ ಪ್ರಭಾವ ಬೀರುವ ಕಾರ್ಯಕ್ರಮ ಇದಾಗಿದೆ. ಉದ್ಯೋಗ ದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ ಮತ್ತು ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಸಹ ಒದಗಿಸಲಾಗುತ್ತದೆ. ಹಾಗಾಗಿ ಕಾರ್ಮಿಕರು ಪಿಂಚಣಿದಾರರು, ಉದ್ಯೋಗದಾತರು ಮಾ.27 ರಂದು ನಡೆಯುವ ನಿಧಿ ಆಪ್ಕೆ ನಿಕಟ್: ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವಿ.ಪ್ರವೀಣ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿನಿಮಾಗಳಲ್ಲಿ ಅಶ್ಲೀಲ ಸಾಹಿತ್ಯ ನಿಷೇಧಕ್ಕೆ ಒತ್ತಾಯ

ಹೊಸಪೇಟೆ: ಚಲನಚಿತ್ರಗಳಲ್ಲಿ ಮಿತಿಮೀರುತ್ತಿರುವ ಅಶ್ಲೀಲತೆ-ಹಿಂಸೆ ಹಾಗೂ ಸೆನ್ಸಾರ್‌ಮಂಡಳಿಯ ಬೇಜವಾಬ್ದಾರಿತನ ಸರಿಯಲ್ಲ ಎಂದು ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಯು. ಉಮಾದೇವಿ ಖಂಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಸಾಂಸ್ಕೃತಿಕ ಅವನತಿ ಎದ್ದು ಕಾಣುತ್ತಿದ್ದು, ಅದರಲ್ಲೂ ವಿಶೇಷವಾಗಿ ''ಕೆ.ಡಿ.'' ಚಿತ್ರದ ಅಶ್ಲೀಲ ಸಾಹಿತ್ಯದ ಹಾಡು ಹಾಗೂ ''ಟಾಕ್ಸಿಕ್'' ಚಿತ್ರದ ಟೀಸರ್ನಲ್ಲಿ ಪ್ರದರ್ಶಿತವಾಗಿರುವ ಅಶ್ಲೀಲತೆ ಮತ್ತು ಹಿಂಸೆಯ ಅಬ್ಬರವು ವಿದ್ಯಾರ್ಥಿ ಸಮುದಾಯ ಹಾಗೂ ಸಮಾಜದ ಮೇಲೆ ಅತ್ಯಂತ ಗಂಭೀರವಾದ ದುಷ್ಪರಿಣಾಮ ಬೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ವ್ಯವಸ್ಥೆಯ ಲೋಪದೋಷಗಳನ್ನು ಪ್ರಶ್ನಿಸುವ ಅಥವಾ ಜನಪರ ಆಶಯಗಳನ್ನು ಹೊಂದಿರುವ ಚಿತ್ರಗಳ ಮೇಲೆ ಸಣ್ಣ ಕಾರಣಗಳಿಗಾಗಿ ಕತ್ತರಿ ಪ್ರಯೋಗಿಸುವ ಪ್ರಾದೇಶಿಕ ಸೆನ್ಸಾರ್‌ಮಂಡಳಿಯು, ಇಂತಹ ಕೆಳಮಟ್ಟದ ಸಾಹಿತ್ಯ ಮತ್ತು ಮಿತಿಮೀರಿದ ರಕ್ತಪಾತದ ದೃಶ್ಯಗಳಿಗೆ ಅನುಮತಿ ನೀಡುತ್ತಿರುವುದು ಅದರ ದ್ವಂದ್ವ ನೀತಿಯನ್ನು ಎತ್ತಿ ತೋರಿಸುತ್ತದೆ ಎಂದು ದೂರಿದ್ದಾರೆ. ರಾಜ್ಯ ಸರಕಾರ ಕೂಡಲೇ ಮಧ್ಯಪ್ರವೇಶಿಸಿ ಇಂತಹ ಅಶ್ಲೀಲ ಹಾಗೂ ಹಿಂಸಾತ್ಮಕ ಸಿನಿಮಾಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಬಾಲಕ ಕಾಣೆ: ಪತ್ತೆಗೆ ಮನವಿ

ಬಳ್ಳಾರಿ: ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ 2 ನೇ ವಾರ್ಡ್ ನ ಮಸೀದಿ ಹಿಂದೆ ಸಂಗನಕಲ್ಲು ಗ್ರಾಮದ ನಿವಾಸಿ ಗಗನ್ ದೀಪ್ ಎನ್ನುವ 16 ವರ್ಷದ ಬಾಲಕ ಮಾ.15 ರಂದು ಮನೆಯಿಂದ ಹೋದವನು ಮನೆಗೆ ಬಾರದೇ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಮನವಿ ಮಾಡಿದ್ದಾರೆ. ಬಾಲಕನ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ದೂ.083922764661, 9480803049, ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ.08392-258100.

{ಜಿ.ಟಿ.ದೇವೇಗೌಡ } ಶಾಸಕ

ಜೆಡಿಎಸ್ ಬಿಡುವ ಪ್ರಶ್ನೆಯೇ ಇಲ್ಲ. ಒಂದು ವೇಳೆ ಜೆಡಿಎಸ್ ಪಕ್ಷದಿಂದ ಟಿಕೆಟ್ ಕೊಡದಿದ್ದರೆ ಕ್ಷೇತ್ರದ ಜನ ಹೇಳಿದಂತೆ ಕೇಳುತ್ತೇನೆ. ನಾನು ಜೆಡಿಎಸ್ ಪಕ್ಷದಲ್ಲೇ ಇದ್ದೇನೆ, ಇರುತ್ತೇನೆ. ಟಿಕೆಟ್ ಕೊಡದಿದ್ರೆ ಮತದಾರರು ನೀವು ಏನು ಹೇಳ್ತಿರಾ ಅದಕ್ಕೆ ನಾನು ಬದ್ಧ. ಅರ್ಜಿ ಹಾಕು ಅಂದ್ರೆ ಹಾಕುತ್ತೇನೆ. ನಿಮ್ಮ ಪ್ರೀತಿ ಆಶೀರ್ವಾದವೇ ನನಗೆ ದೈವ.



ಜಾತ್ರಾ, ಮಹೋತ್ಸವ ಸಕಲ ಸಿದ್ಧತೆಗೆ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅಧಿಕಾರಿಗಳಿಗೆ ಸೂಚನೆ

ಮಾರ್ಚ್ 27ರಿಂದ ವಿವಿಧ ಜಾತ್ರಾ ರಥೋತ್ಸವ

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿವಿಧ ದೇವಸ್ಥಾನಗಳ ವಾರ್ಷಿಕ ಜಾತ್ರಾ, ಮಹೋತ್ಸವ ಕುರಿತು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾತನಾಡಿದರು.

ಹೊಸಪೇಟೆ: ಮುಂಬರುವ ಮಾರ್ಚ್ 27 ರಿಂದ ಏ.4 ರವರೆಗೆ ವಿವಿಧ ದೇವಸ್ಥಾನಗಳ ಜಾತ್ರಾ ಮಹೋತ್ಸವ ಜರುಗಲಿದ್ದು, ಅತ್ಯಂತ ವಿಜೃಂಭಣೆ ಮತ್ತು ಭಕ್ತಿಪೂರ್ವಕ ಹಾಗೂ ಶಿಸ್ತುಬದ್ಧವಾಗಿ ರಥೋತ್ಸವ ಜರುಗಿಸಲು ಅಗತ್ಯ ಸಕಲ ಸಿದ್ಧತೆಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿವಿಧ ದೇವಸ್ಥಾನಗಳ ವಾರ್ಷಿಕ ಜಾತ್ರಾ ಮಹೋತ್ಸವ ಕುರಿತು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ತಾಲೂಕಿನ ಮರಿಯಮ್ಮನಹಳ್ಳಿ ಗ್ರಾಮದಲ್ಲಿ ಇದೇ ಮಾರ್ಚ್ 27 ರಂದು ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಮತ್ತು ಆಂಜನೇಯ ಸ್ವಾಮಿ ದೇವಸ್ಥಾನ ವಾರ್ಷಿಕ ರಥೋತ್ಸವ, ಮಾರ್ಚ್ 27 ರಿಂದ ಏಪ್ರಿಲ್ 4 ವರೆಗೆ ಹಂಪಿ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಬ್ರಹ್ಮರಥೋತ್ಸವ ಹಾಗೂ ಮಾರ್ಚ್ 31ರವರೆಗೆ ಜಂಬುನಾಥ ಗ್ರಾಮದ ಶ್ರೀ ಜಂಬುನಾಥೇಶ್ವರ ದೇವಸ್ಥಾನದ ವಾರ್ಷಿಕ ರಥೋತ್ಸವ ನಡೆಯಲಿದೆ ಎಂದು ಹೇಳಿದರು.

ಜಾತ್ರಾ ಮಹೋತ್ಸವಕ್ಕೆ ಜಿಲ್ಲೆಯ ನಾನಾ ಭಾಗಗಳಿಂದ ಲಕ್ಷಾಂತರ ಭಕ್ತರು ಜಾತ್ರಾ ಮಹೋತ್ಸವಕ್ಕೆ ಆಗಮಿಸುವುದರಿಂದ, ಯಾವುದೇ ಸಣ್ಣ ಲೋಪ-ದೋಷಗಳಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಜಾತ್ರೆಯ ಸಂದರ್ಭದಲ್ಲಿ ಲಕ್ಷಾಂತರ ಭಕ್ತರು ಆಗಮಿಸುವುದರಿಂದ, ಮಾರ್ಚ್ ತಿಂಗಳ ಬಿಸಿಲನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಮಾಡಬೇಕು. ವೈದ್ಯಕೀಯ ಇಲಾಖೆಯಿಂದ ತುರ್ತು ವೈದ್ಯಕೀಯ ಸೇವೆಗಳಲ್ಲಿ ಯಾವುದೇ ಕೊರತೆಯಾಗದಂತೆ ಅಧಿಕಾರಿಗಳು ಅಂಬುಲೆನ್ಸ್ ಸಹಿತ ಸಿಬ್ಬಂದಿ ನಿಯೋಜಿಸಬೇಕು ಎಂದು ಸೂಚಿಸಿದರು.

ಜಾತ್ರೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಲು ಅಗತ್ಯವಿರುವ ಕುಡಿಯುವ ನೀರು, ಶೌಚಾಲಯ, ನೆರಳಿನ ವ್ಯವಸ್ಥೆ, ರಾತ್ರಿ ವೇಳೆ ಆಗಮಿಸುವ ಭಕ್ತರಿಗೆ ಅನುಕೂಲವಾಗುವಂತೆ ಬೀದಿ ದೀಪ ಅಳವಡಿಸಿ ಬೆಳಕಿನ ವ್ಯವಸ್ಥೆ ಕಲ್ಪಿಸುವುದರ ಜತೆಗೆ ಎಲ್ಲಾ ರೀತಿಯ ಮೂಲಸೌಕರ್ಯಗಳ ಒದಗಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಿದರು.

ದರ್ಶನಕ್ಕೆ ನೂಕು ನುಗ್ಗಲು ಉಂಟಾಗದಂತೆ ತಾತ್ಕಾಲಿಕ ಬ್ಯಾರಿಕೇಡ್ ಅಳವಡಿಸಿ ಸರದಿ ಮೂಲಕ ಭಕ್ತರ ದಟ್ಟಣೆಯನ್ನು ಸುಗಮವಾಗಿ ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ ಅವರು, ಭಕ್ತರ ಸುರಕ್ಷತೆಯ ದೃಷ್ಟಿಯಿಂದ ಈ ಬಾರಿ ಭದ್ರತೆಯನ್ನು ಹೆಚ್ಚಿಸಲಾಗುವುದು. ಕಳೆದ ಬಾರಿಗಿಂತ ಹೆಚ್ಚಿನ ಸಂಖ್ಯೆಯ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು, ಜೊತೆಗೆ ತಾತ್ಕಾಲಿಕ ಪೊಲೀಸ್ ನಿಯಂತ್ರಣ ಕೊಠಡಿ ಸ್ಥಾಪಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಾತ್ರೆ ಹಿನ್ನಲೆಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಇದಕ್ಕಾಗಿ ಸ್ಥಳೀಯ ಸಂಸ್ಥೆಗಳ ವತಿಯಿಂದ ಸಿಬ್ಬಂದಿ ನಿಯೋಜಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. ಜಾತ್ರಾ ರಥೋತ್ಸವ ರಥ ಸಂಚರಿಸುವ ಬೀದಿಗಳಲ್ಲಿನ ಗೂಡಂಗಡಿಗಳ ತೆರವುಗೊಳಿಸಿ ರಥ ಮುಕ್ತ ಸಂಚಾರಕ್ಕೆ ಕ್ರಮವಹಿಸಬೇಕು ಎಂದರು.

ಜಂಬುನಾಥೇಶ್ವರ ದೇವಸ್ಥಾನ ಸಂಪರ್ಕ ಕಲ್ಪಿಸಲು ರಸ್ತೆ ಕಾಮಗಾರಿ ವಿವಿಧ ಕಾರಣಗಳಿಂದ ಅರ್ಧಕ್ಕೆ ಮೊಟಕಾಗಿದ್ದು, ತ್ವರಿತವಾಗಿ ಪೂರ್ಣಗೊಳಿಸಿ ಭಕ್ತಾಧಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಾತ್ರಾ, ಮಹೋತ್ಸವ ವೇಳೆ ವಿದ್ಯುತ್ ವ್ಯತ್ಯಯ ಆಗದಂತೆ ಜೆಸ್ಕಾಂ ಅಧಿಕಾರಿಗಳು ಕ್ರಮವಹಿಸಬೇಕು. ಜಾತ್ರಾ ಸಂದರ್ಭದಲ್ಲಿ ಅಗ್ನಿ ಅವಘಡ ಸಂಭವಿಸದಂತೆ ಅಗ್ನಿಶಾಮಕ ದಳ ಸನ್ನದ್ದರಾಗಿರಬೇಕು. ಕಲ್ಯಾಣ ಕರ್ನಾಟಕ ಸಾರಿಗೆ ವತಿಯಿಂದ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ, ಹಿಂದೂ ಧಾರ್ಮಿಕ ದತ್ತಿ ಇಲಾಖೆ ಸಹಾಯಕ ಆಯುಕ್ತೆ ಹೆಚ್. ಸವಿತಾ ಸೇರಿದಂತೆ ಇತರರಿದ್ದರು.

ಹಂಪಿ ವಿರೂಪಾಕ್ಷ ದೇವಸ್ಥಾನದ ದರ್ಶನಕ್ಕೆ ಬರುವ ಭಕ್ತರಿಗೆ ಹೊಳೆಯಲ್ಲಿ ಸ್ನಾನ ಮಾಡಿದ ನಂತರ ಅವರಿಗೆ ಬಟ್ಟೆ ಬದಲಿಸಲು ಅನುಕೂಲವಾಗುವಂತೆ ತಾತ್ಕಾಲಿಕ ಶೆಡ್ (ಟೆಂಟ್) ನಿರ್ಮಿಸಬೇಕು. ಭಕ್ತಾಧಿಗಳು ಸ್ನಾನ ಮಾಡುವ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಪರಿಣಿತ ಈಜುಗಾರರನ್ನು ಲೈಫ್ ಜಾಕೆಟ್ ನಂತಹ ಅಗತ್ಯ ಸೌಕರ್ಯಗಳೊಂದಿಗೆ ನಿಯೋಜಿಸಬೇಕು.

-ಕವಿತಾ ಎಸ್ ಮನ್ನಿಕೇರಿ, ಜಿಲ್ಲಾಧಿಕಾರಿಗಳು, ವಿಜಯನಗರ

ಉಪಾಹಾರ ಪರಿಶೀಲಿಸಿ ನಂತರ ಭಕ್ತರಿಗೆ ವಿತರಣೆ

ಜಾತ್ರೆಯ ಸಂದರ್ಭದಲ್ಲಿ ಭಕ್ತಾಧಿಗಳು, ದೇವಸ್ಥಾನದ ವತಿಯಿಂದ ಅನ್ನ ದಾಸೋಹ ಕಾರ್ಯ ನಡೆಯಲಿದೆ. ಈ ವೇಳೆ ಭಕ್ತರ ಹಾಗೂ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಆಹಾರ ಸುರಕ್ಷತಾ ಅಧಿಕಾರಿಗಳಿಂದ ಉಪಾಹಾರ ಪರಿಶೀಲಿಸಿ ನಂತರ ಭಕ್ತರಿಗೆ ವಿತರಣೆ ಮಾಡಬೇಕು. ಹವಾಮಾ ವತಿಯಿಂದ ಸಾರ್ವಜನಿಕರು, ಭಕ್ತರು ತ್ಯಜಿಸಿದ ಬಟ್ಟೆಗಳನ್ನು ಒಂದೆಡೆ ಹಾಕಲು ಪವಿತ್ರ ಕುಂಡ ಸ್ಥಾಪಿಸಲಾಗಿದ್ದು, ಭಕ್ತರು ಸಾರ್ವಜನಿಕರು ತಮ್ಮ ಬಟ್ಟೆಗಳನ್ನು ಎಲ್ಲೆಂದರಲ್ಲಿ ಎಸೆಯದೆ ಪವಿತ್ರ ಕುಂಡದಲ್ಲಿ ಹಾಕಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಹೇಳಿದರು.

ಆತಂಕ, ಭಯವಿಲ್ಲದೆ ಪರೀಕ್ಷೆ ಎದುರಿಸಿ

ರಾಯಚೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಚಂದ್ರಬಂಡಾ ಸರಕಾರಿ ಪ್ರೌಢ ಶಾಲೆಗೆ ಭೇಟಿ ನೀಡಿ, ಅವರು ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ರಾಯಚೂರು: ವಿದ್ಯಾರ್ಥಿಗಳು ಯಾವುದೇ ರೀತಿಯ ಆತಂಕ, ಭಯಕ್ಕೊಳಗಾಗದೆ ಆತ್ಮವಿಶ್ವಾಸದಿಂದ ಪರೀಕ್ಷೆಗಳನ್ನು ಎದುರಿಸಬೇಕು. ವರ್ಷವಿಡಿ ನೀವು ಅಭ್ಯಾಸ ಮಾಡಿರುವ ಪರಿಶ್ರಮ ನಿಮ್ಮ ಯಶಸ್ಸಿಗೆ ದಾರಿ ತೋರಲಿದೆ. ಆದ್ದರಿಂದ ಮನಸ್ಸನ್ನು ಶಾಂತವಾಗಿಟ್ಟುಕೊಂಡು ಪ್ರಶ್ನೆಪತ್ರಿಕೆಯನ್ನು ಗಮನದಿಂದ ಓದಿ, ಗೊತ್ತಿರುವ ಪ್ರಶ್ನೆಗಳಿಗೆ ಸರಿಯಾದ ಕ್ರಮದಲ್ಲಿ ಉತ್ತರಗಳನ್ನು ಬರೆಯಬೇಕು ಎಂದು ಮಾಜಿ ಶಾಸಕ ತಿಪ್ಪರಾಜು ಹವಲ್ದಾರಗ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ರಾಯಚೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಚಂದ್ರಬಂಡಾ ಸರ್ಕಾರಿ ಪ್ರೌಢ ಶಾಲೆಗೆ ಭೇಟಿ ನೀಡಿ, ಅವರು ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು.

ಪರೀಕ್ಷೆಗೆ ಹಾಜರಾಗುತ್ತಿದ್ದ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದ ಅವರು, ಸಿಹಿ ಹಾಗೂ ಪೆನ್ನಗಳನ್ನು ಹಾಗೂ ಗುಲಾಬಿ ಹೂ ವಿತರಿಸುವ ಮೂಲಕ ಪ್ರೋತ್ಸಾಹ ನೀಡಿದರು.

ಪರೀಕ್ಷೆಯ ಸಮಯದಲ್ಲಿ ಆತುರ ಪಡುವುದು ಬೇಡ, ಸಮಯ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಮೊದಲು ಸುಲಭವಾದ ಪ್ರಶ್ನೆಗಳನ್ನು ಆಯ್ಕೆ ಮಾಡಿ, ನಂತರ ಕಷ್ಟವಾದ ಪ್ರಶ್ನೆಗಳತ್ತ ಗಮನ ಹರಿಸಬೇಕು. ಬರಹ ಸ್ಪಷ್ಟವಾಗಿರಲಿ ಮತ್ತು ಉತ್ತರಗಳು ಅರ್ಥಪೂರ್ಣವಾಗಿರಲಿ ಎಂದು ಸಲಹೆ ನೀಡಿದರು.

ಶಿಕ್ಷಣವು ಪ್ರತಿಯೊಬ್ಬರ ಜೀವನದಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತದೆ. ಎಸ್.ಎಸ್.ಎಲ್.ಸಿ ಪರೀಕ್ಷೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಹಂತವಾಗಿದ್ದು, ಇದರಲ್ಲಿ ಉತ್ತಮ ಸಾಧನೆ ಮಾಡಲು ಶ್ರದ್ಧೆ ಮತ್ತು ಶಿಸ್ತು ಅಗತ್ಯ ಎಂದು ಹೇಳಿದರು. ಪೋಷಕರು ಮತ್ತು ಶಿಕ್ಷಕರು ನೀಡಿರುವ ಮಾರ್ಗದರ್ಶನವನ್ನು ಪಾಲಿಸಿ, ತಮ್ಮ ಗುರಿಯನ್ನು ಸಾಧಿಸಬೇಕು ಎಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಶರಣಪ್ಪ, ಶಂಕರಗೌಡ ಮಿರ್ಜಾಪುರ, ಕೇಶವರೆಡ್ಡಿ, ಅಚ್ಯುತ್ ರೆಡ್ಡಿ, ಮಹೇಶ್, ಮಹೇಶ್, ನಾರಾಯಣ ಕುಲಕರ್ಣಿ ಪೂರತಿಪ್ಲಿ, ಸುರೇಶ್ ಪಲ್ಕಂದೊಡ್ಡಿ, ಮಹಾದೇವ, ನರಸಿಂಹ, ದಸ್ತಗಿರಿ, ಮಲ್ಲೇಶ್ ಚಂದ್ರಬಂಡಾ ಸೇರಿದಂತೆ ಶಿಕ್ಷಕರು ಪಾಲಕರು ಉಪಸ್ಥಿತರಿದ್ದರು .

ಟಿಎಚ್‌ಎಂ ಲೇ ಔಟ್‌ನಲ್ಲಿ ಇಫ್ತಾರ್ ಕೂಟ

ನಗರದ ನ್ಯಾಯಾಲಯದ ಮುಂಭಾಗದಲ್ಲಿರುವ ಟಿ ಎಚ್ ಎಂ ಲೇಔಟ್ ನಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪನವರು ರಂಜಾನ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರಿಗೆ ಇಫ್ತಿಯಾರ್‌ಕೂಟ ಆಯೋಜಿಸಿ ಸಾಮರಸ್ಯ ಮೆರೆದರು.

ಹರಪನಹಳ್ಳಿ: ನಗರದ ನ್ಯಾಯಾಲಯದ ಮುಂಭಾಗದಲ್ಲಿರುವ ಟಿ.ಎಚ್‌ಎಂ. ಲೇಔಟ್ ನಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪನವರು ರಂಜಾನ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರಿಗೆ ಇಫ್ತಿಯಾರ್‌ಕೂಟ ಆಯೋಜಿಸಿ ಸಾಮರಸ್ಯ ಮೆರೆದರು. ಬೇರೆ ಧರ್ಮ, ಜಾತಿ, ಪಂಥವರನ್ನು ಕೀಳಾಗಿ ಕಾಣುವ ಹೀಯಾಳಿಸುವ ಈಗಿನ ವಾತಾವರಣದಲ್ಲಿ ಎಂ.ವಿ. ಅಂಜಿನಪ್ಪ ರವರು ಸಾಮರಸ್ಯದ ವ್ಯಕ್ತಿಗಳ ಅಗತ್ಯ ವಿದೆ ಎಂದು ತಾಲೂಕಿನ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜಕೀಯ ಉದ್ದೇಶ ಈಡೇರಿಕೆಗಾಗಿ ವಿವಿಧ ಧರ್ಮಿಯರು ನಡುವೆ ಸಂಘರ್ಷ ಸೃಷ್ಟಿಸಲಾಗುತ್ತಿದೆ. ವಾಸ್ತವವಾಗಿ ಜನ ಸಾಮಾನ್ಯರ ನಡುವೆ ಪ್ರೀತಿ, ವಿಶ್ವಾಸ ಇದೆ ಎಂದು ಹರಪನಹಳ್ಳಿ ತಾಲೂಕಿನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮುಸ್ಲಿಂ ಮುಖಂಡರ ಜೊತೆ ಕಾಂಗ್ರೆಸ್ ಮುಖಂಡರಾದ ಪಿ.ಮಹಾಬಲೇಶ್ವರ ಗೌಡ, ವೈ.ಕೆ.ಬಿ ದುರುಗಪ್ಪ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಐಗೋಳ ಚಿದಾನಂದ, ಸಾಹಿತಿ ಇಸ್ಮಾಯಿಲ್ ಎಲಿಗಾರ್,ಲಾಟಿ ದಾದಾಪೀರ್,ಎಲ್. ಮಂಜ್ಯಾನಾಯ್ಕ, ಗುಡಿ ನಾಗರಾಜ್, ಎಂ.ವಿ.ಕೃಷ್ಣಕಾಂತ್, ಅಂಜಿನಪ್ಪ, ಬಡಗಿ ರಾಹಮತ್ ಉಲ್ಲಾ, ನದಿಮಾ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಮಹನೀಯರ ಜಯಂತಿ ಅದ್ಧೂರಿ ಆಚರಣೆ

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಮಾತನಾಡಿದರು.

ಬಳ್ಳಾರಿ: ಜಿಲ್ಲಾ ಕೇಂದ್ರದಲ್ಲಿ ಮಾ.23 ರಂದು ದೇವರ ದಾಸಿಮಯ್ಯ ಜಯಂತಿ, ಮಾ.28 ರಂದು ಅಗ್ನಿಬನ್ನಿರಾಯ ಜಯಂತಿ ಹಾಗೂ ಮಾ.31 ರಂದು ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ, ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಹೇಳಿದರು.

ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹನೀಯರ ಜಯಂತಿ ಕಾರ್ಯಕ್ರಮ ಆಚರಣೆ ಕುರಿತು ಅಧಿಕಾರಿಗಳು, ಸಮುದಾಯದ ಮುಖಂಡರೊಂದಿಗೆ ಏರ್ಪಡಿಸಿದ್ದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾ.23 ರಂದು ದೇವರ ದಾಸಿಮಯ್ಯ ಜಯಂತಿ, ಮಾ.28 ರಂದು ಅಗ್ನಿಬನ್ನಿರಾಯ ಜಯಂತಿ ಕಾರ್ಯಕ್ರಮಗಳನ್ನು ನಗರದ ಹೊಂಗಿರಣ ಸಭಾಂಗಣದಲ್ಲಿ ಅಚ್ಚುಕಟ್ಟಾಗಿ ಆಯೋಜಿಸಬೇಕು. ಅದೇರೀತಿಯಾಗಿ ಮಾ.31 ರಂದು ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ನಗರದ ಪಾರ್ಶ್ವನಾಥ ಬಸದಿಯಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗುವುದು. ಇದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಹೇಳಿದರು. ಜಯಂತಿ ಆಚರಣೆಯ ಸಂದರ್ಭದಲ್ಲಿ ಡಿಜೆ ಬಳಕೆ ಮತ್ತು ಪಟಾಕಿ ಸಿಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಕಾರ್ಯಕ್ರಮದ ವೇದಿಕೆಯಲ್ಲಿ ಮಾತ್ರ ಬ್ಯಾನರ್ ಅಳವಡಿಸಲು ಅವಕಾಶವಿದ್ದು, ನಗರದ ಇತರ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್‌ಹಾಕುವುದನ್ನು ನಿರ್ಬಂಧಿಸಲಾಗಿದೆ. ಶಾಂತಿ-ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಭಕ್ತಿ-ಭಾವದಿಂದ ಮಹನೀಯರ ಜಯಂತಿ ಆಚರಿಸೋಣ. ಇದಕ್ಕೆ ಎಲ್ಲರ ಸಹಕಾರ ಅಗತ್ಯವಿದೆ ಎಂದು ತಿಳಿಸಿದರು.

ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರಿಗೆ, ಸಂಘ- ಸಂಸ್ಥೆಗಳ ಪದಾಧಿಕಾರಿಗಳಿಗೆ ವಿತರಿಸಿ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು. ಮಹನೀಯರ ಆಚಾರ-ವಿಚಾರಗಳನ್ನು ಪರಿಣಿತರಿಂದ ವಿಶೇಷ ಉಪನ್ಯಾಸ ಮೂಲಕ ತಲುಪಿಸಲು ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಬೇಕು. ವಚನ ಸಂಗೀತ ಗಾಯನ ಏರ್ಪಡಿಸಬೇಕು ಎಂದರು. ಜಯಂತಿ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ, ಯಶಸ್ವಿಗೊಳಿಸಬೇಕು ಎಂದರು. ಇದೇ ವೇಳೆ ಸಮಾಜದ ಮುಖಂಡರು ಜಯಂತಿ ಕಾರ್ಯಕ್ರಮ ಯಶಸ್ವಿಗೆ ತಮ್ಮ ಸಲಹೆ-ಸೂಚನೆ ನೀಡಿದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಡಿಡಿಪಿಐ, ಮಹಾನಗರ ಪಾಲಿಕೆ, ಪೊಲೀಸ್ ಅಧಿಕಾರಿಗಳು, ತೋಟಗಾರಿಕೆ ಅಧಿಕಾರಿಗಳು ಮತ್ತು ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಯುಗಾದಿ-ರಂಜಾನ್ ಹಬ್ಬದ ಶಾಂತಿ ಸಭೆ

ಯುಗಾದಿ-ರಂಜಾನ್ ಹಬ್ಬದ ನಿಮಿತ್ಯ ಪೊಲೀಸ್ ಇಲಾಖೆ ವತಿಯಿಂದ ಸ್ಥಳೀಯ ಆರಕ್ಷಕ ಠಾಣೆಯಲ್ಲಿ ಮಂಗಳವಾರ ಸಾಯಂಕಾಲ ಶಾಂತಿ ಸಭೆ ಜರುಗಿತು.

ಮುದಗಲ್: ಯುಗಾದಿ ರಂಜಾನ್ ಹಬ್ಬದ ನಿಮಿತ್ಯ ಪೊಲೀಸ್ ಇಲಾಖೆ ವತಿಯಿಂದ ಸ್ಥಳೀಯ ಆರಕ್ಷಕ ಠಾಣೆಯಲ್ಲಿ ಮಂಗಳವಾರ ಸಾಯಂಕಾಲ ಶಾಂತಿ ಸಭೆ ಜರುಗಿತು.

ಪಿಎಸ್‌ಐ ವೆಂಕಟೇಶ್ ಮಾಡಗೇರಿ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೋಮು ಸೌಹಾರ್ದತೆಗೆ ಐತಿಹಾಸಿಕ ಮುದಗಲ್ಲ ಪಟ್ಟಣವು ರಾಜ್ಯದಲ್ಲಿಯೇ ಮಾದರಿಯಾಗಿದೆ. ಹಿಂದೂಗಳಾಗಲಿ-ಮುಸ್ಲಿಮರಾಗಲಿ ಯಾವುದೇ ವದಂತಿಗಳಿಗೆ ಕಿವಿಗೊಡದೆ, ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಯುಗಾದಿ ಮತ್ತು ಈದ್‌ಉಲ್‌ಫಿತರ್‌ಹಬ್ಬ ಆಚರಿಸಬೇಕು. ಸಮಾಜದ ಶಾಂತಿ ಸುವ್ಯವಸ್ಥೆಯನ್ನು ಕದಡುವ ಕಿಡಿಗೇಡಿಗಳ ಬಗ್ಗೆ ಎಚ್ಚರದಿಂದಿದ್ದು ಅಂತಹವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗುರು ಬಸಪ್ಪ ಸಜ್ಜನ್, ಜಮೀರ್‌ಅಹಮದ್ ಖಾಜಿ, ಅಮೀರ್‌ಬೇಗ್ ಉಸ್ತಾದ್, ಗುಂಡಪ್ಪ ಗಂಗಾವತಿ, ಅಜ್ಮೀರ್‌ಬೆಳ್ಳಿಕಟ್, ನ್ಯಾಮತುಲ್ಲಾ ಖಾದ್ರಿ, ಶಿವಗ್ಯಾನಪ್ಪ, ನಾಗರಾಜ ತಳವಾರ, ವೆಂಕಟೇಶ ಹಿರೇಮನಿ, ಶರಣಪ್ಪ ಕಟ್ಟಿಮನಿ, ಬಸವರಾಜ ಬಂಕದಮನಿ, ಕೃಷ್ಣ ಚಲುವಾದಿ, ಹುಲಗಪ್ಪ ಚಲುವಾದಿ, ಸಂಜು ಚಲುವಾದಿ, ಮಹಾಂತೇಶ ಭೋವಿ ಇದ್ದರು.

ತಾಲೂಕಿನಲ್ಲಿ ಭ್ರಷ್ಟಾಚಾರದ ಅಟ್ಟಹಾಸ | ಗ್ರಾಮ ಪಂಚಾಯತ್ ಅನುದಾನ ಲೂಟಿ | ತನಿಖೆ ಹೆಸರಲ್ಲಿ ಕಾಲಹರಣದ ಆರೋಪ

ಅಭಿವೃದ್ಧಿ ಶೂನ್ಯ, ಬೋಗಸ್ ಬಿಲ್‌ಗಳದ್ದೇ ಹವಾ

ಶ್ರೀಕಾಂತ ಆರ್‌ಜಿ ಲಿಂಗಸೂಗೂರು:

ತಾಲೂಕಿನ ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಕೆಲಸಗಳು ಕೇವಲ ಕಾಗದದ ಮೇಲೆ ಸೀಮಿತವಾಗಿದ್ದು, ಯಾವುದೇ ಕೆಲಸ ಮಾಡದೆಯೇ ನೂರಕ್ಕೆ ನೂರರಷ್ಟು ಹಣ ಪಾವತಿ ಮಾಡಿಕೊಳ್ಳುವ ಮೂಲಕ ಕೋಟ್ಯಂತರ ರು. ಸಾರ್ವಜನಿಕ ಹಣ ದುರ್ಬಳಕೆಯಾಗುತ್ತಿದೆ. ಸರಕಾರಿ ಅನುದಾನದ ದುರ್ಬಳಕೆ ಮಿತಿ ಮೀರಿದ್ದು, ಪಂಚಾಯತ್ ರಾಜ್ ಇಲಾಖೆಯಿಂದ ಹಿಡಿದು ಶಿಕ್ಷಣ ಮತ್ತು ವಸತಿ ನಿಲಯಗಳವರೆಗೆ ಭ್ರಷ್ಟಾಚಾರದ ಜಾಲ ವ್ಯಾಪಿಸಿದೆ.

ಗ್ರಾಮ ಪಂಚಾಯತ್ಗಳಲ್ಲಿ ನಡೆದಿರುವ ಅವ್ಯವಹಾರದ ಕುರಿತು ದೂರು ನೀಡಿದರೂ ಅಧಿಕಾರಿಗಳು ಕೇವಲ ತನಿಖೆ ಹಂತದಲ್ಲಿದೆ'' ಎಂಬ ಹಾರಿಕೆ ಉತ್ತರದ ಮೂಲಕ ಕಾಲಹರಣ ಮಾಡುತ್ತಿದ್ದಾರೆ ಎಂದು ತಾಲೂಕಿನ ಹೋರಾಟಗಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿ ವರ್ಷದಂತೆ ಈ ವರ್ಷವೂ ಮಾರ್ಚ್ ತಿಂಗಳ ಅಂತ್ಯದೊಳಗೆ ಅನುದಾನ ಖರ್ಚು ಮಾಡಬೇಕೆಂಬ ಮೇಲಧಿಕಾರಿಗಳ ಸೂಚನೆಯನ್ನು ಬಂಡವಾಳ ಮಾಡಿಕೊಂಡಿರುವ ಕೆಲವು ಭ್ರಷ್ಟ ಅಧಿಕಾರಿಗಳು, ರಾತ್ರೋರಾತ್ರಿ ಬೋಗಸ್ ಬಿಲ್ಗಳನ್ನು ಸೃಷ್ಟಿಸುತ್ತಿದ್ದಾರೆ. ಕ್ಷೇತ್ರದಲ್ಲಿ ವಾಸ್ತವವಾಗಿ ಯಾವುದೇ ಕೆಲಸ ನಡೆದಿಲ್ಲದಿದ್ದರೂ, ಅನುದಾನವನ್ನು ಸಂಪೂರ್ಣವಾಗಿ ಖಾಲಿ ಮಾಡುವ ಭರದಲ್ಲಿ ಸರಕಾರಿ ಖಜಾನೆಗೆ ಕನ್ನ ಹಾಕಲಾಗುತ್ತಿದೆ.

ತಾಲೂಕಿನ 30 ಗ್ರಾಮ ಪಂಚಾಯತ್ಗಳಲ್ಲಿ ಕೋಟ್ಯಂತರ ರೂಪಾಯಿ ಹಣ ದುರ್ಬಳಕೆಯಾಗಿರುವ ಬಗ್ಗೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್ ಅವರಿಗೆ ಈಗಾಗಲೇ ದೂರು ನೀಡಲಾಗಿದೆ. ಆದರೆ ದೂರು ನೀಡಿ ತಿಂಗಳುಗಳೇ ಕಳೆದರೂ, ಯಾವುದೇ ಕ್ರಮ ಕೈಗೊಂಡಿಲ್ಲ. ತನಿಖೆ ನಡೆಯುತ್ತಿದೆ ಎನ್ನುವ ಅಧಿಕಾರಿಗಳ ಮೌನವು ಭ್ರಷ್ಟರಿಗೆ ರಕ್ಷಣೆ ನೀಡುತ್ತಿರುವಂತಿದೆ ಎಂಬ ಸಂಶಯ ಸಾರ್ವಜನಿಕ ವಲಯದಲ್ಲಿ ಮೂಡಿದೆ.

ಕ್ಷೇತ್ರದ ಅಭಿವೃದ್ಧಿಗೆ ಹಣವಿಲ್ಲ, ಅನುದಾನ ಬರುತ್ತಿಲ್ಲ ಎಂದು ಹೇಳುವ ಶಾಸಕರು, ಅಧಿಕಾರಿಗಳ ಜೇಬು ಸೇರುತ್ತಿರುವ ಕೋಟ್ಯಂತರ ರೂಪಾಯಿಗಳ ಬಗ್ಗೆ ಏಕೆ ಮೌನ ವಹಿಸಿದ್ದಾರೆ ? ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಈ ಲೂಟಿಯನ್ನು ತಡೆದು, ಆ ಹಣವನ್ನು ಕ್ಷೇತ್ರದ ಜನರ ನೈಜ ಕೆಲಸಗಳಿಗೆ ಬಳಸುವಂತೆ ಶಾಸಕರು ಅಧಿಕಾರಿಗಳಿಗೆ ಚಾಟಿ ಬೀಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಇಲಾಖೆ, ಅಲ್ಪಸಂಖ್ಯಾಂತರ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ದೊಡ್ಡ ಮಟ್ಟದ ಹಗರಣ ನಡೆಯುತ್ತಿದೆ. ವಿದ್ಯಾರ್ಥಿಗಳಿಗೆ ಅಗತ್ಯವಿರುವ ಆಹಾರ ಧಾನ್ಯಗಳು ಮತ್ತು ಸಾಮಗ್ರಿಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರೈಕೆ ಮಾಡದೆಯೇ, ನಕಲಿ ದಾಖಲೆ ಸೃಷ್ಟಿಸಿ ಬಿಲ್ ಪಾವತಿ ಮಾಡಿಕೊಳ್ಳಲಾಗುತ್ತಿದೆ. ಮಕ್ಕಳ ಹಸಿವಿನಲ್ಲೂ ಅಧಿಕಾರಿಗಳು ಪಾಲನ್ನು ಹುಡುಕುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಕ್ಷೇತ್ರದ ಶಾಸಕರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ತಕ್ಷಣವೇ ಎಚ್ಚೆತ್ತುಕೊಂಡು ಈ ಎಲ್ಲಾ ಇಲಾಖೆಗಳ ಸಮಗ್ರ ತನಿಖೆಗೆ ವಿಶೇಷ ತಂಡವನ್ನು ರಚಿಸಬೇಕು. ಮಾರ್ಚ್ ಅಂತ್ಯದೊಳಗೆ ಹಣ ಖಾಲಿ ಮಾಡುವ ಭರದಲ್ಲಿ ನಡೆಯುತ್ತಿರುವ ಈ ಬೋಗಸ್ ಬಿಲ್ ದಂಧೆಯನ್ನು ತಡೆಯದಿದ್ದರೆ, ದಾಖಲೆ ಸಮೇತ ಲೋಕಾಯುಕ್ತಕ್ಕೆ ದೂರು ನೀಡಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಾಲೂಕಿನ ಪ್ರಗತಿಪರ ಸಂಘಟನೆಗಳ ಮುಖಂಡರು ಎಚ್ಚರಿಸಿದ್ದಾರೆ.

ಸರಣಿ ಲೂಟಿಯಿಂದ ಅಭಿವೃದ್ಧಿ ಕುಂಠಿತ

ಲ್ಯಾಂಡ್ ಆರ್ಮಿ,ನಿರ್ಮಿತಿ ಕೇಂದ್ರ, ಲೋಕೋಪಾಯೋಗಿ ಇಲಾಖೆ. ಕೆ.ಕೆ.ಆರ್.ಡಿ.ಬಿಯಲ್ಲಿ ವಿಶೇಷವಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಕೋಟ್ಯಂತರ ರು. ಅನುದಾನವು ಗುಣಮಟ್ಟವಿಲ್ಲದ ಕಾಮಗಾರಿ ಅಥವಾ ಕೆಲಸ ಮಾಡದೆಯೇ ಬಿಲ್ ಮಾಡುವ ಮೂಲಕ ಪೋಲಾಗುತ್ತಿದೆ. ಶಿಕ್ಷಣ ಮತ್ತು ಶಿಶು ಅಭಿವೃದ್ಧಿ ಇಲಾಖೆಗಳಲ್ಲಿ ಅನುದಾನದ ಹೆಸರಿನಲ್ಲಿ ಅನಗತ್ಯ ಖರ್ಚು ತೋರಿಸಿ ಹಣ ಲೂಟಿ ಮಾಡಲಾಗುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿನ ನಗರದ ಅಭಿವೃದ್ಧಿ ಕಾಮಗಾರಿಗಳು ಕೇವಲ ಕಾಗದದ ಮೇಲೆ ಸೀಮಿತವಾಗಿವೆ. ಕೇವಲ ಪಂಚಾಯತ್ಗಳಷ್ಟೇ ಅಲ್ಲದೆ, ವಿವಿಧ ಇಲಾಖೆಗಳಲ್ಲಿ ಭ್ರಷ್ಟಾಚಾರದ ಬೇರುಗಳು ಆಳವಾಗಿ ಇಳಿದಿವೆ. ಇಲಾಖೆಗಳ ಸರಣಿ ಲೂಟಿಯಿಂದ ತಾಲೂಕಿನ ಅಭಿವೃದ್ಧಿ ಕುಂಠಿತಗೊಳ್ಳುತ್ತಿದೆ.

ಪ್ರತಿ ವರ್ಷ ಇದೇ ಸಮಸ್ಯೆ ಆಗಿದೆ, ನಾವು ಹೋರಾಟ ಮಾಡುವುದು ವ್ಯರ್ಥವಾಗಿದೆ. ಕೆಲಸ ಜೀರೋ, ಪಾವತಿ ನೂರು ಪ್ರತಿಶತ ಎನ್ನುವಂತಾಗಿದೆ ತಾಲೂಕಿನ ಸ್ಥಿತಿ. ಸಾರ್ವಜನಿಕರ ತೆರಿಗೆ ಹಣವನ್ನು ಅಧಿಕಾರಿಗಳು ಮತ್ತು ಗುತ್ತಿಗೆದಾರರು ಹಂಚಿಕೊಳ್ಳುತ್ತಿರುವುದು ಖಂಡನೀಯ. ತಾಲೂಕಿನಲ್ಲಿ ಕಳೆದ ಕೆಲವು ತಿಂಗಳ ಹಣಕಾಸು ವ್ಯವಹಾರಗಳ ಬಗ್ಗೆ ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸಬೇಕು.

-ಶಿವಪುತ್ರಗೌಡ ನಂದಿಹಾಳ, ಜಿಲ್ಲಾಧ್ಯಕ್ಷರು ಕರ್ನಾಟಕ ರಾಜ್ಯ ರೈತ ಸಂಘ

ಸಮಾಚಾರ ಸಣ್ಣದಲ್ಲ

ಉಚಿತ ಆರೋಗ್ಯ ತಪಾಸಣಾ ಶಿಬಿರ

ಧಾರವಾಡ: ತಾಲೂಕಿನ ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಕರ್ತೃ ಶ್ರೀಗುರು ಶಾಂತಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವದ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಯಶಸ್ವಿಯಾಗಿ ಜರುಗಿದವು. ಎಸ್.ಡಿ.ಎಂ. ನಾರಾಯಣ ಹಾರ್ಟ್ ಸೆಂಟರ್‌ವತಿಯಿಂದ ಹೃದಯ ರೋಗತಜ್ಞ ಡಾ. ವಿನಯಕುಮಾರ ಪಿ. ತಂಡ ಬಿ.ಪಿ., ಆರ್‌ಬಿಎಸ್, ಇಸಿಜಿ ಮತ್ತು ಎಕೋ ತಪಾಸಣೆ ಮಾಡಿದ್ದು, ಸುಮಾರು 177 ಜನರು ಪ್ರಯೋಜನ ಪಡೆದರು. ನಗರದ ಶಿವಾಜಿ ಸರ್ಕಲ್ ಬಳಿಯ ಆರ್ಥೋ ಕೇರ್‌ಕ್ಲಿನಿಕ್ ವತಿಯಿಂದ ಎಲುಬು-ಕೀಲು ತಜ್ಞ ವೈದ್ಯ ಡಾ. ವಿಕಾಸ ತಿಗಡಿ ಅವರು ಮಂಡಿನೋವು, ಕೀಲು ಸವಕಳಿ, ಬೆನ್ನು ಮೂಳೆ ಮತ್ತು ಕುತ್ತಿಗೆ ನೋವು, ಕೈ-ಕಾಲು ಸೆಳೆತ, ಎಲುಬು ಹಾಗೂ ನರರೋಗಗಳು, ವಕ್ರಕಾಲು, ಸಂದಿವಾತ, ಅರ್ಥೋಸ್ಕೋಪಿ ಚಿಕಿತ್ಸೆ 85 ಜನರು ಪಡೆದರು. ಲೈನ್ ಬಜಾರದ ಸಿಂಚನಾ ಕಣ್ಣು ಮತ್ತು ಮಲ್ಟಿಸ್ಪೆಶಾಲಿಟಿ ಆಸ್ಪತ್ರೆ ವತಿಯಿಂದ ನೇತ್ರತಜ್ಞ ಡಾ. ಮಹೇಶ ಎನ್.ಬಿ. ಅವರು 84 ಜನರಿಗೆ ಉಚಿತ ನೇತ್ರ ತಪಾಸಣೆ ನಡೆಸಿ, 4 ಜನರಿಗೆ ಶಸ್ತ್ರಚಿಕಿತ್ಸೆಗೆ ಶಿಫಾರಸು ಮಾಡಿದರು. ಶಿಬಿರ ಯಶಸ್ವಿಯಾಗಿ ನಿರ್ವಹಿಸಿದ ತಜ್ಞ ವೈದ್ಯರನ್ನು ಕಿರಿಯ ಶ್ರೀಗಳಾದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಗೌರವಿಸಿ ಆಶೀರ್ವದಿಸಿದರು.

ವಿರಾಮ
ಪ್ರತಿ ಭಾನುವಾರ

ಬೇಸಿಗೆಯ ಆರಂಭದಲ್ಲೇ ನೀರಿನ ಅಭಾವ | ಉತ್ತರ ಕನ್ನಡ ಜಿಲ್ಲೆಯಲ್ಲಿ ಜಲಕ್ಷಾಮ ಸಂಭವ | ಫಲಪ್ರದವಾಗದ ನೀರಿನ ಯೋಜನೆಗಳು

411 ಹಳ್ಳಿಗಳಲ್ಲಿ ಕುಡಿವ ನೀರಿನ ಅಭಾವ

ವಿಶಾಖಾ ಭಟ್ಟ ಹೆಗ್ಗಾರ್ ಶಿರಸಿ

ಮಲೆನಾಡು ಹಾಗೂ ಕರಾವಳಿಯನ್ನು ಒಳಗೊಂಡ ಉತ್ತರಕನ್ನಡ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಜಲಕ್ಷಾಮ ತಲೆದೋರುತ್ತದೆ. ಸರಕಾರದ ಹಲವು ಯೋಜನೆಗಳು ಇಲ್ಲಿ ಫಲಪ್ರದವಾಗದೇ, ಜಲ ಜೀವನ್ ಮಿಷನ್ ಸೇರಿದಂತೆ ಶಾಶ್ವತ ಕುಡಿಯುವ ನೀರು ಸರಬರಾಜು ಯೋಜನೆ ಕಾಟಾಚಾರ ಎಂಬಂತಾಗಿದೆ. ಉತ್ತರಕನ್ನಡ ಜಿಲ್ಲೆ ಶೇ. 80ರಷ್ಟು ಅರಣ್ಯ ಪ್ರದೇಶ ಹೊಂದಿದ್ದು, ಜಿಲ್ಲೆಯ ಹಲವು ತಾಲೂಕುಗಳಲ್ಲಿ ಬೇಸಿಗೆಯ ಆರಂಭದಲ್ಲೇ ನೀರಿನ ಅಭಾವ ತಲೆದೋರುತ್ತಿದೆ. ಜಿಲ್ಲೆಯ ಸುಮಾರು 411 ಹಳ್ಳಿಗಳು ಕುಡಿಯುವ ನೀರಿನ ತುಟಾಗ್ರತೆ ಎದುರಿಸುವ ಸಾಧ್ಯತೆಯಿದೆ ಎಂದು ಗುರುತಿಸಲಾಗಿದೆ. ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದು ಹಾಗೂ ನದಿಗಳು ಬತ್ತುತ್ತಿರುವುದು ಈ ಪರಿಸ್ಥಿತಿಗೆ ಪ್ರಮುಖ ಕಾರಣವಾಗಿದೆ ಎನ್ನಲಾಗಿದೆ.

ಹಳ್ಳ ಹಿಡಿದ ಜಲಜೀವನ್ ಮಿಷನ್:

ಕೇಂದ್ರ ಸರಕಾರದ ಈ ಮಹತ್ವಾಕಾಂಕ್ಷಿ ಜಲಜೀವನ್ ಮಿಷನ್ ಯೋಜನೆಯು 2024 ರ ವೇಳೆಗೆ ಪ್ರತಿ ಮನೆಗೆ ನಲ್ಲಿ ನೀರು ಪೂರೈಸುವ ಗುರಿ ಹೊಂದಿತ್ತು, ಆದರೆ ರಾಜ್ಯಾದ್ಯಂತ ಹಲವು ಕಾರಣಗಳಿಂದ ಇದರ ಗಡುವು ವಿಸ್ತರಿಸಲ್ಪಟ್ಟಿದೆ. ಉತ್ತರ ಕನ್ನಡದಲ್ಲಿ ಕಾಮಗಾರಿಗಳ ವಿಳಂಬ ಹಾಗೂ ಅಸಮರ್ಪಕ ಅನುಷ್ಠಾನದಿಂದಾಗಿ ಜನರು ಇಂದಿಗೂ ಟ್ಯಾಂಕರ್‌ನೀರನ್ನು ಅವಲಂಬಿಸುವಂತಾಗಿದೆ. ಇದರಿಂದ ಶಿರಸಿ ನಗರದ 31 ವಾರ್ಡ್ ಗಳಲ್ಲಿ 5 ವಾರ್ಡ್ ಗಳಲ್ಲಿ ಇಂದಿಗೂ ಸಮರ್ಪಕ ನೀರು ಪೂರೈಕೆ ಯೋಜನೆ ಜಾರಿಯಾಗಿಲ್ಲ. ಪೈಪ್ ಲೈನ್ ಕಾಮಗಾರಿಗಳು ಅರ್ಧಕ್ಕೆ ನಿಂತಿರುವುದರಿಂದ ನಿವಾಸಿಗಳಿಗೆ ತೊಂದರೆಯಾಗುತ್ತಿದೆ.

ಜಿಲ್ಲಾಡಳಿತ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 2025 ರ ಮಾಹಿತಿಯಂತೆ ಜಿಲ್ಲೆಯಾದ್ಯಂತ ಸುಮಾರು 411 ಹಳ್ಳಿಗಳನ್ನು ಕುಡಿಯುವ ನೀರಿನ ತುಟಾಗ್ರತೆ ಎದುರಿಸುತ್ತಿರುವ ಪ್ರದೇಶಗಳೆಂದು ಗುರುತಿಸಲಾಗಿದೆ.

ಜಲ ಜೀವನ ಮಿಷನ್ ಯೋಜನೆಗೆ ವಿಳಂಬವೇಕೆ?

ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಹಾಗೂ ಶಾಶ್ವತ ಕುಡಿಯುವ ನೀರು ಪೂರೈಕೆ ಯೋಜನೆಯಾದ ಜಲಜೀವನ ಮಿಷನ್ ಉತ್ತರ ಕನ್ನಡ ಜಿಲ್ಲೆಯ ಹಲವು ಭಾಗಗಳಲ್ಲಿ ಸಮರ್ಪಕವಾಗಿ ಬಳಕೆಗೆ ಸಿಗುತ್ತಿಲ್ಲ. ಅನೇಕ ಗ್ರಾಪಂ ವ್ಯಾಪ್ತಿಯ ಹಳ್ಳಿಗಳಲ್ಲಿ ಕಾಮಗಾರಿ ಅರ್ಧಕ್ಕೆ ಸ್ಥಗಿತವಾದ ಪರಿಣಾಮ ಬೇಸಿಗೆ ಪ್ರಾರಂಭದಲ್ಲಿಯೇ ಜನರು ಕುಡಿಯುವ ನೀರಿನ ಸಮಸ್ಯೆ ಎದುರಿಸುವಂತಾಗಿದೆ. ಜಿಲ್ಲೆಯ ಬಹುತೇಕ ಅರಣ್ಯ ವ್ಯಾಪ್ತಿ ಹೊಂದಿರುವುದರಿಂದ ಯೋಜನೆ ಕಾರ್ಯರೂಪಗೊಳಿಸಲು ಅರಣ್ಯ ಇಲಾಖೆಯ ಅನುಮತಿ ಕಡ್ಡಾಯವಾಗಿದೆ. ಅಲ್ಲದೇ, ಯೋಜನೆಗಳಿಗೆ ಅಗತ್ಯ ಹಣಕಾಸು ಹಾಗೂ ತಾಂತ್ರಿಕ ಸಿಬ್ಬಂದಿ ಕೊರತೆಯಿಂದ ಯೋಜನೆಗೆ ಹಿನ್ನಡೆಯಾಗಿದೆ. ಕೆಲವೊಂದು ಕಾಮಗಾರಿಗಳ ಜಲ ಮೂಲವು ಪ್ರಸ್ತುತ ಅನುಷ್ಠಾನಗೊಳ್ಳುತ್ತಿರುವ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗೆ ಅವಲಂಬಿತವಾಗಿರುವುದರಿಂದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ತಡೆಯಾಗುತ್ತಿದೆ. ಇದರಿಂದ ವಿಳಂಬವಾಗಿದೆ ಎನ್ನುವುದು ಜಿಲ್ಲಾ ಪಂಚಾಯತ ಅಧಿಕಾರಿಗಳ ಅಭಿಪ್ರಾಯ.

ಕಳೆದ ವರ್ಷ ಜಿಲ್ಲೆಯ 26 ಹಳ್ಳಿಗಳಿಗೆ ಟ್ಯಾಂಕರ್‌ಮತ್ತು ಬೋರ್‌ವೆಲ್ ಗಳ ಮೂಲಕ ತುರ್ತು ನೀರು ಪೂರೈಕೆ ಮಾಡಲಾಗಿತ್ತು.

ಜಿಲ್ಲೆಯ 198 ಗ್ರಾಪಂನಲ್ಲಿ ನೀರಿನ ಬವಣೆ ಸಾಧ್ಯತೆ!

ಜಿಲ್ಲೆಯ 13 ತಾಲೂಕುಗಳಲ್ಲಿ ಒಟ್ಟೂ 229 ಗ್ರಾಪಂಗಳಿದ್ದು, ಏಪ್ರಿಲ್, ಮೇ ಅವಧಿಯಲ್ಲಿ ಮಳೆಯಾಗದೇ ಇದ್ದರೆ 198 ಗ್ರಾಪಂಗಳ ವ್ಯಾಪ್ತಿಯಲ್ಲಿ ನೀರಿನ ತೊಂದರೆ ಉಂಟಾಗಬಹುದು ಎಂದು ಈಗಾಗಲೇ ಕಂದಾಯ ಇಲಾಖೆ ಅಂದಾಜಿಸಿದೆ. ಕಾರವಾರ, ಸಿದ್ದಾಪುರ, ಯಲ್ಲಾಪುರ ತಲಾ ಎರಡು ಹಳ್ಳಿಗಳಲ್ಲಿ, ಹಳಿಯಾಳ 23 ಹಳ್ಳಿ, ಮುಂಡಗೋಡ 8 ಹಳ್ಳಿಗಳು ನೀರಿನ ತೊಂದರೆ ಅನುಭವಿಸುತ್ತಿವೆ. ಏಪ್ರಿಲ್ ತಿಂಗಳಲ್ಲಿ 506, ಮೇ ತಿಂಗಳಲ್ಲಿ 531 ಗ್ರಾಮಗಳಲ್ಲಿ ನೀರಿನ ಕೊರತೆ ಎದುರಾಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಅದರಲ್ಲಿ ಹಳಿಯಾಳ 109 ಗ್ರಾಮಗಳಿದ್ದರೆ, ಸಿದ್ದಾಪುರ 97 ಗ್ರಾಮಗಳು ಪಟ್ಟಿಯಲ್ಲಿವೆ. ಉಳಿದ ತಾಲೂಕಿನಲ್ಲಿ 40ಕ್ಕಿಂತ ಕಡಿಮೆ ಗ್ರಾಮಗಳಿವೆ.

ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಕುಸಿತ, ಜನರಲ್ಲಿ ಆತಂಕ:

ಉತ್ತರಕನ್ನಡ ಜಿಲ್ಲೆಯು ಸಂಪದ್ಭರಿತ ಅರಣ್ಯವನ್ನು ಹೊಂದಿದ್ದರೂ, ವರ್ಷದಿಂದ ವರ್ಷಕ್ಕೆ ಅಂತರ್ಜಲದ ಮಟ್ಟ ಕುಸಿತವಾಗುತ್ತಿರುವುದರಿಂದ ನೀರಿನ ಸಮಸ್ಯೆ ಎದುರಾಗಲು ಕಾರಣವಾಗುತ್ತಿದೆ. ನೀರಿನ ಸಮಸ್ಯೆ ಕೇವಲ ಮನುಷ್ಯರ ಮೇಲೆ ಮಾತ್ರ ಪರಿಣಾಮ ಬೀರದೇ ವನ್ಯಜೀವಿ, ಕೃಷಿ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಕಾಡಿನಲ್ಲಿ ನೀರು ಸಿಗದೇ ವನ್ಯಜೀವಿಗಳು ನೀರನ್ನು ಅರಸಿ ನಾಡಿನತ್ತ ಬರುತ್ತಿವೆ. ಜಲ ಮೂಲಗಳು ಬತ್ತುವುದರಿಂದ ಅಡಿಕೆ, ತೆಂಗು, ಬಾಳೆ, ಅನಾನಸ್ ಒಳಗೊಂಡು ವಾಣಿಜ್ಯ ಬೆಳೆಗಳಿಗೆ ನೀರುಣಿಸಲು ಸಾಧ್ಯವಾಗದೇ ಗಿಡ ಮರಗಳು ಒಣಗುತ್ತವೆ. ಆದರೆ ನಮ್ಮನ್ನಾಳುವ ಸರಕಾರಗಳ ಜನಪ್ರತಿನಿಧಿಗಳು ಇಲ್ಲಿನ ಜಲಮೂಲಗಳನ್ನು ಯೋಜನೆಗಳ ನೆಪದಲ್ಲಿ ಬೇರೆ ಜಿಲ್ಲೆಗೆ ನೀಡುತ್ತಿರುವುದರಿಂದ ಕೃಷಿಕರು ಸಂಕಷ್ಟ ಅನುಭವಿಸುಂತಾಗಿದೆ. ಈಗಾಗಲೇ ಬೃಹತ್ ಯೋಜನೆಗಳಿಂದ ಜಿಲ್ಲೆಯು ಧಾರಣಾ ಸಾಮರ್ಥ್ಯ ಕಳೆದುಕೊಂಡಿದೆ ಎಂದು ಪರಿಸರ ತಜ್ಞರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಜಿಲ್ಲೆಯ ಜೀವದಿಗಳಾದ ಬೇಡ್ತಿ, ಅಘನಾಶಿನಿ, ಗಂಗಾವಳಿ ನದಿಗಳಿಗೆ ಸಣ್ಣ ನೀರಾವರಿ ಯೋಜನೆಗಳ ಕಾರಣದಿಂದ ಬೇಸಿಗೆಯಲ್ಲಿ ತನ್ನ ಹರಿಸುವು ನಿಲ್ಲಿಸುತ್ತವೆ. ಹಾವೇರಿ ಜಿಲ್ಲೆಯ ಕುಡಿಯುವ ನೀರಿಗಾಗಿ ರೂಪಿಸಲಾಗಿರುವ ಬೇಡ್ತಿ-ಅಘನಾಶಿನಿ ನದಿ ಜೋಡಣೆ ಯೋಜನೆಗೆ ಉತ್ತರ ಕನ್ನಡದಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಜಿಲ್ಲೆಯ ಜಲಮೂಲಗಳನ್ನು ಬೇರೆಡೆಗೆ ತಿರುಗಿಸಿದರೆ ಸ್ಥಳೀಯವಾಗಿ ನೀರಿನ ಸಮಸ್ಯೆ ಮತ್ತಷ್ಟು ಉಲ್ಬಣಿಸಬಹುದು ಎಂಬ ಆತಂಕ ಜನರಲ್ಲಿ ಮನೆಮಾಡಿದೆ. ಉತ್ತರಕನ್ನಡ ಜಿಲ್ಲೆಯ ಕರಾವಳಿ ಹಾಗೂ ಬಯಲುಸೀಮೆ ಪ್ರದೇಶದಲ್ಲಿ ಬೇಸಿಗೆಯಲ್ಲಿ ನೀರಿನ ಅಭಾವ ಎದುರಿಸುವುದು ಸಾಮಾನ್ಯ ಸಂಗತಿ.

ಈದೀಗ ಜಾರಿಯಾಗಿರುವ ನದಿಗಳ ಜೋಡಣೆ ಯೋಜನೆಯು ಜಿಲ್ಲೆಯಲ್ಲಿ ಮತ್ತಷ್ಟು ನೀರಿನ ಅಭಾವವನ್ನು ಉಂಟು ಮಾಡುತ್ತದೆ. ಘಟ್ಟದ ಮೇಲಿನ ಹಾಗೂ ಕರಾವಳಿ ಭಾಗದ ತಾಲೂಕುಗಳಲ್ಲಿ ಈ ವರೆಗೆ ಶಾಶ್ವತ ಕುಡಿಯುವ ನೀರಿನ ಯೋಜನೆ ಇಲ್ಲ. ಬೇಡ್ತಿ-ಅಘನಾಶಿನಿ ನದಿಗಳು ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ಹಾಗೂ ಕೆಳಗಿನ ಪ್ರದೇಶಗಳ ಜನವಸತಿ, ಕೃಷಿಭೂಮಿ, ಕಾಡು, ಗೋಮಾಳ, ಕೆರೆಗಳಿಗೆ ನಿರಂತರ ನೀರು ಒದಗಿಸುವ ಜಲಮೂಲವಾಗಿವೆ. ಈ ಯೋಜನೆಯಿಂದ ನದಿಗಳಲ್ಲಿ ಹರಿಯಬೇಕಾದ ಕನಿಷ್ಠ ಸ್ವಾಭಾವಿಕ ಪ್ರವಾಹವೂ ಕಣ್ಮರೆಯಾಗಿ, ನೀರಿನ ಕೊರತೆ ಉಂಟಾಗಲಿದೆ ಎಂದು ಬೇಡಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಕಳವಳ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯಲ್ಲಿ ಬತ್ತುತ್ತಿದೆ ಅಂತರ್ಜಲ

ಮಲೆನಾಡಿನಲ್ಲಿ ಇತ್ತೀಚಿನ ದಿನಗಳಲ್ಲಿ ಅಂತರ್ಜಲ ಸಮಸ್ಯೆ ಎದುರಾಗಿದೆ. ಅತಿಯಾದ ಬಳಕೆಯಿಂದ ಅಂತರ್ಜಲ ಮಟ್ಟ 0.5 ರಿಂದ 7.16 ಮೀಟರ್ ಗಳಷ್ಟು ತೀವ್ರವಾಗಿ ಕುಸಿದಿದೆ. ಬೋರ್‌ವೆಲ್ ನಲ್ಲಿಯೂ ನೀರು ಬತ್ತಿದ್ದು, ಕರಾವಳಿ ಭಾಗದಲ್ಲಿ ಉಪ್ಪು ನೀರು ಬರುವ ಭೀತಿ ಎದುರಾಗಿದೆ. ಹಳಿಯಾಳ ತಾಲೂಕಿನಲ್ಲಿ ತಾಲೂಕಿನಲ್ಲಿ ಈಗಾಗಲೇ ಬೋರ್‌ವೆಲ್ ಕೊರೆತವನ್ನು ನಿಷೇಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಕದಂಬ ನೌಕಾನೆಲೆಯ ಮೇಲೆಯೂ ಈ ನದಿ ತಿರುವ ಯೋಜನೆ ಪರಿಣಾಮ ಬೀರಲಿದ್ದು, ನೌಕಾನೆಲೆಗೆ ನೀರಿನ ಕೊರತೆ ಉಂಟಾಗುವ ಸಾಧ್ಯತೆ ಹೆಚ್ಚಿದೆ. ಈ ಯೋಜನೆ ಕೈಬಿಡುವ ಮೂಲ ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ನೀರಿನ ತುಟಾಗ್ರತೆ ಎದುರಾಗುವ ವಿವಿಧ ತಾಲೂಕಿನ ಹಳ್ಳಿಗಳಿಗೆ ಜಲ ಮೂಲ ಬಳಸಿ, ಶಾಶ್ವತ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸುವಲ್ಲಿ ಸರಕಾರ ಹೆಚ್ಚಿನ ಆಸಕ್ತಿ ವಹಿಸಲಿ.

– ಅನಂತ ಹೆಗಡೆ ಅಶೀಸರ, ಅಧ್ಯಕ್ಷ, ಅಘನಾಶಿನಿ-ಬೇಡ್ತಿ ಕೊಳ್ಳ ಸಂರಕ್ಷಣಾ ಸಮಿತಿ

ಗುಲಾಬಿಯ ಸ್ವಾಗತ, ಹಸನ್ಮುಖಿಯಾಗಿ ಹಾಜರ್

ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭ | ಮೊದಲ ದಿನ ಸುಗಮ, ಸುಸೂತ್ರ

ಅಣ್ಣಿಗೇರಿ: ಇಂದಿನಿಂದ ರಾಜ್ಯಾದ್ಯಂತ ಆರಂಭ ಗೊಂಡ ಎಸ್ಸೆಸ್ಸೆಲ್ಸಿ ಪರೀಕ್ಷೆ ಹಿನ್ನಲೆ ಪಟ್ಟಣದ ಪರೀಕ್ಷಾ ಕೇಂದ್ರಗಳಾದ ಶ್ರೀ ಅಮೃತೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜು ಹಾಗೂ ಎನ್.ಎಸ್. ಹುಬ್ಬಳ್ಳಿ ಬಾಲಕಿಯರ ಪ್ರೌಢಶಾಲೆಯಲ್ಲಿ ಪರೀಕ್ಷಾರ್ಥಿಗಳಿಗೆ ಗುಲಾಬಿ ಹೂವು ನೀಡಿ ಸ್ವಾಗತಿಸಿ ಕೊಂಡಿದ್ದು ವಿಶೇಷವಾಗಿತ್ತು.

ತಾಲೂಕಿನ ಆದ್ಯಂತ ಒಟ್ಟಾರೆ 950ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು

ಮೊದಲ ದಿನ ಪ್ರಥಮ ಭಾಷೆ ಕನ್ನಡ ಹಾಗೂ ಇಂಗ್ಲೀಷ ಪರೀಕ್ಷೆ ಇರುವದರಿಂದ ವಿದ್ಯಾರ್ಥಿಗಳು ಬಹಳ ಉತ್ಸುಕರಾಗಿ ಪರೀಕ್ಷಾ ಕೇಂದ್ರಗಳತ್ತ ಹೆಜ್ಜೆ ಹಾಕುತ್ತಿರುವ ದೃಶ್ಯ ಎಲ್ಲರ ಗಮನ ಸೆಳೆದಿತ್ತು.

ಪರೀಕ್ಷೆ ಬಂದ ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆ ವತಿಯಿಂದ ಗುಲಾಬಿ ಹೂ ನೀಡುವ ಮೂಲಕ ಸ್ವಾಗತಿಸಿಕೊಂಡು ಶುಭಕೋರಲಾಯಿತು.

ಪ್ರಾಚಾರ್ಯ ಎಂ.ಆ. ಮುಂಡರಗಿ. ಉಪಪ್ರಾಚಾರ್ಯ ಎಸ್. ಎಂ. ಬಳ್ಳೊಳ್ಳಿ, ಮುಖ್ಯ ಶಿಕ್ಷಕ ಎನ್. ಎಸ್. ಮೇಲರಿ, ಡಾ. ಎಚ್.ಬಿ. ಪೂಜಾರ, ರಮೇಶ ಕೊಟ್ಟಗಿ, ಡಿ.ಎಲ್. ಆಡಕಾವು, ಸಂತೋಷ ಪಾಟೀಲ , ಇತರರು ಉಪಸ್ಥಿತರಿದ್ದರು.

ಶ್ರೀ ಅಮೃತೇಶ್ವರ ಸಂಯುಕ್ತ ಪಿಯು ಕಾಲೇಜು ಹಾಗೂ ಎನ್.ಎಸ್. ಹುಬ್ಬಳ್ಳಿ ಬಾಲಕಿಯರ ಪ್ರೌಢಶಾಲೆಯಲ್ಲಿ ಪರೀಕ್ಷಾರ್ಥಿಗಳಿಗೆ ಗುಲಾಬಿ ಹೂವು ನೀಡಿ ಸ್ವಾಗತಿಸಲಾಯಿತು.

ವಿದ್ಯುತ್ ಮಾರ್ಗ ಕಾಮಗಾರಿ ಪರಿಶೀಲನೆ

ಹಾವೇರಿ: ಅಪಾಯಕಾರಿ ವಿದ್ಯುತ್ ಮಾರ್ಗ ಸ್ಥಳಾಂತರ ಕಾಮಗಾರಿ ನಡೆಯುತ್ತಿರುವ ಮೌಲಾಲಿ ನಗರಕ್ಕೆ ಹೆಸ್ಕಾಂ ಅಧ್ಯಕ್ಷರಾದ ಸೈಯದ್ ಅಜೀಮ್ಪೀರ್. ಎಸ್ ಖಾದ್ರಿಯವರು ಭೇಟಿ ನೀಡಿ ಪರಿಶೀಲಿಸಿದರು.

ಜಿಲ್ಲೆಯ ಶಿಗ್ಗಾಂವಿಯ ಮೌಲಾಲಿ ನಗರದಲ್ಲಿ ಮನೆಗಳ ಮೇಲೆ ವಿದ್ಯುತ್ ಮಾರ್ಗ ಹಾದು ಹೋಗಿತ್ತು. ಈ ಅಪಾಯಕಾರಿ ವಿದ್ಯುತ್ ಮಾರ್ಗದಿಂದ ಇಬ್ಬರು ಪ್ರಾಣ ಕಳೆದುಕೊಂಡು, ಐವರು ಗಂಭೀರವಾಗಿ ಗಾಯಗೊಂಡಿದ್ದರು. ಅಂದು ಸ್ಥಳಕ್ಕೆ ಭೇಟಿ ನೀಡಿದ್ದ ಹೆಸ್ಕಾಂ ಅಧ್ಯಕ್ಷರು, ಅಪಾಯಕಾರಿ ವಿದ್ಯುತ್ ಮಾರ್ಗವನ್ನು ಕೂಡಲೇ ಬೇರೆಡೆ ಸ್ಥಳಾಂತರಿಸುವಂತೆ ಅಧಿಕಾರಿಗಳಿಗೆ ಸೂಚಿಸಿ, 40 ಲಕ್ಷ ರೂ. ಹಣವನ್ನು ಬಿಡುಗಡೆ ಮಾಡಿದ್ದರು.

ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಅಧ್ಯಕ್ಷರು, ಕಾಮಗಾರಿ ಪರಿಶೀಲಿಸಿದರು. ಬಳಿಕ ವಿದ್ಯುತ್ ಅಪಘಾತದಲ್ಲಿ ಮೃತಪಟ್ಟ ಮಲ್ಲೇಶಪ್ಪ ಕುಂದೂರ, ರೆಹಮಾನಸಾಬ ದುಖಾನದಾರ ಹಾಗೂ ಗಾಯಾಳುಗಳಾದ ನಾಗಪ್ಪ ನೆಗಳೂರ, ಮೊಹ್ಮದ್ ಸಾದಿಕ್ ಮಾಸನಕಟ್ಟಿ, ಮೊಹ್ಮದ್ ಯೂಸೂಪ ಶೇತಸನದಿ, ದಾದಾಪೀರ ಕಾಲಿಫನವರ ದಾವೂದ್ ಸೌಧಾಗಾರ ಅವರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಹೀಂ ಮಲ್ಲೂರು , ರಫೀಕ್ ನದಾಫ್, ಹೆಗ್ಗಪ್ಪ ಬಾಲೆಹೊಸೂರ, ಕರೀಮ್ ಮೋಗಗಲ್ಲಿ , ರಫೀಕ್ ದುಖಾನದಾರ ಉಪಸ್ಥಿತರಿದ್ದರು.

ನಮ್ಮ ಬದುಕೇ ದತ್ತನ ಭಿಕ್ಷೆ: ಶ್ರೀಗಳು

ಯಲ್ಲಾಪುರ: ಎಲ್ಲ ಪುರದವರೂ ಯಲ್ಲಾಪುರಕ್ಕೆ ಬರುವಂತಹ ಕ್ಷೇತ್ರವಾಗಿ ದತ್ತ ಮಂದಿರ ಬೆಳೆಯಬೇಕು. ನಮ್ಮ ಬದುಕೇ ದತ್ತನ ಭಿಕ್ಷೆ. ದತ್ತನಿಂದಲೇ ಪಡೆದ ಈ ಬದುಕಿನಲ್ಲಿ ಗಳಿಸಿದ್ದರಲ್ಲಿ ದತ್ತನಿಗೆ ಸಮರ್ಪಣೆ ಮಾಡುವುದು ನಮ್ಮ ಕರ್ತವ್ಯವಾಗಬೇಕು ಎಂದು ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ನುಡಿದರು.

ಅವರು ಬುಧವಾರ ಪಟ್ಟಣದ ನಾಯಕನಕೆರೆ ಶ್ರೀ ದತ್ತ ಮಂದಿರದ ಆವಾರದಲ್ಲಿ ಹಮ್ಮಿಕೊಂಡಿದ್ದ ಸೇವಾಶೀರ್ವಾದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆರ್ಶಿವಚನ ನೀಡಿ ಮಾತನಾಡಿ ದತ್ತಗುರು ಎಂದರೆ ಎಲ್ಲ ದೇವತೆಗಳ ಸನ್ನಿಧಾನ. ದತ್ತನ ಸೇವೆ ಮಾಡಿದರೆ ಎಲ್ಲ ದೇವರ ಸೇವೆ ಮಾಡಿದಂತೆ. ಬದ್ಧತೆ ಇರುವ ಕಾರ್ಯಕರ್ತರ ಮೂಲಕ ದತ್ತಾತ್ರೇಯರ ಸೇವಾ ಕಾರ್ಯ ನಿರಂತರವಾಗಿ ನಡೆಯಬೇಕು ಎಂಬ ಆಶಯದೊಂದಿಗೆ ಸದ್ಯದಲ್ಲೇ ದೇವಸ್ಥಾನದ ಕ್ರಿಯಾ ಸಮಿತಿಯನ್ನು ರಚಿಸಲಾಗಿದೆ. ದತ್ತ ಮಂದಿರದ ಭಕ್ತರಿಂದಲೇ ಮಂದಿರ ಅಭಿವೃದ್ಧಿ ಹೊಂದಬೇಕು ಎಂಬ ಆಶಯ ನಮ್ಮದು ಎಂದರು.

ದತ್ತ ಮಂದಿರದ ನಿರ್ಮಾಣ, ಪ್ರತಿಷ್ಠಾ ಮಹೋತ್ಸವದಲ್ಲಿ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡ ಕಾರ್ಯಕರ್ತರಿಗೆ ಶ್ರೀಗಳು ಮಂತ್ರಾಕ್ಷತೆ ನೀಡಿ, ಆಶೀರ್ವದಿಸಿದರು.

ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಭಟ್ಟ ಹಂಡ್ರಮನೆ ಶ್ರೀಗಳಿಗೆ ಫಲ ಸಮರ್ಪಣೆ ಮಾಡಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಿತಿಯ ಉಪಾಧ್ಯಕ್ಷ ಶ್ರೀರಂಗ ಕಟ್ಟಿ ವರದಿ ವಾಚಿಸಿದರು. ಮಹೇಶ ಚಟ್ನಳ್ಳಿ ನಿರ್ವಹಿಸಿದರು. ಇದಕ್ಕೂ ಮುನ್ನ ವೈದಿಕರಿಂದ ದತ್ತಾತ್ರೇಯ ಮೂಲ ಮಂತ್ರ ಹವನ, ಕಲಾ ಮಂತ್ರ ಹವನ ನಡೆಯಿತು. ಕೇಂದ್ರ ಸಾಂಬಾರ ಮಂಡಳಿಯ ಸದಸ್ಯ ಪ್ರಸನ್ನ ಕೆರೆಕೈ, ಸಂಕಲ್ಪ ಸಂಸ್ಥೆ ಅಧ್ಯಕ್ಷ ಪ್ರಮೋದ ಹೆಗಡೆ, ಮಠದ ಹವ್ಯಕ ಮಹಾಮಂಡಲದ ಅಧ್ಯಕ್ಷ ಮೋಹನ ಹೆಗಡೆ ಹೆರವಟ್ಟಾ ಇತರರಿದ್ದರು.

ಇದೆ ವೇಳೆ ಶ್ರೀಗಳ ನಿರ್ದೇಶನದಂತೆ ರಚಿಸಲಾದ ದೇವಸ್ಥಾನದ ನೂತನ ಕ್ರಿಯಾ ಸಮಿತಿಯ ಪದಾಧಿಕಾರಿಗಳ ಯಾದಿಯನ್ನು ಪ್ರಕಟಿಸಲಾಯಿತು.

ಯಲ್ಲಾಪುರ ಪಟ್ಟಣದ ನಾಯಕನಕೆರೆ ಶ್ರೀ ದತ್ತ ಮಂದಿರದ ಆವಾರಣದಲ್ಲಿ ಹಮ್ಮಿಕೊಂಡಿದ್ದ ಸೇವಾಶೀರ್ವಾದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಆಶೀರ್ವಾಚನ ನೀಡಿದರು.

ವೆಂಟಿಲೇಷನ್ ಕುರಿತು ಕಾರ್ಯಾಗಾರ

ಧಾರವಾಡ: ಎಸ್.ಡಿ.ಎಂ. ವೈದ್ಯಕೀಯ ಕಾಲೇಜಿನ ಕ್ರಿಟಿಕಲ್ ಕೇರ್ ಮೆಡಿಸಿನ್ ವಿಭಾಗದಿಂದ ಮೆಕ್ಯಾನಿಕಲ್ ವೆಂಟಿಲೇಷನ್ ಮತ್ತು ಇಕ್ಮೋ ಕುರಿತು ಎರಡು ದಿನಗಳ ಕಾರ್ಯಾಗಾರ ಯಶಸ್ವಿಯಾಗಿ ನಡೆಸಿತು. ಉತ್ತರ ಕರ್ನಾಟಕ ಮತ್ತು ಬೆಂಗಳೂರಿನಿಂದ ಸುಮಾರು 100ಕ್ಕೂ ಹೆಚ್ಚು ವೈದ್ಯಕೀಯ ಸ್ನಾತಕೋತ್ತರ ಪದವೀಧರರು ಮತ್ತು ಇತರ ಆರೋಗ್ಯ ವೃತ್ತಿಪರರು ಈ ಕೌಶಲ್ಯಪೂರ್ಣ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಪ್ರಾಂಶುಪಾಲ ಡಾ. ವಿಜಯ್ ಕುಲಕರ್ಣಿ ಕಾರ್ಯಾಗಾರ ಉದ್ಘಾಟಿಸಿದರು. ಮುಂಬೈನ ಇಕ್ಮೋ ಸಲಹೆಗಾರ ಡಾ. ಪ್ರಣಯ್ ಓಜಾ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಡಾ. ಗುಣವತಿ ಸ್ವಾಗತಿಸಿದರು. ಡಾ. ಮೀನಾಲ್ ಮಹಾಜನ್ ಮತ್ತು ಗರಿಮಾ ನಿರೂಪಿಸಿದರು.



ಆಲಿಕಲ್ಲು ಮಳೆ ಹೊಡೆತಕ್ಕೆ 39 ಕುರಿಗಳು ಸಾವು

ಬೆಳಗಾವಿ: ಜಿಲ್ಲೆಯಲ್ಲಿ ಮಂಗಳವಾರ ಸುರಿದ ಭಾರೀ ಮಳೆಯಿಂದ ಹಲವಾರು ಅವಾಂತರಗಳು ಉಂಟಾಗಿದ್ದು, ಆಲಿಕಲ್ಲು ಮಳೆಗೆ 39 ಕುರಿಗಳು ಮೃತಪಟ್ಟ ಘಟನೆ ಸಂಕೇಶ್ವರ ಸಮೀಪ ನಡೆದಿದೆ. ರಭಸದಿಂದ ಹೊಡೆದ ಆಲಿಕಲ್ಲುಗಳ ಪರಿಣಾಮ ಹೊರಗಡೆ ದೊಡ್ಡಿಯಲ್ಲಿ ಇದ್ದ ಕುರಿಗಳು ಸಾವನ್ನಪ್ಪಿವೆ. ಕುರಿಗಾಯಿ ಶಂಕರ ಯಶವಂತ ಕರಜಗಿ ಎಂಬವರಿಗೆ ಲಕ್ಷಾಂತರ ರುಪಾಯಿ ನಷ್ಟ ಆಗಿದ್ದು, ಸೂಕ್ತ ಪರಿಹಾರ ನೀಡಲು ಸರಕಾರ ಮನವಿ ಮಾಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಕಂದಾಯ ಅಧಿಕಾರಿಗಳು ಹಾಗೂ ಪಶು ವೈಧ್ಯಾಧಿಕಾರಿಗಳು ಸಾವನ್ನಪ್ಪಿದ ಕುರಿಗಳ ಪಂಚನಾಮೆ ಮಾಡಿದ್ದಾರೆ.

ಕುರಿಗಳು ಸಾವನ್ನಪ್ಪಿದ ಸ್ಥಳಕ್ಕೆ ಕಂದಾಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಧ್ಯಯನ ಮಾಡಿ 29 ಅಭ್ಯರ್ಥಿಗಳು ಆಯ್ಕೆ

ಜಯಶ್ರೀಗೌಡ ರಚಿತ ಪುಸ್ತಕ ಓದಿ 29 ಅಭ್ಯರ್ಥಿಗಳು ಹುದ್ದೆಗೆ ಆಯ್ಕೆ

ಬೆಂಗಳೂರು: ಇತ್ತೀಚೆಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಕಲ್ಯಾಣ ಕರ್ನಾಟಕ ಮತ್ತು ಉಳಿಕೆ ವೃಂದಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಾಧಿ ಕಾರಿಗಳು/ಪತ್ರಾಂಕಿತ ಅಧಿಕಾರಿಗಳು (ಬಿ-ಗ್ರೂಪ್) ಹುದ್ದೆಗಳಿಗೆ ಕರೆಯಲಾಗಿದ್ದ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, 40 ಹುದ್ದೆಗಳ ಪೈಕಿ 29 ಅಭ್ಯರ್ಥಿಗಳು ಜಯಶ್ರೀ ಎ ಗೌಡ ಅವರು ಬರೆದಿರುವ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು/ಪತ್ರಾಂಕಿತ ಅಧಿಕಾರಿಗಳು ಪುಸ್ತಕ ಅಧ್ಯಯನ ಮಾಡಿ ಆಯ್ಕೆಯಾಗಿರುವುದು ವಿಶೇಷವಾಗಿದೆ.

ಇನ್ನು ಕಲ್ಯಾಣ ಕರ್ನಾಟಕ ಪರೀಕ್ಷೆಯಲ್ಲಿ ಕೇಳಲಾದ 100 ಪ್ರಶ್ನೆಗಳ ಪೈಕಿ 82 ಪ್ರಶ್ನೆಗಳು ಹಾಗೂ ಕಲ್ಯಾಣೇತರ ಕರ್ನಾಟಕ ಪರೀಕ್ಷೆಯಲ್ಲಿಯೂ 100 ಪ್ರಶ್ನೆಗಳ ಪೈಕಿ 81 ಪ್ರಶ್ನೆಗಳು ಇದೇ ಪುಸ್ತಕದಲ್ಲಿ ಉಲ್ಲೇಖವಾಗಿತ್ತು ಎಂಬುದು ಗಮನಾರ್ಹ. ಇದು ಈಗಾಗಲೇ ಕರ್ನಾಟಕದ ಸ್ಪರ್ಧಾತ್ಮಕ ಪರೀಕ್ಷೆಗಳ ಇತಿಹಾಸದಲ್ಲೇ ಗಮನಾರ್ಹವಾಗಿದೆ. ಜಯಶ್ರೀ ಎ ಗೌಡ ಅವರಿಂದ ಇತ್ತೀಚೆಗೆ ಪ್ರಕಟವಾದ ಕಂಪ್ಯೂಟರ್ ಜ್ಞಾನ ಹಾಗೂ ವಿವಿಧ ರಾಜ್ಯಗಳ ಕಂಪ್ಯೂಟರ್ ಪ್ರಶ್ನೋತ್ತರ ಮಾಲಿಕೆ ಎಂಬ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳ ಪುಸ್ತಕಗಳ ಪ್ರಕಟಗೊಂಡಿವೆ. ಈ ಪುಸ್ತಕಗಳನ್ನು ಅಧ್ಯಯನ ಮಾಡಿದ ಅನೇಕ ವಿದ್ಯಾರ್ಥಿಗಳು ಸರಕಾರಿ ಸೇವೆಗೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಈ ಪುಸ್ತಕಗಳು ರಾಜ್ಯಾದ್ಯಂತ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಪುಸ್ತಕ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ರಾಜ್ಯದಲ್ಲೇ ನಂಬರ್ 1 ಕಂಪ್ಯೂಟರ್ ಅಧ್ಯಯನ ಪುಸ್ತಕ ಎಂದು ಗುರುತಿಸಿಕೊಂಡಿದೆ.

ಕರ್ನಾಟಕ ಸರ್ಕಾರ

ಸಹಾಯಕ ನಿರ್ದೇಶಕರು, ಗ್ರೇಡ್–1, ರವರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಹೊನ್ನಾವರ

ಕಛೇರಿ ದೂರವಾಣಿ ಸಂಖ್ಯೆ (08387–222205, email: tswhonavar@gmail.com

ಕ್ರ ಸಂ: ಸನಿಗ್ರೇ1ಸಕಇ/ಬಾವಾಹನಟೆ/ಸಿಆರ್/2025–26 ದಿನಾಂಕ: 17–03–2026

ಟೆಂಡರ್ ಪ್ರಕಟಣೆ

2026–27 ನೇ ಸಾಲಿಗೆ ಹೊನ್ನಾವರ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯ ಅಧಿಕೃತ ಸರ್ಕಾರಿ ಕೆಲಸ ಕಾರ್ಯಗಳಿಗಾಗಿ ಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ ಹವಾನಿಯಂತ್ರಿತ ಸ್ವಿಷ್ಟ ಡಿಸ್ಯೈರ್/ಸ್ವಿಷ್ಟ ಟೂರ್ ವಾಹನಗಳನ್ನು ಒದಗಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 01–01–2024 ರ ನಂತರ ನೊಂದಣಿಯಾಗಿರುವ ವಾಹನದ ಮಾಲೀಕರು ಟೆಂಡರ್ ಸಲ್ಲಿಸಬಹುದಾಗಿದೆ. ಟೆಂಡರ್ ಆರಂಭ 18–03–2026. ಟೆಂಡರ್ ಕೊನೆಯ ದಿನಾಂಕ: 25–03–2026 ಸಮಯ 4.00 PM ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08387–222205 ಗೆ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಸಹಾಯಕ ನಿರ್ದೇಶಕರು ಗ್ರೇಡ್–1
ಸಮಾಜ ಕಲ್ಯಾಣ ಇಲಾಖೆ, ಹೊನ್ನಾವರ

DIPR/KWR/KSMCA/1228/25-26 Dt.18.03.2026

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಕಾರ್ಯನಿರ್ವಾಹಕ ಇಂಜಿನಿಯರ್ ರವರ ಕಚೇರಿ, ನಂ.1ನೇ ವಿಭಾಗ, ಜಾವಾ ಫ್ಯಾಕ್ಟರಿ ರಸ್ತೆ, ಹೈವೇ ಸರ್ಕಲ್ ಹತ್ತಿರ, ಬನ್ನಿಮಂಟಪ, ಮೈಸೂರು–570001
ದೂರವಾಣಿ : 0821–2332325, ಇ–ಮೇಲ್: kscb_mys@yahoo.in

No: KSDB/EE/Mys-Div-1/IFT-06/AE/2025-26 Date: 18.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಡಬ್ಲ್ಯೂ–3) ಎರಡನೇ ಕರೆ
(ದ್ವಿ ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕಾರ್ಯನಿರ್ವಾಹಕ ಇಂಜಿನಿಯರ್ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ನಂ.1ನೇ ವಿಭಾಗ, ಮೈಸೂರು ರವರು ಮಂಡಳಿಯ ಆಯುಕ್ತರು ಕಕೊಅಮ ಬೆಂಗಳೂರು ರವರ ಪರವಾಗಿ, ಸಕಲೇಶಪುರ ಪಟ್ಟಣದ ಪೌರಕಾರ್ಮಿಕರ ಕಾಲೋನಿಯಲ್ಲಿ PMAY-HFA ಯೋಜನೆಯಡಿಯಲ್ಲಿ ನಿರ್ಮಿಸಲಾದ 65 G & G + 1 ಮನೆಗಳಿಗೆ UGD, External Water Supply water proofing, STP & under Ground water storage tank ಅನ್ನು ಒದಗಿಸುವ ಮೂಲಸೌಕರ್ಯ ಕಾಮಗಾರಿಗಳನ್ನು ನಿರ್ವಹಿಸಲು (ಎರಡನೇ ಕರೆ) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿರುತ್ತಾರೆ. ಟೆಂಡರ್ ಪ್ರಕಟಣೆ, ವೇಳಾಪಟ್ಟಿ ಹಾಗೂ ಇತರೆ ವಿವರಗಳು ವೆಬ್‌ಸೈಟ್: https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.

1.	ಪೂರ್ವ ಭಾವಿ ಸಭೆಯ ದಿನಾಂಕ ಮತ್ತು ಸಮಯ	25.03.2026ರ 11.00 ಗಂಟೆಗೆ
2.	ಆಕ್ಷೇಪಣೆ/ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಮತ್ತು ಸಮಯ :	27.03.2026ರ 16.00 ಗಂಟೆಯವರೆಗೆ
3.	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	30.03.2026ರ 16.00 ಗಂಟೆಯವರೆಗೆ
4.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ & ಸಮಯ	01.04.2026ರ 11.00 ಗಂಟೆಗೆ
5.	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ & ಸಮಯ	04.04.2026ರ 11.00 ಗಂಟೆಗೆ

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಕಕೊಅಮ,
ನಂ.1ನೇ ವಿಭಾಗ, ಮೈಸೂರು.

ವಾಸಸಂಇ/ವಾಪ್ರ/6333/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ

ಅನೆಕ್ಸ್ ಕಟ್ಟಡ, 2ನೇ ಮಹಡಿ, ಎಸ್‌ಪಿ ಕಛೇರಿಯ ಹಿಂಭಾಗ, ಡ್ಯಾಂ ರಸ್ತೆ, ಹೊಸಪೇಟೆ

ಸಂ.ಕಾನಿ/ಪಂರಾಇಂವಿ/ವಿಜಯನಗರ/ತಾ.ಶಾಖೆ/ಟೆಂಡರ್/ವಿವಿಲೆಶಿ/2025–26/2066
ದಿನಾಂಕ:17.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through Government of Karnataka Public Procurement Portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ ಹೊಸಪೇಟೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ – 2000ರಂತೆ ಮೀಸಲಾತಿಗೆ ಒಳಪಟ್ಟು ಹಡಗಲಿ, ಹ.ಬೋ.ಹಳ್ಳಿ, ಕೂಡ್ಲಿಗಿ & ಹರಪನಹಳ್ಳಿ, ಹೊಸಪೇಟೆ ತಾಲೂಕಿಗೆ KKRDB, 5054 (CMIDP), 5054 (Flood), TSP ಹಾಗೂ ಇತರೆ ಲೆಕ್ಕಶೀರ್ಷಿಕೆಗಳಡಿ ಅನುಮೋದನೆಯಾದ ವಿವಿಧ ಕಾಮಗಾರಿಗಳಿಗಾಗಿ ಟರ್ನ ಕೀ ಆಧಾರದ ಮೇಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ Standard Bid Document (KW1,2,3 &4) ನಿಯಮವಳಿಗಳಂತೆ ವೆಬ್‌ಸೈಟ್‌ನ ಆಯಾ ಇಂಡೆಂಟ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿರುವ ನಿಬಂಧನೆಗಳಿಗೊಳಪಟ್ಟು ಘಾಂಡಿಇ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದಾದ ದಿನಾಂಕ: Annexure I ಕಾಮಗಾರಿಗಳಿಗೆ ದಿನಾಂಕ:18.03.2026 ರಿಂದ ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ :27.03.2026 ಸಂಜೆ:5.00ವರೆಗೆ ಹಾಗೂ Annexure II ಕಾಮಗಾರಿಗಳಿಗೆ ದಿನಾಂಕ:20.03.2026 ರಿಂದ ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ :07.04.2026 ಸಂಜೆ:5.00ವರೆಗೆ (Auto Extension Specialty up to 4 Days)

Annexure I Indent Nos (Including Category works) Harpanahalli Taluk : 25478 & 25477 H B Halli Taluk :25619 & 25620, Hosapete Taluk : 22740/call-2, Hadagali taluk : 22962, 22961 & 22959 Kudligi : 25167, 25164, 25172, 25170, 25168, 25174, 25177 & other indents

Annexure II Indent Nos : Harapanahalli taluk : 23568, 23031 & 25330, Kudligi taluk : 25534

ಟೆಂಡರ್ ಪ್ರಕ್ರಿಯೆ ದಿನಾಂಕಗಳು/ತಿದ್ದುಪಡಿ/ಮುಂದೂಡಿಕೆಗಳ ಬಗ್ಗೆ ಕಾರಣಾಂತರಗಳಿಂದ ಬದಲಾವಣೆಯಾದಲ್ಲಿ ಕೆಪಿಪಿ ಪೋರ್ಟಲ್ (https://kppp.karnataka.gov.in) ವೆಬ್‌ಸೈಟ್‌ನಲ್ಲಿಯೆ ನೋಡಿಕೊಳ್ಳುವುದು. ಬಾಕಿ ಉಳಿದಂತೆ ಟೆಂಡರ್ ಪ್ರಕಟಣೆಯ (ಅನುಭಂದ) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ.ಪಿ ವೆಬ್‌ಸೈಟ್ ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ (eepredvijayanagara@gmail.com) ಸಂಪರ್ಕಿಸಬಹುದು.

ಸಹಿ/– ಕಾಪಅ ಪಂರಾಇಂ ವಿಭಾಗ, ವಿಜಯನಗರ

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/602

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ

ಪಂಚಾಯತ್‌ರಾಜ್‌ಇಂಜಿನಿಯರಿಂಗ್ ವಿಭಾಗ, ಮೈಸೂರು–570023

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ.–18/ 2025–26/(2ನೇ ಕರೆ), ದಿನಾಂಕ:–02.03.2026

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ನಂಜನಗೂಡು ತಾಲ್ಲೂಕಿನ 2024–25ನೇ ಸಾಲಿನ 5054 ಮಳೆಹಾನಿ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗೆ KW-4 ರೀತ್ಯಾ ಮರುಟೆಂಡರ್ (2ನೇ ಕರೆ) ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿ: 11.03.2026 ರಿಂದ ದಿ: 18.03.2026 ರವರೆಗೆ ಸಂಜೆ 16.00 ಘಂಟೆಯವರೆಗೆ, ಪ್ರೀಬಿಡ್ ಮೀಟಿಂಗ್ ದಿ:12.03.2026 ಸಂಜೆ 16.00 ಘಂಟೆಗೆ ಹಾಗೂ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿ: 20.03.2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು.

ಕ್ರ.ಸಂ. 01. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ನಂಜನಗೂಡು ತಾಲ್ಲೂಕು ತಗಡೂರು ಗ್ರಾಮದಿಂದ ಅಹಲ್ಯ ಗ್ರಾಮದವರೆಗೆ ಮಾರ್ಗ ಮಧ್ಯೆ ಬರುವ ತಗಡೂರು ಗಾಮದ ಚಂಡಿಕೇಶ್ವರ ದೇವಸ್ಥಾನದ ರಸ್ತೆ, ಅಳಗಂಚಿ, ಕಿರಗುಂದ, ಬಿಳಿಗೆರೆ, ಹಾರೋಪುರ, ಬಿಳುಗಲಿ, ಹದಿನಾರು ಮೋಳೆ, ಇಮ್ಮಾವುಹುಂಡಿ, ಕೆ.ಎಸ್.ಹುಂಡಿ, ಬಿದರಗೂಡು ಮತ್ತು ಅಹಲ್ಯ ಗ್ರಾಮ ಪರಿಮಿತಿಯಲ್ಲಿ ಸಿ.ಸಿ ಚರಂಡಿ ಮತ್ತು ಸಿ.ಸಿ. ರಸ್ತೆ ಹಾಗೂ ಡಾಂಬರು ರಸ್ತೆ ನಿರ್ಮಾಣ ಕಾಮಗಾರಿ (RDPR/2025-26/RD/WORK_INDENT21391/Call-2) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 455.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್ ಮೆಂಟ್ ಮೊಬಲಗು (ರೂ.ಗಳಲ್ಲಿ):** 382.08 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 5,75,500.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು
ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಮೊಬೈಲ್ ಸಂಖ್ಯೆ: ಸ.ಇಂ. 9901040070

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮೈಸೂರು

DIPR/DDMYS/1837/KSMCA/1039/2025-26

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.15/2025–26 ದಿನಾಂಕ : 18–03–2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿ) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ವಿವರಣೆ	ಅಂದಾಜು ಮೌಲ್ಯ
1	ಸಂಸ್ಥೆಯ ವಾಹನಗಳಿಗೆ ಸಿಸಿಟಿವ್ಹಿ ಕ್ಯಾಮರಾ ಸಿಸ್ಟಮ್‌ಗಳನ್ನು ಪೂರೈಸಿ, ಅಳವಡಿಸಿ, ಪರೀಕ್ಷಿಸಿ ಕಾರ್ಯಾರಂಭಗೊಳಿಸುವುದು.	ರೂ. 1.98 ಕೋಟಿ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ : 26–03–2026 ಘಂಟೆ: 17:30 ವರೆಗೆ.

ವಿವರಗಳಿಗಾಗಿ ವೆಬ್ ಸೈಟ್ : http://kppp.karnataka.gov.in ಅಥವಾ ಮೊಬೈಲ್ ಫೋನ್ ಸಂಖ್ಯೆ : 7022009113 ಗೆ ಸಂಪರ್ಕಿಸಿ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರ)

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/1368/2025–26

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560009.
ದೂರವಾಣಿ: 080–22341230/35 ಇ–ಮೇಲ್: bmicapa@gmail.com

ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–03/109/2025–26/2849 ದಿನಾಂಕ: 18–03–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ)ರ ಪ್ರಕಾರ)

ಶ್ರೀ ಮಹೇಶ್. ಎಲ್.ಎಸ್ ಬಿನ್ ಲೇಟ್ ಎಲ್.ಎಸ್. ಶಿವರುದ್ರಯ್ಯ ಇವರು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, **ಶಿವಪುರ ಗ್ರಾಮದ** ಸರ್ವೆ ಸಂಖ್ಯೆ: **77/7** ರ 00 ಎಕರೆ – 30 ಗುಂಟೆ ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನಿನಲ್ಲಿ ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಾಣಿಜ್ಯ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು** ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾ.ಪ್ರ/6353/ಅಡ್ವರ್ಟೋರ್/2025–26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

ಅಲ್ಪಾವಧಿ ಟೆಂಡರ್ ಪ್ರಕಟಣೆ:
45/2025–26/4132–36 ದಿನಾಂಕ: 18–03–2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1,2,34 ರನ್ವಯ ಏಕಲಕೋಟೆ ಮತ್ತು ದ್ವಿಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಮಡಿಕೇರಿ, ಸೋಮವಾರಪೇಟೆ ಮತ್ತು ವಿರಾಜಪೇಟೆ ಉಪ–ವಿಭಾಗಗಳ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 5054–ಜಿಲ್ಲಾ ಮತ್ತು ಇತರ ರಸ್ತೆಗಳು ಸುಧಾರಣೆ (ಇಂಡೆಂಟ್ ಸಂಖ್ಯೆ:27741), 2059– (ಇಂಡೆಂಟ್ ಸಂಖ್ಯೆ:31806), 3054–ರಾ. ಹೆ.ರಸ್ತೆ 2 (25 :SE1099, SE1048, SE1131), 3054 ಜಿ.ಮೊ.ರಸ್ತೆ, (ಇಂಡೆಂಟ ಸಂಖ್ಯೆ SE1005, SE1132)3054–ರಾ ಹೆ .ರಸ್ತೆ, ಸೇ ನಿರ್ವಹಣೆ (ಇಂಡೆಂಟ್ ಸಂಖ್ಯೆ: 32108) 4059– ಮುಖ್ಯಮಂತ್ರಿರವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು (ಇಂಡೆಂಟ್ ಸಂಖ್ಯೆ: 33025, 32079, 32090),ಅಡಿಗಳಲ್ಲಿ ಒಟ್ಟು–12 ಕಾಮಗಾರಿಗಳನ್ನು ಇ–ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ.ಕನಿಷ್ಠ 2.03 ಲಕ್ಷ ಮತ್ತು ಗರಿಷ್ಟ ರೂ. 158.03 ಲಕ್ಷಗಳಾಗಿರುತ್ತದೆ. ಟೆಂಡ್ರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡ್ರ್ ಸಲ್ಲಿಸಲು ಕೊನೆಯ ದಿನಾಂಕ: 25–03–2026 ಸಂಜೆ 5.00 ಗಂಟೆಯಾಗಿರುತ್ತದೆ. ಟೆಂಡ್ರ್ ಸಂಪೂರ್ಣ ವಿವರಗಳನ್ನು ಇ–ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ– ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀರಿಂಗ್ ವಿಭಾಗ, ಬೆಳಗಾವಿ

ಕ್ರ.ಸಂ.:ಪಂರಾಇಂ/ವಿಬೆ/ಪಿಬಿ–2/ಟೆಂಡರ್–70/2025–26/8212 ದಿನಾಂಕ: 18–03–2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 & 2, ರಲ್ಲಿ ಒಟ್ಟು **13 (22699/CALL-2, 24014/CALL-2, 24072/CALL-2, 24075/CALL-2, 24055/CALL-2, 24063/CALL-2, 24065/CALL-2, 24081/CALL-2, 24098/CALL-2, 23650/CALL-2, 16119/CALL-5, 25379, 24104/CALL-2)** ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ **ರೂ. 150.00** ಹಾಗೂ **ರೂ.20.00 ಲಕ್ಷಗಳು** ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ **ರೂ. 1,50,000/– ಹಾಗೂ ರೂ. 25,000/–**ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: **25–03–2026 ಸಂಜೆ 17:28 ರೊಳಗಾಗಿ,** ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ **ದಿನಾಂಕ: 25–03–2026 ಸಂಜೆ 17.30 ಗಂಟೆಯವರೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 27–03–2026 ಮುಂಜಾನೆ 11:00 ಗಂಟೆಯ** ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 27–03–2026 ರಂದು ಮುಂಜಾನೆ 11.30 ಗಂಟೆಗೆ** ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.

ವಾ.ಸಾ.ಇ./ಬೆಳಗಾವಿ/2118/ 2025–26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಟೆಂ:2025-26:4690 ದಿನಾಂಕ: 18–03–2026

ಅಲ್ಪಾಕಾಲಾವಧಿ ಟೆಂಡರ್ ಪ್ರಕಟಣೆ

2025–26ನೇ ಸಾಲಿನ ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ, 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 3054–ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ಹಾಗೂ 3054–ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 04 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: 31656, 34218, 0800 & 692) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **30–03–2026** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **01–04–2026** ಸಮಯ 11.00 ಗಂಟೆ (ಕ್ರ.ಸಂ.1 ರಿಂದ 2), ಟೆಂಡರ್ ತೆರೆಯುವ ದಿನಾಂಕ: **01–04–2026** ಸಮಯ 11.00 ಗಂಟೆ (ಕ್ರ.ಸಂ.3 ರಿಂದ 4), ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: **06–04–2026** ಸಮಯ 11.00 ಗಂಟೆ (ಕ್ರ.ಸಂ.1 ರಿಂದ 2), ಕನಿಷ್ಠ ಅಂದಾಜು ಮೊತ್ತ ರೂ. **12.00** ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. **985.00** ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು http://kppp.karnataka.gov.in ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ವಿಶೇಷ ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಬದಲಾವಣೆಯಾದಲ್ಲಿ, ಮರು ಟೆಂಡರ ಆಹ್ವಾನಿಸಿದಲ್ಲಿ ಹಾಗೂ ಇತರೆ ಬದಲಾವಣೆಯಾದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/762/ಕೆಎಸ್‌ಎಂಸಿಎ/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–432/24–25/4488/2025–26 ದಿನಾಂಕ: 18.03.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಸಿ.ಚೇತನ್‌ಕುಮಾರ್	ಯಲಹಂಕ	ಜಾಲ	ಸಾತನೂರು	127	9–32	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ ಹಾಗೂ ಈ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ಜಮೀನಿನ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು (ಪಶ್ಚಿಮ), ಸಿವಿಲ್ ವಿಭಾಗ ಸಯ್ಯಾಜಿರಾವ್ ರಸ್ತೆ, ಮೈಸೂರು ಇ–ಮೇಲ್– eewmccmys@gmail.com

ಸಂಖ್ಯೆ: ಮೈನಪಾ/ಕಾ.ಇಂ(ಪ)/ಸಾ.ಟೆಂ.ಪ್ರ–30/2025–26 ದಿನಾಂಕ: 17.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ

ಕ್ರ ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
	ಸಿವಿಲ್ ಕಾಮಗಾರಿಗಳು					
1	ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ(ಪ)/ಟಿ.ಎನ್–84/ 2025–26, ದಿನಾಂಕ:13.03.2026	05	296.06	16.03.2026 ಬೆಳಿಗ್ಗೆ 11 ರ ನಂತರ	23.03.2026 ಸಂಜೆ 5.25 ವರೆಗೆ	24.03.2026 ಸಂಜೆ 5.30 ಕ್ಕೆ
2	ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ(ಪ)/ಟಿ.ಎನ್–85/ 2025–26, ದಿನಾಂಕ:16.03.2026	08	389.50	17.03.2026 ಬೆಳಿಗ್ಗೆ 11 ರ ನಂತರ	24.03.2026 ಸಂಜೆ 5.25 ವರೆಗೆ	25.03.2026 ಸಂಜೆ 5.30 ಕ್ಕೆ
3	ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ(ಪ)/ಟಿ.ಎನ್–86/ 2025–26, ದಿನಾಂಕ:16.03.2026	10	489.64	17.03.2026 ಬೆಳಿಗ್ಗೆ 11 ರ ನಂತರ	24.03.2026 ಸಂಜೆ 5.25 ವರೆಗೆ	25.03.2026 ಸಂಜೆ 5.30 ಕ್ಕೆ
4	ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ(ಪ)/ಟಿ.ಎನ್–87/ 2025–26, ದಿನಾಂಕ:17.03.2026	09	142.67	18.03.2026 ಬೆಳಿಗ್ಗೆ 11 ರ ನಂತರ	01.04.2026 ಸಂಜೆ 5.25 ವರಗೆ	02.04.2026 ಸಂಜೆ 5.30 ಕ್ಕೆ
5	ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ(ಪ)/ಟಿ.ಎನ್–88/ 2025–26, ದಿನಾಂಕ:17.03.2026	07	48.60	24.03.2026 ಬೆಳಿಗ್ಗೆ 11 ರ ನಂತರ	09.04.2026 ಸಂಜೆ 5.25 ವರೆಗೆ	10.04.2026 ಸಂಜೆ 5.30 ಕ್ಕೆ
	Goods Tender (3 work) & Expression of Interest (1 work)					
6	ಟೆಂಡರ್ ಪ್ರಕಟಣೆ ಸಂಖ್ಯೆ: ಹೆಚ್1/ಪವಿ/101/2022–23, ದಿನಾಂಕ:17.03.2026	04	217.93	20.03.2026 ಬೆಳಿಗ್ಗೆ 11 ರ ನಂತರ	30.03.2026 & 06.04.2026 ಸಂಜೆ 5.25 ವರೆಗೆ	01.04.2026 &07.04.2026 ಸಂಜೆ 5.30 ಕ್ಕೆ

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾರ್ಯಪಾಲಕ ಅಭಿಯಂತರರು (ಪ) ಸಿವಿಲ್ ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು (ಪ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/1855/ಶಿರಡಿ ಸಾಯಿ/2025–26

ನಗರಸಭಾ ಕಾರ್ಯಾಲಯ, ಶಿರಾ

ನ.ಸ.ಶಿ/ತಾಂಶಾ/ಸಿ.ಆರ್/87/2025–26 ದಿನಾಂಕ: 16.03.2026

"ಧರಪಟ್ಟಿಕೋರಿ ಪ್ರಕಟಣೆ"

ಶಿರಾ ನಗರಸಭಾ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಶಿರಾ ನಗರಸಭೆ ಮಲಿನ ನೀರು ಸಂಸ್ಕರಣ ಘಟಕದಲ್ಲಿ ವಾರ್ಷಿಕ ನಿರ್ವಹಣಾ ಕಾಮಗಾರಿಯನ್ನು ನಿರ್ವಹಿಸಲು ಅನುಮೋದಿತದರ ಎಸ್.ಆರ್‌ನಲ್ಲಿ ಲಭ್ಯವಿಲ್ಲದ ಪ್ರಯುಕ್ತ ಅಂದಾಜು ಪಟ್ಟಿಗೆ ಅಳವಡಿಸಿಕೊಳ್ಳಲು ಮಾತ್ರ ಸ್ಪರ್ಧಾತ್ಮಕಧರ ಸಲ್ಲಿಸಲು ಧರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಸಕ್ತಿಯುಳ್ಳ ಏಜೆನ್ಸಿದಾರರು / ಗುತ್ತಿಗೆದಾರರು ಈ ಕೆಳಕಂಡಂತಿರುವ ವಿವರಣೆಯಲ್ಲಿರುವ ತಮ್ಮ ಕಡಿಮೆ ದರಗಳನ್ನು ನಮೂದಿಸಿ ಧರಪಟ್ಟಿಗಳನ್ನು ದಿನಾಂಕ: 23/03/2026ರ ಸಂಜೆ 5–30 ಗಂಟೆಯೊಳಗೆ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು, ಸದರಿ ದರಗಳನ್ನು ಅಂದಾಜುಪಟ್ಟಿಗೆ ಅಳವಡಿಸಿಕೊಳ್ಳಲು ಮಾತ್ರ ಪರಿಗಣಿಸಲಾಗುವುದು ಎಂದು ತಿಳಿಯುವುದು.

ಕ್ರ. ಸಂ	ಕಾಮಗಾರಿಯ ಹೆಸರು	ಸಾಮಾಗ್ರಿಯ ಹೆಸರು& ವಿವರ	ಯುನಿಟ್	ಪರಿಮಾಣ	ನಮೂದಿಸಬೇಕಾದ ದರ ರೂ ಲಕ್ಷಗಳಲ್ಲಿ ಜಿ.ಎಸ್.ಟಿ ಹೊರತುಪಡಿಸಿ
01	ಶಿರಾ ನಗರಸಭಾ ವ್ಯಾಪ್ತಿಯಲ್ಲಿ 10.6 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಸಂಸ್ಕರಣ ಘಟಕದ (STP) ವಾರ್ಷಿಕ ನಿರ್ವಹಣಾ ಕಾಮಗಾರಿ.	ಎಲೆಕ್ಟ್ರೋ ಮೆಕ್ಯಾನಿಕಲ್ ಮೋಟಾರ್‌ಗಳು (1.5 ಹೆಚ್.ಪಿ ಮೋಟಾರ್)	Nos	01	
		ಏರ್ ಬ್ಲೋಯರ್‌ಗಳು (2670 Nm3/H)	Nos	01	
		ಏರೇಷನ್ ಫೈನ್ ಟ್ಯೂಬ್ ಡಿಫ್ಯೂಸರ್ (EPDM 900*1000mm)	Nos	01	
		ಲ್ಯಾಬ್ ರಾಸಾಯನಕಗಳು (Per Year)	Set	01	
		ಆಯಿಲ್, ಗ್ರೀಸ್, ವೇಸ್ಟ್, ಬೆಲ್ಟ್, ಇತ್ಯಾದಿ (Per Year)	Set	01	
		ವೆಟ್ ವೆಲ್ ರಾ ಸೀವೇಜ್ ಪಂಪ್ ಮೋಟಾರ್ (60ಹೆಚ್.ಪಿ ಮೋಟಾರ್)	Nos	01	
		ವಿದ್ಯುತ್ ಪ್ಯಾನೆಲ್ ಬೋರ್ಡ್	Nos	01	

ಹೆಚ್ಚಿನ ಮಾಹಿತಿಯನ್ನುಕಛೇರಿಯ ವೆಬ್ ಸೈಟ್ http://www.siracity.mrc.gov.in ನಲ್ಲಿ ವೀಕ್ಷಿಸಬಹುದಾಗಿರುತ್ತದೆ. ಹಾಗೂ ಕಛೇರಿ ವೇಳೆಯಲ್ಲಿ ತಾಂತ್ರಿಕ/ಗಣಕಯಂತ್ರ ಶಾಖೆಯಲ್ಲಿ ಪಡೆಯಬಹುದಾಗಿದೆ. ಕಛೇರಿಯ ಸೂಚನಾ ಫಲಕದಲ್ಲು ಪ್ರಕಟಿಸಲಾಗಿದೆ.

ಸಹಿ/–ಪೌರಾಯುಕ್ತರು
ನಗರಸಭೆ, ಶಿರಾ.

DIPR/TUM/502/KSMCA/2025-26

ಸಮಾಚಾರ ಸಣ್ಣದಲ್ಲ

ಕೃಷಿ ಇಲಾಖೆಯ 945 ಹುದ್ದೆ ಭರ್ತಿಗೆ ಕ್ರಮ

ವಿಧಾನಸಭೆ: ಕೃಷಿ ಇಲಾಖೆಯಲ್ಲಿ ಖಾಲಿಯಿರುವ 945 ಹುದ್ದೆಗಳಿಗೆ ಮೂರ್ನಾಲ್ಕು ತಿಂಗಳಲ್ಲಿ ನೇಮಕ ಪೂರ್ಣಗೊಳಿಸಲಾಗುವುದು ಎಂದು ಕೃಷಿ ಸಚಿವ

ಎನ್.ಚೆಲುವ ರಾಯ ಸ್ವಾಮಿ ತಿಳಿಸಿದರು. ಶಾಸಕ ಕಿರಣ ಕುಮಾರ ಕೊಡ್ಗಿ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, 2018 ರಲ್ಲಿ ಕೃಷಿ ಇಲಾಖೆಗೆ 370 ಸಿಬ್ಬಂದಿ ನೇಮಕ ಮಾಡಿ ಕೊಳ್ಳಲಾಗಿತ್ತು. ಅನಂತರ 2023ರ ವರೆಗೆ ಯಾವುದೇ ನೇಮಕಾತಿಗಳಾಗಿಲ್ಲ. ನಮ್ಮ ಸರ ಕಾರ ಅಧಿಕಾರಕ್ಕೆ ಬಂದ ಬಳಿಕ 945 ಹುದ್ದೆಗಳ ನೇಮ ಕಾತಿಗೆ ಆರ್ಥಿಕ ಇಲಾಖೆಯಿಂದ ಒಂದು ವರ್ಷದ ಹಿಂದೆಯೇ ಅನುಮತಿ ಪಡೆಯಲಾಗಿದೆ. ಆದರೆ ಒಳ ಮೀಸ ಲಾತಿಯ ಗೊಂದಲದಿಂದಾಗಿ ನೇಮಕಾತಿ ಪೂರ್ಣ ಗೊಂಡಿಲ್ಲ ಎಂದರು. ಕೃಷಿ ಅಧಿಕಾರಿ ಹುದ್ದೆ ಗಳಿಗೆ 128, ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗೆ 817, ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ 61, ದ್ವಿತೀಯ ದರ್ಜೆ ಸಹಾಯಕರ 17 ಹುದ್ದೆಯ ನೇಮಕಾತಿಗೆ ಅನುಮತಿ ದೊರೆತಿದೆ. ಮೂರ್ನಾಲ್ಕು ತಿಂಗಳಲ್ಲೇ ಈ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಸಿಬ್ಬಂದಿ ಕೊರತೆಯಿಂದಾಗಿ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ ಎಂದರು.

ವೈಷ್ಣೋದೇವಿ ಯಾತ್ರಿಗೆ ಸಹಾಯ ಧನ

ವಿಧಾನ ಪರಿಷತ್: ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡುವ ಯಾತ್ರಿಗಳಿಗೆ ತಲಾ 5 ಸಾವಿರ ಸಹಾಯ ಧನ ಯೋಜನೆ ಜಾರಿ ಮಾಡಲಾಗಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಜೆಡಿಎಸ್‌ನ ಮಂಜೇಗೌಡ ಪ್ರಶ್ನೆಗೆ ಉತ್ತರ ನೀಡಿದ ಅವರು, ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡುವ ಯಾತ್ರಿಗಳಿಗೆ ತಲಾ 5 ಸಾವಿರ ಸಹಾಯಧನ ಯೋಜನೆ ಜಾರಿ ಮಾಡಲಾಗಿದೆ. ಇದಕ್ಕಾಗಿ ಸರಕಾರ 5 ಕೋಟಿ ಹಣ ಮೀಸಲು ಇಡಲಾಗಿದೆ. 2026-27ನೇ ಸಾಲಿನಿಂದ ಯೋಜನೆ ಅನುಷ್ಠಾನ ಮಾಡಲಾಗುತ್ತದೆ ಎಂದರು. ಇದಲ್ಲದೇ, ಕೈಲಾಸ ಮಾನಸ ಸರೋವರ ಯಾತ್ರಿಗಳಿಗೆ 30 ಸಾವಿರ, ಚಾರ್ ಧಾಮ್‌ಗೆ 20 ಸಾವಿರ ಮತ್ತು ಕಾಶಿ ಯಾತ್ರಿಗೆ 5 ಸಾವಿರ ಸಹಾಯಧನ ನೀಡಲಾಗುತ್ತದೆ. ಅರ್ಚ ಕರಿಗೆ ಉಚಿತವಾಗಿ ಯಾತ್ರೆ ಮಾಡಿಸಲಾಗುತ್ತದೆ. ವರ್ಷಕ್ಕೆ 2,500 ಅರ್ಚಕರಿಗೆ ಉಚಿತ ಪ್ರವಾಸ ಕೊಡಿಸಲಾಗುತ್ತದೆ. ಯಾತ್ರಿಗಳು ವೈಷ್ಣೋದೇವಿ ಸೇರಿ ಯಾತ್ರೆಗೆ ಹೋಗಿ ಫೋಟೋ ಅಪ್ಲೋಡ್ ಮಾಡಿದರೆ ಸಹಾಯಧನ ಅವರ ಮನೆಗೆ ಕೊಲಾಗುತ್ತದೆ. ಯಾರು ಬೇಕಾದರೂಯಾತ್ರೆಗೆ ಹೋಗಬಹುದು. ಫಸ್ಟ್ ಕಮ್ ಫಸ್ಟ್ ಸರ್ವೀಸ್ ನೀಡಲಾಗುತ್ತದೆ ಎಂದು ಹೇಳಿದರು.

ಶಿಳ್ಳೆಕ್ಯಾತ ಸಮುದಾಯ ಪರಿಶಿಷ್ಟರ ಪಟ್ಟಿಗೆ ಸೇರಿಸಿ

ವಿಧಾನಸಭೆ: ಶಿಳ್ಳೆಕ್ಯಾತ ಸಮುದಾಯ ಈಗಾಗಲೇ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿದ್ದು, ಈ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ರಾಜ್ಯ

ಸರಕಾರಕ್ಕೆ ಅಧಿಕಾರ ಇಲ್ಲ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು. ವಿಧಾನ ಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಬಾದಾಮಿ ಕ್ಷೇತ್ರದ ಶಾಸಕ ಬಿ.ಬಿ.ಚಿಮ್ಮನಕಟ್ಟಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 1977ರ ಜುಲೈ 27ರಂದು ಕೇಂದ್ರ ಸರಕಾರ ಅಧಿ ಸೂಚಿಸಿರುವ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ರಾಜ್ಯದ 101 ಸಮುದಾಯಗಳು ಸೇರಿವೆ. ಅದರಲ್ಲಿ ಶಿಳ್ಳೆಕ್ಯಾತ ಸಮುದಾಯವು ಸೇರಿದೆ. 2002ರ ಮಾರ್ಚ್ 30ರಂದು ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಕಟಿಸಿರುವ ಪಟ್ಟಿಯಲ್ಲಿ ಕಿಳ್ಳೆಖ್ಯಾತ ಸಮುದಾಯ ಸೇರ್ಪಡೆಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಜಾತಿ ಪ್ರಮಾಣ ಪತ್ರ ನೀಡಬೇಕಾದರೆ ಅವರು ಮನೆಗಳಿಗೆ ಭೇಟಿ ನೀಡುತ್ತಾರೆ. ಗ್ರಾಮದಲ್ಲಿ ವಿಚಾರಣೆ ನಡೆಸುತ್ತಾರೆ. ಅವಕಾಶ ಇದ್ದರೆ ಸರಕಾರಗಳ ಆದೇಶ ಆಧರಿಸಿ ಕ್ರಮ ಕೈಗೊಳ್ಳುತ್ತಾರೆ ಎಂದರು. ವಿಧಾನಸಭೆಯ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಕಿಳ್ಳೆಕ್ಯಾತ ಮತ್ತು ಶಿಳ್ಳೆಖ್ಯಾತ ಸಮುದಾಯ ಏಕತೆ ಹೊಂದಿವೆ. ಮಹಾರಾಷ್ಟ್ರದಲ್ಲಿ ಈ ಎರಡು ಪರಿಶಿಷ್ಟ ಜಾತಿಗೆ ಸೇರಿವೆ. ಹೀಗಾಗಿ ಕರ್ನಾಟಕದಲ್ಲೂ ಇವುಗಳನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸಿದರು.

ದಿನ ವಿಶೇಷ

19 ಮಾರ್ಚ್ 2026 ಗುರುವಾರ

» ಸೂರ್ಯೋದಯ	:	06-26
» ಸೂರ್ಯಾಸ್ತ	:	06-30
» ತಿಥಿ	:	ಅಮವಾಸ್ಯೆ
» ನಕ್ಷತ್ರ	:	ಉ.ಭಾ
» ಸಂವತ್ಸರ	:	ವಿಶ್ವಾವಸು
» ಆಯನ	:	ಉತ್ತರಾಯಣ
» ಋತು	:	ಸೌರ ವಸಂತ
» ಮಾಸ	:	ಪುಷ್ಯ
» ಪಕ್ಷ	:	ಕೃಷ್ಣಪಕ್ಷ

ಮಧ್ಯವರ್ತಿಗಳಿಲ್ಲದೆ ಆಟೋ ಮ್ಯುಟೇಶನ್ | ಮೂಗರ್ಜಿ ತಕರಾರಿಗೆ ಶಾಶ್ವತ ಪರಿಹಾರ

ಶೇ.98ರಷ್ಟು ಖಾತೆ ಆಟೋ ಮ್ಯುಟೇಶನ್

ವಿಶ್ವವಾಣಿ ಸುದ್ದಿಮನೆ ವಿಧಾನಪರಿಷತ್

ಆಸ್ತಿ ನೋಂದಣಿ ನಂತರ ಖಾತೆಗಳು ಸ್ವಯಂ ಚಾಲಿತವಾಗಿ ಬದಲಾವಣೆಯಾಗಬೇಕು ಎಂಬ ನಿಟ್ಟಿನಲ್ಲಿ ಆಟೋ ಮ್ಯುಟೇಶನ್ ವ್ಯವಸ್ಥೆ ಜಾರಿಗೆ ತಂದಿದ್ದು, ಪ್ರಸ್ತುತ ಶೇ.98 ರಷ್ಟು ಖಾತೆಗಳು ಸ್ವಯಂ ಚಾಲಿತವಾಗಿ ಬದಲಾವಣೆ ಯಾಗುತ್ತಿವೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಪ್ರಶ್ನೋತ್ತರ ಅವಧಿಯಲ್ಲಿ ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಆಸ್ತಿ ನೋಂದಣಿಯ ನಂತರ ಖಾತೆ ಬದಲಾವಣೆ ವಿಳಂಬವಾಗುತ್ತಿದೆ ಎಂಬ ಬಗ್ಗೆ ದೂರು ಇದೆ. ಈ ನಿಟ್ಟಿನಲ್ಲಿ ಕಳೆದ ಒಂದು ವರ್ಷದಿಂದ ಎರಡು ಹಂತದಲ್ಲಿ ಸುಧಾರಣೆಗಳನ್ನು ತರಲಾಗಿದೆ. ಮೊದಲ ಹಂತದಲ್ಲಿ ಕಳೆದ ವರ್ಷ ಒಟ್ಟು ಖಾತೆ ಬದಲಾವಣೆ ಪೈಕಿ ಶೇ.66 ರಷ್ಟು ಖಾತೆಗಳನ್ನು ಆಟೋ ಮ್ಯುಟೇಶನ್ ಮಾಡುವ ಮೂಲಕ ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆ ಜಾರಿ ಮಾಡಿದ್ದೇವೆ. ಕಳೆದ ತಿಂಗಳು ಮತ್ತೆ ಒಂದು ಹೆಜ್ಜೆ ಮುಂದಿಡಲಾಗಿದ್ದು, ಶೇ.98ರಷ್ಟು ಖಾತೆಗಳು ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆಯಾಗಲು ಆಟೋ ಮ್ಯುಟೇಶನ್ ಜಾರಿಗೆ ತಂದಿದ್ದೇವೆ ಎಂದು ತಿಳಿಸಿದರು.

ಪ್ರಸ್ತುತ ಖಾತೆ ಬದಲಾವಣೆ ಪೈಕಿ ಶೇ.98 ರಷ್ಟು ಸ್ವಯಂ ಚಾಲಿತವಾಗಿಯೇ ಖಾತೆ ಬದಲಾವಣೆ ಆಗುತ್ತಿದೆ. ಕೆಲವು ಅರ್ಜಿ ನೀಡಿದ ಮೂರು ಗಂಟೆ, ಕೆಲವು 8ನೇ ದಿನ, ಇನ್ನೂ ಕೆಲವು 16ನೇ ದಿನ ಕಾನೂನು ಪ್ರಕಾರವಾಗಿ ಖಾತೆ ಬದಲಾವಣೆ ಆಗುತ್ತವೆ. ಈ ಬಗ್ಗೆ ತಕರಾರು ದಾಖಲಾದರೆ ಮಾತ್ರ ಖಾತೆ ಬದಲಾವಣೆ ವಿಳಂಬವಾಗುತ್ತದೆ. ಇನ್ನುಳಿದಂತೆ ಯಾರನ್ನೂ ಭೇಟಿ ಮಾಡದೆ, ಮಧ್ಯವರ್ತಿಗಳ ಹಾವಳಿ ಇಲ್ಲದೆ ಸೇವೆಯನ್ನು ಪಡೆಯಬಹುದಾಗಿದ್ದು, ದೇಶದ ಇತಿಹಾಸದಲ್ಲೇ ಇದೊಂದು ಪ್ರಗತಿಪರ ಹೆಜ್ಜೆ ಎಂದು ಸಂತಸ ವ್ಯಕ್ತಪಡಿಸಿದರು.

5.70 ಲಕ್ಷ ಪೋಡಿ ಅರ್ಜಿ ಬಾಕಿ

ಸರಕಾರದಿಂದ ಮಂಜೂರಾಗಿರುವ ಜಮೀನುಗಳಿಗೆ ಸರಕಾರ ದಿಂದಲೇ ಪೋಡಿ ಮಾಡಿಸುವ ಅಭಿಯಾನ ಕೈಗೊಂಡಿದ್ದೇವೆ. 5.70 ಲಕ್ಷ ಪೋಡಿ ಅರ್ಜಿಗಳು ಬಂದಿದ್ದು, ವಿವಿಧ ಹಂತದಲ್ಲಿ ಪರಿಶೀಲನೆಯಲ್ಲಿವೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ವಿಧಾನಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಅವರು ಪ್ರಶ್ನೋತ್ತರ ವೇಳೆ ಮಾತನಾಡಿ, ರಾಜ್ಯದಲ್ಲಿ 5.70 ಲಕ್ಷ ಪೋಡಿ ಅರ್ಜಿಗಳು ಬಾಕಿಯಿವೆ. ಪೋಡಿಗಾಗಿ ಜನರು ಅಲೆಯುತ್ತಿದ್ದಾರೆ. ಸಚಿವರ ವೇಗಕ್ಕೆ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ದಕ್ಷಿಣ ಕನ್ನಡದಲ್ಲಿ ಮನೆ ಕಟ್ಟಲೂ ಪೋಡಿ ಸಮಸ್ಯೆ ವಿಪರೀತವಾಗಿದೆ ಎಂದರು. ಇದಕ್ಕೆ ಉತ್ತರಿಸಿದ ಸಚಿವರು, ಮೋಜಿಣಿ ತಂತ್ರಾಂಶದ ಮೂಲಕ ಈವರೆಗೂ ಸ್ವೀಕೃತವಾದ 5.70 ಲಕ್ಷ ಅರ್ಜಿಗಳಲ್ಲಿ 1.60 ಲಕ್ಷ ಅರ್ಜಿಗಳು ಪಹಣಿ ತಿದ್ದುಪಡಿಯಾಗಿ ತಾಲೂಕು ಕಚೇರಿಗಳಲ್ಲಿ ಪರಿಶೀಲನೆ ಹಂತದಲ್ಲಿವೆ. 4.09 ಲಕ್ಷ ಅರ್ಜಿಗಳು ಅಳತೆ ಮತ್ತು ವಿವಿಧ ಹಂತದಲ್ಲಿ ಭೂ ಮಾಪನ ಇಲಾಖೆಯಲ್ಲಿ ಬಾಕಿಯಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 60, 943 ಅರ್ಜಿಗಳ ಪೋಡಿ ಮಾಡಲು ಆದೇಶಿಸಲಾಗಿದೆ. ಈ ಪೈಕಿ 23,621 ಅರ್ಜಿಗಳು ಪೋಡಿ ಆಗಿವೆ. ಉಳಿದ ಬಾಕಿ ಪೋಡಿ ಅರ್ಜಿಗಳು ಡಿಸೆಂಬರ್‌ನೊಳಗೆ ಮುಗಿಸಲಾಗುವುದು ಎಂದು ಭರವಸೆ ನೀಡಿದರು.

137 ತಕರಾರು ಅರ್ಜಿ ಮಾತ್ರ ಬಾಕಿ

ನಾವು ಜವಾಬ್ದಾರಿ ಸ್ವೀಕರಿಸುವ ಮುನ್ನ ತಹಸೀಲ್ದಾರ್ ನ್ಯಾಯಾಲಯದಲ್ಲಿ ಅವಧಿ ಮೀರಿದ 10,774 ತಕರಾರು ಪ್ರಕರಣಗಳು ಬಾಕಿ ಇದ್ದವು. ಈ ಪೈಕಿ ಪ್ರಸ್ತುತ 137 ಪ್ರಕರಣಗಳು ಮಾತ್ರ ಬಾಕಿ ಇವೆ. ಎಸಿ ನ್ಯಾಯಾಲಯಗಳಲ್ಲಿ73,634 ಪ್ರಕರಣಗಳು ಬಾಕಿ ಇದ್ದವು. ಈ ಪೈಕಿ ಪ್ರಸ್ತುತ 10,255 ಪ್ರಕರಣಗಳು ಬಾಕಿ ಇವೆ. ಇನ್ನೂ ಐದು ವರ್ಷಕ್ಕೂ ಮೀರಿದ 32,787 ಪ್ರಕರಣಗಳ ಪೈಕಿ 2894 ಪ್ರಕರಣಗಳು ಮಾತ್ರ ಬಾಕಿ ಇವೆ. ಅಸಲಿಗೆ ಕಂದಾಯ ಇಲಾಖೆಯಲ್ಲಿ ಎಲ್ಲೆಲ್ಲಿ ಈ ಸಮಸ್ಯೆ ಇದೆ ಹುಡುಕಿ ಪರಿಹಾರ ಮಾಡುತ್ತಿದ್ದೇವೆ. ಪ್ರಕರಣ ವಿಲೇವಾರಿಗೆ ಬೆಂಗಳೂರಿಗೆ ಮಾತ್ರ 8 ಜನ ವಿಶೇಷ ಜಿಲ್ಲಾಧಿಕಾರಿ ನೇಮಕ ಮಾಡಲಾಗಿದೆ. ರಾಜ್ಯಾದ್ಯಂತ 27 ವಿಶೇಷ ಎಸಿಗಳನ್ನು ನೇಮಕ ಮಾಡಲಾಗಿದೆ. ಈ ಮೂಲಕ ಹತ್ತಾರು ವರ್ಷಗಳಿಂದ ಬಾಕಿ ಇದ್ದ ಶೇ.90 ರಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಹೊಸ ಬಸ್‌ಗಳ ಖರೀದಿಗೆ ಟೆಂಡರ್: ರಾಮಲಿಂಗಾರೆಡ್ಡಿ

ವಿಧಾನ ಪರಿಷತ್: ಹೊಸ ಬಸ್ ಖರೀದಿಗೆ ಟೆಂಡರ್ ಕರೆಯಲಾಗಿದ್ದು, ಎಲ್ಲೆಲ್ಲಿ ಕೊರತೆ ಇದೆಯೋ ಅಂತಹ ಕಡೆ ಆದ್ಯತೆ ಮೇರೆಗೆ ಬಸ್‌ಗಳನ್ನು ಒದಗಿಸುತ್ತೇವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಸದಸ್ಯರಾದ ಭಾರತಿ ಶೆಟ್ಟಿ ಹಾಗೂ ಗೋವಿಂದ್ ರಾಜ್ ಅವರ ಪ್ರಶ್ನೆಗೆ

ಕೊರತೆ ಇರುವ ಕಡೆ ಆದ್ಯತೆ ಮೇರೆಗೆ ಬಸ್‌ಗಳ ಪೂರೈಕೆ

ಉತ್ತರಿಸಿದ ಸಚಿವರು, ನಾವು ಬಂದ ಮೇಲೆ ಸುಮಾರು ಆರು ಸಾವಿರ ಹೊಸ ಬಸ್ ಖರೀದಿ ಮಾಡಲು ತೀರ್ಮಾನಿಸಿದ್ದೇವೆ. ಇದರ ಮೊದಲ ಭಾಗವಾಗಿ ಹೊಸ ಬಸ್ ಖರೀದಿಗೆ ಟೆಂಡರ್ ಕರೆಯಲಾಗಿದೆ. ಸಿಎಂ ಸಿದ್ದರಾಮಯ್ಯ ಅವರು 2 ಸಾವಿರ ಕೋಟಿ ರು. ಸಾಲ ಕೊಟ್ಟಿದ್ದಾರೆ, ಅದನ್ನ ಕೆ ಎಸ್‌ಆರ್ ಟಿಸಿ ತೀರಿಸುತ್ತಿದೆ. ಇಲಾಖೆಯಲ್ಲಿ ಒಟ್ಟು 6 ಸಾವಿರ ಕೋಟಿ ರು. ಸಾಲವಿದೆ. ಇದನ್ನು ಸರಕಾರವೇ ತೀರಿಸಲಿದೆ. ನಾನು ಮಂತ್ರಿ ಆದಾಗ 4099 ಕೋಟಿ ಸಾಲ ಇತ್ತು. ಹಿಂದಿನ ಸರಕಾರ ಬಸ್ ಖರೀದಿ ಮಾಡಿರಲಿಲ್ಲ, ನೇಮಕಾತಿ ಆಗಿರಲಿಲ್ಲ. ನಮ ಸರಕಾರ ಬಂದ ಮೇಲೆ ಸುಮಾರು 6 ಸಾವಿರ ಹೊಸ ಬಸ್ ನಾವು ಖರೀದಿ ಮಾಡಿದ್ದೇವೆ. ಅವಧಿ ಮೀರಿರುವ ಯಾವುದೇ ಬಸ್ ನಮ್ಮಲ್ಲಿ ಇಲ್ಲ. 1 ಲಕ್ಷ ನಿತ್ಯ ಬಸ್ ಟ್ರಿಪ್ ಇದೆ, ಒಂದೋ ಎರಡೋ ಸಮಸ್ಯೆ ಆಗಬಹುದು. ಇದು ಇಂದೂ ಆಗುತ್ತಿದೆ, ಮುಂದೆಯೂ ಆಗುತ್ತದೆ ಎಂದರು. ಇದಕ್ಕೂ ಮುನ್ನ ಸದಸ್ಯೆ ಭಾರತಿ ಶೆಟ್ಟಿ ಅವರು, ಶಕ್ತಿ ಯೋಜನೆ ಹಣ ಸರಕಾರದಿಂದ ಬಾಕಿ ಇದೆ. ಇದರಿಂದ ಇಲಾಖೆಗೆ ಆರ್ಥಿಕ ಕೊರತೆ ಉಂಟಾಗಿದೆ. ನಮ ಕಾಲದಲ್ಲಿ ಬಸ್ ಸರಿ ಇತ್ತು. ಅದಕ್ಕೆ ಹೊಸ ಬಸ್ ಖರೀದಿ ಮಾಡಿಲ್ಲ. ಈಗ ಸರಿಯಿಲ್ಲ. ಹೊಸ ಬಸ್ ಖರೀದಿ ಮಾಡಬೇಕು. ನಿಮ ಅವಧಿಯಲ್ಲಿ ಕಳೆದ ವರ್ಷ ಖರೀದಿ ಮಾಡಿದ್ದ ಬಸ್ಗಳು ಇನ್ನು ಬಂದಿಲ್ಲ. ಈ ವರ್ಷದ ಬಸ್ ಕೂಡಾ ಇನ್ನು ಬಂದಿಲ್ಲ. ಯಾವಾಗ ಬಸ್ ಬರುತ್ತದೆ? ಎಂದು ಪ್ರಶ್ನೆ ಮಾಡಿದರು.

ಸದಸ್ಯ ಗೋವಿಂದ್ ರಾಜ್, ಕೇಂದ್ರದ ಜಿಸಿಸಿ ಬಸ್ ಯಾವಾಗ ಬರುತ್ತದೆ? ಶಕ್ತಿ ಯೋಜನೆಯಿಂದ 4 ಸಾವಿರ ಕೋಟಿ ರು. ಬಾಕಿ ಇದೆ. ಶಕ್ತಿ ಯೋಜನೆ ಆತುರವಾಗಿ ಜಾರಿ ಮಾಡಿದಿರಿ. ಶಕ್ತಿ ಯೋಜನೆಗೆ ಬಾಕಿ ಹಣ ತಗೊಂಡು ಹೊಸ ಬಸ್ ಖರೀದಿ ಮಾಡಬೇಕು. ನೌಕರರ ವೇತನ ಪರಿಷ್ಕರಣೆ ಮಾಡಿ ಎಂದು ಒತ್ತಾಯಿಸಿದರು.

ಧಾರ್ಮಿಕ ಕಾರ್ಯಕ್ರಮದಲ್ಲಿ ಡಿಜೆ ನಿಷೇಧಿಸುವ ಬಗ್ಗೆ ಚರ್ಚೆ

ವಿಧಾನಸಭೆ: ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳ ವೇಳೆಯಲ್ಲಿ ಬಳಸಲಾಗುತ್ತಿರುವ ಡಿಜೆ ಗಳ ಬಗ್ಗೆ ವಿಧಾನಸಭೆಯಲ್ಲಿ ವ್ಯಾಪಕ ಚರ್ಚೆ ನಡೆಯಿತು.

ಶಿವಮೊಗ್ಗ ಶಾಸಕ ಚನ್ನಬಸಪ್ಪ, ಸಹ್ಯಾದ್ರಿ ಉತ್ಸವಕ್ಕೆ ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, 2020ರಲ್ಲಿ ಸಹ್ಯಾದ್ರಿ ಉತ್ಸವ ಆಗಿತ್ತು. ನಂತರ ಸ್ಥಗಿತಗೊಂಡಿದೆ. ದಸರಾ ಉತ್ಸವಕ್ಕೆ 50

ಲಕ್ಷ ಸರಕಾರ ಅನುದಾನ ಒದಗಿಸಿದೆ. ಇತ್ತೀಚಿಗೆ ಎಲ್ಲಾ ಜಿಲ್ಲೆಗಳಲ್ಲಿ ಉತ್ಸವ ನಡೆಸುವ ಸಂಪ್ರದಾಯ ತಲೆ ಎತ್ತಿದೆ. ಬಜೆಟಿನ ಅನುದಾನದ ಲಭ್ಯತೆ ಇದಕ್ಕೆ ಅಡ್ಡಿಪಡಿಸುತ್ತಿದೆ. ಅಲ್ಲದೆ, ಆರ್ಥಿಕ ಹಿನ್ನೆಲೆ ಇರುವ ಸ್ಥಳಗಳಲ್ಲಿ ಉತ್ಸವ ನಡೆಸುವುದು ಸೂಕ್ತ. ಆದರೆ ಜಿಲ್ಲೆಗಳಲ್ಲಿ ಉತ್ಸವ ನಡೆಸಬೇಕಾದರೆ ಕೋಟ್ಯಂತರ ರೂಪಾಯಿ ಹಣ ಖರ್ಚಾಗುತ್ತದೆ. ಮೂರು ದಿನ ಕಾರ್ಯಕ್ರಮ ಮಾಡಿ ಕೈಬಿಡುವುದರಿಂದ ಅಂತಹ ಬದಲಾವಣೆಗಳೇನು ಆಗುವುದಿಲ್ಲ ಎಂದರು. ಸಭಾಧ್ಯಕ್ಷ ಯು.ಟಿ.ಖಾದರ್, ಕರ್ನಾಟಕ ವೈವಿಧ್ಯಮಯ ಸಂಸ್ಕೃತಿ ಹೊಂದಿರುವ ರಾಜ್ಯ. ಜಿಲ್ಲಾ ಉತ್ಸವಗಳನ್ನು ನಡೆಸುವುದು ತಪ್ಪಲ್ಲ. ಕನಿಷ್ಠ ಪ್ರಾದೇಶಿಕವಾರು ಉತ್ಸವಗಳನ್ನಾದರೂ ನಡೆಸಿ ಎಂದು ಸಲಹೆ ನೀಡಿ ಈ ವಿಷಯವಾಗಿ ಸ್ಪಷ್ಟ ನೀತಿ ರೂಪಿಸುವಂತೆ ಸೂಚಿಸಿದರು.

ಡಿಜೆ ನಿಷೇಧಿಸಲು ಸರಕಾರ ಸಿದ್ಧ

ಸಚಿವ ಶಿವರಾಜ ತಂಗಡಗಿ, ಡಿಜೆ ಬಳಕೆಗೆ ನಿಷೇಧ ಹೇರಿ ಆದೇಶ ಹೊರಡಿಸಲು ರಾಜ್ಯ ಸರಕಾರ ಸಿದ್ಧವಿದೆ. ಇದಕ್ಕೆ ಬಿಜೆಪಿಯವರು ಸಹಕಾರ ನೀಡಬೇಕು ಎಂದರು. ಶಿವಮೊಗ್ಗದ ಶಾಸಕ ಚನ್ನಬಸಪ್ಪ ಹುಬ್ಬಳ್ಳಿ ಧಾರವಾಡ ಜಿಲ್ಲೆಯಲ್ಲಿ ಬೇಕಾದರೆ ಡಿಜೆ ಮಾಡಿ, ನಮಗೆ ಡಿಜೆ ಬೇಕು. ರಾಜ್ಯ ಸರಕಾರಕ್ಕೆ ತಾಕತ್ತಿದ್ದರೆ ಸುಪ್ರೀಂಕೋರ್ಟಿನ ಆದೇಶದ ಅನುಸಾರ ಆಝಾನ್ ಅನ್ನು ನಿಷೇಧ ಮಾಡಲಿ ಎಂದು ಸವಾಲು ಹಾಕಿದರು. ಇದಕ್ಕೆ ಆಡಳಿತ ಪಕ್ಷದ ಕೆಲ ಸಚಿವರು ಶಾಸಕರು ಆಕ್ಷೇಪ ವ್ಯಕ್ತಪಡಿಸಿದರು. ಸಭಾಧ್ಯಕ್ಷ ಯು.ಟಿ.ಖಾದರ್, ಸುಪ್ರೀಂಕೋರ್ಟ್ ಆದೇಶ ಇರುವುದು ಶಬ್ದ ಮಾಲಿನ್ಯ ಮಿತಿ ಪಾಲನೆ ಮಾಡಲಿಕ್ಕಾಗಿ. ಈ ವಿಚಾರವಾಗಿ ಹೆಚ್ಚಿನ ಚರ್ಚೆ ಬೇಡ ಎಂದರು. ಬಿಜೆಪಿಯ ಸುರೇಶ್ ಕುಮಾರ್ ಡಿಜೆ ಬಳಕೆಯ ವೇಳೆ ವ್ಯಾಪಕ ಶಬ್ದ ಮಾಲಿನ್ಯವಾಗುತ್ತದೆ. ಹೃದ್ರೋಗಿಗಳು, ಅದರಲ್ಲೂ ಫೇಸ್ ಮೇಕರ್ ಹಾಕಿಸಿಕೊಂಡಿರುವವರು ಒದ್ದಾಡುವುದನ್ನು ನೋಡಿದ್ದೇವೆ. ಎಳೆಯ ಮಕ್ಕಳು ಕಿವಿ ಮುಚ್ಚಿಕೊಳ್ಳುತ್ತಾರೆ. ಪೊಲೀಸರು ನಿಸ್ಸಹಾಯಕರಾಗಿರುತ್ತಾರೆ ಡಿಜೆ ಶಬ್ದ ಮಾಲಿನ್ಯದ ದುಷ್ಪರಿಣಾಮದ ಬಗ್ಗೆ ಗಂಭೀರ ಚರ್ಚೆ ಯಾಗಬೇಕು ಎಂದು ಹೇಳಿದರು.

ಇವ ನಮ್ಮವ ಇವ ನಮ್ಮವ ವಿಧೇಯಕ ಮಂಡನೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

2026ನೇ ಸಾಲಿನ ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿರುವ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ವಿಧೇಯಕದ ಪ್ರಸ್ತಾವವನ್ನು ಮುಖ್ಯಮಂತ್ರಿಗಳ ಪರವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿ ಮಂಡಿಸಿದರು.

ಕರ್ನಾಟಕ ರಾಜ್ಯದಲ್ಲಿ ಜಾತಿ ಆಧಾರಿತ ತಾರತಮ್ಯವು ನಿರಂತರವಾಗಿ, ಅಂತರ್ಜಾತಿ ವಿವಾಹಗಳ ಮೂಲ ಅವರ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ತಮ್ಮ ಸಾಂವಿಧಾನಿಕ ಹಕ್ಕನ್ನು ಚಲಾಯಿಸುವವರ, ವಿಶೇಷವಾಗಿ ಯುವ ವಯಸ್ಕರ ವಿರುದ್ಧ ಮರ್ಯಾದೆಗೇಡು ಹತ್ಯೆಗಳನ್ನು ಒಳಗೊಂಡಂತೆ ಕ್ರೂರ ಸ್ವರೂಪದ ಹಿಂಸಾಚಾರಗಳು ವ್ಯಕ್ತವಾಗುತ್ತಿರುವುದು ಮುಂದುವರೆಯುತ್ತಿರುವುರಿಂದ ವಿಧೇಯಕದ ಅಗತ್ಯವಿದೆ ಎಂದು ಅವರು ಹೇಳಿದರು.

ವಿಧೇಯಕವು ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಸಮಗ್ರತೆಯನ್ನು ಸುಭದ್ರಗೊಳಿಸುವ ಭ್ರಾತೃತ್ವದ ತತ್ವವನ್ನು ಪ್ರತಿಪಾದಿಸುತ್ತದೆ. ಅಲ್ಲದೆ, ಈ ತತ್ವವು ಜಾತಿ ಆಧರಿತ ತಾರತಮ್ಯವನ್ನು ನಿರ್ಮೂಲನೆ ಮಾಡಲು ಮತ್ತು ಅಂತರ್ಜಾತಿ ವಿವಾಹಗಳ ಮನ್ನಣೆ ಮತ್ತು ರಕ್ಷಣೆಯ ಮೂಲಕ ಸಾಮಾಜಿಕ ಒಗ್ಗಟ್ಟನ್ನು ಉತ್ತೇಜಿಸಲು, ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನು ಉಪಬಂಧಿಸಲು ಮತ್ತು ಜಾತಿ ಆಧರಿತ ಅಪರಾಧಗಳನ್ನು ಪ್ರತಿಬಂಧಿಸಲು ಮತ್ತು ನಿಷೇಧಿಸಲು, ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು, ಅಂತರ್ಜಾತಿ ವಿವಾಹಕ್ಕೆ ಗೌರವವನ್ನು ನೀಡಲು, ವೈಯಕ್ತಿಕ ಆಯ್ಕೆಗಳಲ್ಲಿ ಬಲವಂತದ ಜಾತಿ ಆಧರಿತ ತಾರತಮ್ಯವನ್ನು ಪ್ರತಿಬಂಧಿಸಲು ಮತ್ತು ಅಂತರ್ಜಾತಿಯ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸುವುದಕ್ಕೆ 'ಇವ ನಮ್ಮವ ಇವ ನಮ್ಮವ ವೇದಿಕೆ'ಯನ್ನು ರಚಿಸಲು ಶಾಸನವನ್ನು ರಚಿಸುವುದು ಅಗತ್ಯವೆಂದು ಪರಿಗಣಿಸಿ, ವಿಧೇಯಕದ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಿ ವಿಧೇಯಕದ ಪ್ರಸ್ತಾವವನ್ನು ಅಂಗೀಕರಿಸುವಂತೆ ಸಚಿವರು ಕೋರಿದರು.



ವಿಧೇಯಕದಲ್ಲಿ ಏನೇನಿದೆ?

- ಜಾತಿ, ಸಂಸ್ಕೃತಿ, ಸಂಪ್ರದಾಯ, ಗೌರವದಂತಹ ಹೆಸರಲ್ಲಿ ಯಾವುದೇ ವ್ಯಕ್ತಿ ಕೃತ್ಯಗಳನ್ನು ನಡೆಸುವ ಹಾಗಿಲ್ಲ.
- ಅಂತರ್ ಜಾತಿ ವಿವಾಹವಾಗುವ ಅಥವಾ ವಿವಾಹಿತರಿಗೆ ಕಿರುಕುಳ, ಬೇರ್ಪಡಿಸಲು ಯತ್ನಿಸುವುದು ಅಪರಾಧ.
- ಜೋಡಿಗಳು ಅಥವಾ ಅವರಿಗೆ ಸಂಬಂಧಿಸಿದ ವ್ಯಕ್ತಿಗಳ ಅಪಹರಣ ಮಾಡುವುದು, ಸಾಮಾಜಿಕ ಹಾಗೂ ಆರ್ಥಿಕ ಬಹಿ ಷ್ಕಾರ ಹಾಕುವುದು, ಬಲವಂತವಾಗಿ ಜೋಡಿಗಳು, ಅವರ ಕುಟುಂಬಸ್ಥರು, ಸಂಬಂಧಿಕರನ್ನು ಗ್ರಾಮ, ಮನೆ, ಪ್ರದೇಶ ಗಳಿಂದ ತೆರವು, ಸ್ಥಳಾಂತರ ಮಾಡುವುದು ಅಪರಾಧ.
- ಯುವಕರ ವಿರುದ್ಧ ಗೌರವ ಹತ್ಯೆಗಳಂತಹ ಅಪರಾಧಗಳು ಈ ಕಾನೂನಿನಲ್ಲಿ ನಿಷೇಧ. ಈ ಸಂಬಂಧ ವಿವಾಹಿತ ಅಥವ ಪ್ರೇಮಿಗಳಿಗೆ ಸಂಬಂಧಿಕರು, ಸ್ನೇಹಿತರ ಕೊಲೆ, ದೈಹಿಕ ಹಲ್ಲೆ ಮಾಡುವುದು ಮರ್ಯಾದಾ ಅಪರಾಧ.
- ಅಂತಹ ಜೋಡಿಗಳ ವಿರುದ್ಧ ತಿಥಿ, ಅಂತ್ಯಕ್ರಿಯೆ ಮಾಡು ವಂತಹ ಕೃತ್ಯಗಳು, ಮದುವೆಯಾದ ಜೋಡಿಗಳನ್ನು ಅಣ್ಣ, ತಂಗಿ ಎಂದು ಬಲವಂತವಾಗಿ ಘೋಷಿಸುವುದು, ಒತ್ತಡ ಹಾಕುವುದು, ಅವರ ಆಸ್ತಿ ಹಕ್ಕುಗಳಲ್ಲಿ ಮಧ್ಯ ಪ್ರವೇಶ ಮಾಡುವುದು, ಜೋಡಿಯನ್ನು ಮನೆಯಲ್ಲಿ ಬಂಧಿ ಮಾಡುವುದು, ಜೋಡಿಗಳನ್ನು ಕೆಲಸದಿಂದ ತೆಗೆದು ಹಾಕಿಸುವುದು, ದ್ವೇಷ ಹರಡುವುದು ಅಥವಾ ಮಾನಹಾನಿ ಮಾಡುವುದು ಅಪರಾಧ.

ಮರ್ಯಾದಾ ಹತ್ಯೆ ಮಹಾಪರಾಧ

ಮರ್ಯಾದೆ ಹತ್ಯೆಯ ಹೆಸರಿನ ಅಪರಾಧಗಳು ಜಾಮೀನು ರಹಿತ ಅಪರಾಧಗಳು ಎಂದು ವಿಧೇ ಯಕದಲ್ಲಿ ಹೇಳಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಜಾತಿ ಆಧಾರಿತ ತಾರತಮ್ಯವು ನಿರಂತರವಾಗಿ ಅಂತರ್ಜಾತಿ ವಿವಾಹಗಳ ಮೂಲಕ ಅವರ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ತಮ್ಮ ಸಾಂವಿಧಾನಕ ಹಕ್ಕನ್ನು ಚಲಾಯಿಸುವವರ ವಿಶೇಷವಾಗಿ ಯುವ ವಯಸ್ಕರ ವಿರುದ್ಧ ಮರ್ಯಾದೆಗೇಡು ಹತ್ಯೆಗಳನ್ನು ಒಳಗೊಂಡಂತೆ ಕ್ರೂರ ಸ್ವರೂಪದ ಹಿಂಸಾಚಾರಗಳು ವ್ಯಕ್ತವಾಗುತ್ತಿ ರುವುದು ತಡೆಯಲು ಈ ಕಾಯಿದೆಯ ಉದ್ದೇಶ ಎಂದು ವಿಧೇಯಕದಲ್ಲಿ ಹೇಳಲಾಗಿದೆ.

ವೃತ್ತಿಗಳ, ಕಸುಬು ವಿಧೇಯಕ ಮಂಡನೆ

ಇದೇ ವೇಳೆ 2026ನೇ ಸಾಲಿನ ಕರ್ನಾಟಕ ವೃತ್ತಿಗಳ, ಕಸುಬುಗಳ, ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮುಖ್ಯಮಂತ್ರಿಗಳ ಪರವಾಗಿ ಸಚಿವ ಪ್ರಿಯಾಂಕ್ ಖರ್ಗೆ ಮಂಡನೆ ಮಾಡಿದರು. ಪ್ರಸ್ತಾವಿತ ತಿದ್ದುಪಡಿ ವಿಧೇಯಕವು ತೆರಿಗೆ ನಿರ್ವಹಣೆಯನ್ನು ಕ್ರಮಬದ್ಧಗೊಳಿಸುವುದು, ಸ್ವಯಂ ಅನುಸರಣೆಯನ್ನು ಸುಧಾರಿಸುವುದು ಹಾಗೂ ಇಲಾಖೆಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಕೆಯನ್ನು ಸಾಧ್ಯಗೊಳಿಸುವ ಉದ್ದೇಶ ಹೊಂದಿದೆ.

ಪ್ರತಿಪಕ್ಷಗಳ ವಿರೋಧದ ನಡುವೆ ಕರ್ನಾಟಕ ಮುನ್ಸಿಪಾಲಿಟಿ ತಿದ್ದುಪಡಿ ವಿಧೇಯಕ ಅಂಗೀಕಾರ

ಮನೆಗಳ ಮೇಲೆ ಹಾಕಿದ ಜಾಹೀರಾತಿಗೂ ತೆರಿಗೆ

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ಪ್ರತಿಪಕ್ಷಗಳ ತೀವ್ರ ವಿರೋಧದ ನಡುವೆಯೂ ಸದನದಲ್ಲಿ ಕರ್ನಾಟಕ ಮುನ್ಸಿಪಾಲಿಟಿ ಮತ್ತು ಕೆಲವು ಇತರೆ ಕಾನೂನು(ತಿದ್ದುಪಡಿ) ವಿಧೇಯಕ-2026 ಅಂಗೀಕಾರಗೊಂಡಿದೆ. ಗ್ರಾಮಾಂತರ ಪ್ರದೇಶದಲ್ಲಿ ಮನೆಗೆ ಹಾಕಿದ ಜಾಹೀರಾತಿಗೂ ತೆರಿಗೆ ವಿಧಿಸಲು ಮುಂದಾಗಿದ್ದು, ಜೀವನಕ್ಕೆ ಏನೋ ಮಾಡಿಕೊಂಡಿರುವವರಿಗೂ ತೆರಿಗೆ ಹಾಕುವಷ್ಟು ಸರಕಾರ ಬರಗೆಟ್ಟಿದ್ಯಾ ಎಂದು ವಿರೋಧ ಪಕ್ಷಗಳ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ ಪ್ರಸಂಗ ನಡೆದಿದೆ.

ರಾಜಕಾರಣಿಗಳು ಫ್ಲೆಕ್ಸ್ ಹಾಕುತ್ತಾರೆ, ಅವರಿಗೆ ಯಾವುದೇ ತೆರಿಗೆ ಇಲ್ಲ. ಹೀಗಿರುವಾಗ ಖಾಸಗಿಯಾಗಿ ಮನೆ ಮೇಲೆ ಜಾಹೀರಾತು ಹಾಕಿಕೊಂಡರೆ ನಿಮಗೇನು? ಎಂದು ರಾಜ್ಯ ಸರಕಾರಕ್ಕೆ ಜೆಡಿಎಸ್ ಸದಸ್ಯ ಎಸ್.ಎಲ್ .ಭೋಜೇಗೌಡ ಪ್ರಶ್ನೆ ಮಾಡಿದ್ದಾರೆ. ಮನೆ ಮೇಲೆ ಜಾಹೀರಾತು ಹಾಕಿದ್ದಕ್ಕೆ ತೆರಿಗೆ ಬೇಕಾ, ನಾಚಿಕೆ ಆಗಲ್ವಾ? ಎಂದು ತಿವಿದಿದ್ದಾರೆ. ಈ ವೇಳೆ ಚಿಕ್ಕಮಗಳೂರಲ್ಲಿ ನಿಮ್ಮ, ಸಿ.ಟಿ. ರವಿ ಫೋಟೋ ಇದೆ ಎಂದು ಸಚಿವ ಭೈರತಿ ಸುರೇಶ್ ಹೇಳಿದ್ದು, ನೀವು ಹೇಳಿದಂತೆ ಎಲ್ಲಾ ಕಡೆ ನನ್ನ ಫೋಟೋ ಇದ್ದರೆ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಭೋಜೇಗೌಡ ಸವಾಲು ಹಾಕಿದ ಪ್ರಸಂಗವೂ ನಡೆದಿದೆ.

ಈ ವೇಳೆ ಮಧ್ಯಪ್ರವೇಶಿಸಿದ ಪ್ರತಿಪಕ್ಷ ನಾಯಕ ನಾರಾಯಣಸ್ವಾಮಿ, ಸರಕಾರಿ ಜಾಗದಲ್ಲಿ ಜಾಹೀರಾತು ಹಾಕಿದರೆ ತೆರಿಗೆ ಹಾಕುವುದು ಸರಿ. ಆದರೆ ಖಾಸಗಿ ಜಾಗದಲ್ಲಿನ ಜಾಹೀರಾತಿಗೆ ಏಕೆ ತೆರಿಗೆ? ಇದನ್ನು ಕೈಬಿಡಬೇಕು. ಜಾಹೀರಾತು ಎನ್ನುವುದು ದೊಡ್ಡ ಮಾಫಿಯಾ, ಅದಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದ್ದಾರೆ. ಮತ್ತೊಂದೆಡೆ ತಮಿಳುನಾಡು, ಮುಂಬೈ ಮಾದರಿಯಲ್ಲಿ ಜಾಹೀರಾತು ನಿಯಮ ತನ್ನಿ. ಪಾರಂಪರಿಕ ಕಟ್ಟಡದ ಬಳಿ

ಯಾವುದೇ ಜಾಹೀರಾತು ಹಾಕಬಾರದು. ಫ್ಲೆಕ್ಸ್ ಹಾಕುವ ವ್ಯವಸ್ಥೆಯನ್ನೇ ರದ್ದುಮಾಡಬೇಕು. ಪ್ರಮುಖ ಜಂಕ್ಷನ್‌ಗಲ್ಲಿನ ಖಾಸಗಿ ಜಾಹೀರಾತಿಗೆ ತೆರಿಗೆ ಹಾಕಬೇಕು ಎಂದು ಕಾಂಗ್ರೆಸ್ ಸದಸ್ಯ ಶಿವಕುಮಾರ್ ಕೂಡ ಆಗ್ರಹಿಸಿದ್ದಾರೆ.

ಸರಕಾರಕ್ಕೆ ಯಾವುದೇ ಶುಲ್ಕ ಅಥವಾ ತೆರಿಗೆ ಪಾವತಿಸದೇ ಜಾಹೀರಾತು ಪ್ರದರ್ಶನ ಮಾಡುತ್ತಿರುವವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದ ಸಚಿವರು, ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿ ಇಂತಹ ಜಾಹೀರಾತುಗಳನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ. ಖಾಸಗಿ ಜಾಗದಲ್ಲಿ ಜಾಹೀರಾತು ಪ್ರದರ್ಶನ ಮಾಡಿದರೆ ಆ ಜಾಗದ ಮಾಲೀಕರಿಗೆ ತೆರಿಗೆ ವಿಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಸಚಿವರು, ಜಾಹೀರಾತು ನೀಡುವ ಕಂಪನಿಗೆ ತೆರಿಗೆ ವಿಧಿಸಲಾಗುತ್ತದೆ ಎಂದರು.

ಪಾರಂಪರಿಕ ತಾಣಗಳ ಸನಿಹ ಜಾಹೀರಾತು ನಿಷೇಧ

ಮಹಾನಗರ ಪಾಲಿಕೆಗಳು ಮತ್ತು ನಗರಸಭೆಗಳು ಮತ್ತು ಇತರೆ ಪಟ್ಟಣ ಪ್ರದೇಶಗಳಲ್ಲಿನ ಪಾರಂಪರಿಕ ಕಟ್ಟಡಗಳ ಗೋಡೆಗಳು ಮತ್ತು ಸುತ್ತಮುತ್ತ ವಾಣಿಜ್ಯ ಜಾಹೀರಾತುಗಳ ಪ್ರದರ್ಶನವನ್ನು ನಿಷೇಧಿಸಲಾಗುತ್ತದೆ. ಕಳೆದ ಏಳೆಂಟು ವರ್ಷ ಗಳಿಂದ ರಾಜ್ಯಾದ್ಯಂತ ಸಾವಿರಾರು ಅನಧಿಕೃತ ಜಾಹೀರಾತುಗಳನ್ನು ಪ್ರದರ್ಶಿಸಲಾಗುತ್ತಿದೆ. ಇದಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಯಾವುದೇ ರೀತಿಯ ಶುಲ್ಕ ಅಥವಾ ತೆರಿಗೆಯನ್ನು ಪಾವತಿಸುತ್ತಿಲ್ಲ. ಹೀಗಾಗಿ ನೂರಾರು ಕೋಟಿ ರು. ಆದಾಯ ಬರದಂತಾಗಿದೆ ಎಂದು ಸಚಿವ ಬೈರತಿ ಸುರೇಶ್ ಸದನಕ್ಕೆ ಮಾಹಿತಿ ನೀಡಿದರು.

ತೆರಿಗೆ ಸಂಗ್ರಹಿಸದೇ ನಗರ ಪಾಲಿಕೆಗಳನ್ನು ನಡೆಸುವುದು ಹೇಗೆ? ತೆರಿಗೆ ಬಾರದೆ ನೂರಾರು ಕೋಟಿ ರುಪಾಯಿ ಲಾಸ್ ಆಗಿದೆ. ಸರಕಾರಿ ಪ್ರಾಯೋಜಿತ ಜಾಹಿರಾತಿಗೆ ತೆರಿಗೆ ಇಲ್ಲ. ಆದರೆ ಖಾಸಗಿ ಜಾಗದಲ್ಲಿ ಜಾಹಿರಾತು ಹಾಕಿದರೆ ಅದಕ್ಕೆ ತೆರಿಗೆ ಹಾಕಲಾಗುತ್ತದೆ. ಲಾಭಕ್ಕಾಗಿ ಅವರು ಜಾಹೀರಾತು ಹಾಕುವ ಕಾರಣ ಅವರು ಸಣ್ಣ ಪ್ರಮಾಣದ ತೆರಿಗೆ ಕಟ್ಟಬೇಕು. ಖಾಸಗಿ ಕಟ್ಟಡಗಳ ಮಾಲೀಕರಿಗೆ ನಾವು ತೆರಿಗೆ ಹಾಕಲ್ಲ. ಹಿಂದೆಯೂ ಇತ್ತು, ಅದಕ್ಕೆ ತಿದ್ದುಪಡಿ ಮಾಡಿದ್ದೇವೆ.

- ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ

ವಸತಿರಹಿತ ಕುಟುಂಬಗಳಿಗೆ ಮುಂದಿನ ಸಂಪುಟದಲ್ಲಿ ಮನೆ

ವಿಧಾನ ಪರಿಷತ್: ಕಲಬುರಗಿ ಜಿಲ್ಲೆಯಲ್ಲಿ ವಸತಿರಹಿತ ಕುಟುಂಬಕ್ಕೆ ಮುಂದಿನ ಸಂಪುಟದಲ್ಲಿ ಅನುಮೋದಿಸಿ, ಮನೆಗಳನ್ನು ಪೂರ್ಣಗೊಳಿಸಲು ತೀರ್ಮಾನಿಸಿದ್ದೇವೆ. ಬರುವ ಜೂನ್ ತಿಂಗಳಿನಲ್ಲಿ ಸೇಡಂನಲ್ಲಿ ಕಾರ್ಯಕ್ರಮ ಮಾಡಿ, ಆದಷ್ಟು ಶೀಘ್ರದಲ್ಲಿ ಮನೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹ್ಮದ್ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ತಿಪ್ಪಣ್ಣಪ್ಪ ಕಮಕನೂರ್, ಅವರು ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ವಸತಿರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಲಬುರಗಿಯಲ್ಲಿ ನಮ್ಮ ಇಲಾಖೆ ವತಿಯಿಂದ ನಡೆಸಿದ ಸಮೀಕ್ಷೆ ಪ್ರಕಾರ, ಗ್ರಾಮೀಣ ಭಾಗದಲ್ಲಿ 1,52,089, ನಗರ ಭಾಗದಲ್ಲಿ 8,309 ಮನೆಗಳು ಸೇರಿ ಒಟ್ಟಾರೆ 1,60,398 ವಸತಿರಹಿತರಿದ್ದಾರೆ. ಹಾಗೂ ಗ್ರಾಮೀಣ ಭಾಗದಲ್ಲಿ 4,658 ಮತ್ತು ನಗರ ಭಾಗದಲ್ಲಿ 18,813 ಸೇರಿದಂತೆ ಒಟ್ಟು 23,471 ನಿವೇಶನರಹಿತರಿರುವ ಮಾಹಿತಿ ಲಭ್ಯವಾಗಿದೆ. ಆದರೆ ಸಮೀಕ್ಷೆ ನಂತರ ಗ್ರಾಮೀಣ ಮತ್ತು ನಗರ ವಸತಿಗಳ ಬಿಎಲ್‌ಸಿ ಅಡಿಯಲ್ಲಿ ಒಟ್ಟು 75,230 ಮನೆಗಳಿಗೆ ಮಂಜೂರಾತಿ ಮತ್ತು ರಾಜೀವ್ ಗಾಂಧಿ ಎಎಚ್‌ಪಿ ಘಟಕದ ಅಡಿ ಕೆಎಸ್‌ಡಿಬಿ ವತಿಯಿಂದ 9,216 ಮನೆ ನೀಡಿದ್ದೇವೆ ಎಂದರು.

ಬಿಎಲ್‌ಸಿ ಅಡಿಯಲ್ಲಿ ಸ್ವತಃ ವಸತಿ ಕಟ್ಟಿಕೊಳ್ಳಲು ನಾಲ್ಕು ಹಂತವಾಗಿ 1.20 ಲಕ್ಷ

ಸರಕಾರದಿಂದ ನೀಡಲಾಗುವ ಸಹಾಯ ಧನದೊಂದಿಗೆ ಫಲಾನುಭವಿಗಳು ತಮ್ಮ ಇಚ್ಛೆಗೆ ಅನುಗುಣವಾಗಿ ವಂತಿಕೆ ಮೊತ್ತವನ್ನು ಸೇರಿಸಿ ಮನೆ ನಿರ್ಮಾಣ ಮಾಡಿಕೊಳ್ಳಬಹುದಾಗಿದೆ.

-ಜಮೀರ್ ಅಹ್ಮದ್, ಸಚಿವ

ರು. ಸರಕಾರ ನೀಡಲಿದ್ದು, ಎಎಚ್‌ಪಿ ಘಟಕದ ಅಡಿಯಲ್ಲಿ ನೀಡಿರುವ ಮನೆಗಳಲ್ಲೂ ಸಮಸ್ಯೆಗಳು ಕಂಡುಬಂದಿದೆ. ಇನ್ನೂ 2013 ರಿಂದ 2017 ರವರೆಗೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲೇ ವಸತಿ ಇಲಾಖೆ ಅಡಿಯಲ್ಲಿ ಒಟ್ಟು 47,858 ಮನೆಗಳು ಮಂಜೂರಾಗಿದ್ದವು. ಕಲಬುರಗಿಯಲ್ಲಿ 9,216 ಮನೆಗಳು ಅಪೂರ್ಣಗೊಂಡಿವೆ. ಈಗ 7 ಸಾವಿರ ಮನೆಗಳನ್ನು ಸಿದ್ಧ ಮಾಡಿಕೊಂಡಿದ್ದೇವೆ. ಆ ಮನೆಗಳಿಗೆ ಸರಕಾರಕ್ಕೆ 7.5 ಲಕ್ಷ ರು. ವೆಚ್ಚ ತಗಲುತ್ತದೆ. ವಸತಿರಹಿತ ಬಡ ಕುಟುಂಬಗಳಿಗೆ ವಸತಿ ಸೌಕರ್ಯ ಒದಗಿಸಲು ಸರ್ಕಾರದಿಂದ ಮನೆ ನಿರ್ಮಾಣಕ್ಕೆ ಸಹಾಯಧನ ಮೊತ್ತವನ್ನು ಮಾತ್ರ ನೀಡಲಾಗುತ್ತಿದೆ ಎಂದರು.

ಸಂಪಾದಕೀಯ

ಬಿಸುಪು ಬಿಗಿಯಾಗಿ, ಆನಂದ ಹಬ್ಬಲಿ

ಯುಗಾದಿ ಭಾರತದಲ್ಲಿ ಮುಖ್ಯವಾಗಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಅತ್ಯಂತ ವಿಶಿಷ್ಟ ಸ್ಥಾನ ಪಡೆದಿದೆ. ಭಾರತದ ಎಲ್ಲ ಹಬ್ಬಗಳಂತೆ ಇದೂ ಕೂಡ ಪ್ರಾಕೃತಿಕ ಬದಲಾವಣೆಯೊಂದಿಗೆ ನೇರವಾದ ಸಂಬಂಧ ಹೊಂದಿದೆ. ಸಂಕ್ರಾಂತಿಯನ್ನು ಸೂರ್ಯ ಮಕರ ರಾಶಿಯನ್ನು ಪ್ರವೇಶಿಸುವ ದಿನ ಆಚರಿಸಲಾಗುತ್ತದೆ. ಆ ಸಂದರ್ಭದಲ್ಲಿ ರೈತರು ತಮ್ಮ ಬೆಳೆಯನ್ನು ರಾಶಿಹಾಕಿ ಪೂಜೆ ಸಲ್ಲಿಸುತ್ತಾರೆ. ಯುಗಾದಿ ಪ್ರಕೃತಿಯಲ್ಲಿ ಹೊಸ ಚಿಗುರು ಕಾಣಿಸಿಕೊಳ್ಳುವ ಹೊತ್ತು. ಸಂಕ್ರಾಂತಿಯ ಹೊತ್ತಿಗೆ ಚಳಿ ಕಡಿಮೆಯಾಗುತ್ತಿರುತ್ತದೆ, ಶಿವರಾತ್ರಿ ಕಳೆದ ಬೆನ್ನಲ್ಲೇ ವಾತಾವರಣದಲ್ಲಿ ಬಿಸಿ ಏರುವುದನ್ನು ನೋಡಬಹುದು. ಯುಗಾದಿ ಬಂತೆಂದರೆ ಅದು ಪಕ್ಕಾ ಬೇಸಿಗೆಕಾಲದ ಆಗಮನ ಸಂಕೇತ ಎನ್ನುವುದು ಜನರಿಗೆ ಸರ್ವವಿದಿತ. ಅದರಲ್ಲೂ ಗ್ರಾಮೀಣ ಭಾಗದ ಜನರು ಈ ಹಬ್ಬಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದಾರೆ. ಅವರಿಗೆ ಈ ಹಬ್ಬಗಳು ಮತ್ತು ಪ್ರಕೃತಿಯೊಂದಿಗಿನ ಸಂಬಂಧ ತಕ್ಷಣ ಗೊತ್ತಾಗುತ್ತದೆ. ಯುಗಾದಿಯಾದ ಸರಿಯಾಗಿ 9 ದಿನಗಳಿಗೆ ರಾಮನವಮಿ ಬರುತ್ತದೆ. ಅನಂತರ ಬರುವ ಮೊದಲ ಹುಣ್ಣಿಮೆಯೇ ಹನುಮ ಜಯಂತಿ! ಅಂದರೆ ಹನುಮಂತನ ಹುಟ್ಟಿದ ದಿನ. ಇದರ ಬೆನ್ನಲ್ಲೇ ಅಕ್ಷಯತೃತೀಯ (ಏಪ್ರಿಲ್‌ನಲ್ಲಿ), ನಂತರ ಜುಲೈನಲ್ಲಿ ಆಷಾಢ ಗುರುಪೌರ್ಣಿಮೆ, ಆಗಸ್ಟ್‌ನಲ್ಲಿ ರಕ್ಷಾಬಂಧನ, ಸೆಪ್ಟೆಂಬರ್‌ನಲ್ಲಿ ಗಣೇಶ ಚತುರ್ಥಿ. ಅಕ್ಟೋಬರ್‌ನಲ್ಲಿ ನವರಾತ್ರಿ, ನವೆಂಬರ್‌ನಲ್ಲಿ ದೀಪಾವಳಿ ನಡೆಯುತ್ತದೆ. ಇಲ್ಲಿಗೆ ಬಹುತೇಕ ಹಿಂದೂ ಹಬ್ಬಗಳು ಮುಗಿದಂತೆ. ಜುಲೈನಿಂದ ಅಕ್ಟೋಬರ್ ನಡುವೆ ಭಾರತದಲ್ಲಿ ಮಳೆಯಾಗುವ ಕಾಲ. ಜುಲೈನಲ್ಲಿನ ಆಷಾಢ ಗುರುಪೌರ್ಣಿಮೆಯಿಂದ ಚಾತುರ್ಮಾಸ್ಯ ಶುರುವಾಗುತ್ತದೆ. ಅಕ್ಟೋಬರ್‌ನಲ್ಲಿ ವಿಜಯದಶಮಿಯೊಂದಿಗೆ ಈ ನಾಲ್ಕು ತಿಂಗಳ ಆರಾಧನೆ, ಸಾಧನಾ ಪ್ರಕ್ರಿಯೆಯನ್ನು ಮುಖ್ಯವಾಗಿ ಸನ್ಯಾಸಿಗಳು ಮುಗಿಸುತ್ತಾರೆ. ಹಿಂದಿನ ಕಾಲದಲ್ಲಿ ಮಳೆಯಲ್ಲಿ ಸಂಚಾರ ಅಸಾಧ್ಯವಾಗಿದ್ದರಿಂದ ಸಾಧಕರು ಈ ಅವಧಿಯನ್ನು ಸಾಧನೆಗಾಗಿ ಬಳಸುತ್ತಿದ್ದರು. ಆ ಪದ್ಧತಿ ಈಗಲೂ ಮುಂದುವರಿದಿದೆ. ಭಾರತದಲ್ಲಿನ ಈ ಎಲ್ಲ ಹಬ್ಬಗಳು, ಆಚರಣೆಗಳು ನೇರವಾಗಿ ಪ್ರಕೃತಿಯೊಂದಿಗೇ ಬೆಸೆದುಕೊಂಡಿವೆ. ಪ್ರಕೃತಿಯಲ್ಲಾಗುವ ಪ್ರತೀ ಸೂಕ್ಷ್ಮ ಬದಲಾವಣೆಗಳನ್ನು ಗುರ್ತಿಸಿ, ಅದನ್ನು ಹಬ್ಬಗಳಂತೆ ಆಚರಿಸುವ ಈ ಮನೋಧರ್ಮವೇ ಒಂದು ವಿಶೇಷ ವಿಜ್ಞಾನ. ಯುಗಾದಿ ಭಾರತೀಯರಲ್ಲಿ ಒಂದು ಹೊಸ ಹುರುಪನ್ನು, ಬಿಸುಪನ್ನು ತರುತ್ತದೆ. ಆ ಬಿಸುಪು ಬಿಗುವಾಗಲಿ, ಆನಂದ ಚಿರಸ್ಥಾಯಿಯಾಗಲಿ.

ಸೊಂಪಾದಕೀಯ

ಯಾವುದಿದು ಹೊರ್ಮುಜ್ 'ಸಂಧಿ'?

ಕನ್ನಡ, ಸಂಸ್ಕೃತ ವಿದ್ಯಾರ್ಥಿಗಳಿಗೆ ಲೋಪ, ಸವರ್ಣ, ಆದೇಶ, ಆಗಮ ಸಂಧಿಗಳೆಂದರೆ ಗೊತ್ತಿರುತ್ತದೆ. ಇತ್ತೀಚೆಗೆ ನಿರಂತರವಾಗಿ ಹೊರ್ಮುಜ್ ಜಲಸಂಧಿ ಎಂಬ ಪದವನ್ನು ಅವರು ಕೇಳುತ್ತಿರುವುದರಿಂದ ಇದು ಯಾವ ಸಂಧಿ? ಎಂದು ಶಿಕ್ಷಕರನ್ನು ಕೇಳುತ್ತಿದ್ದಾರೆ. ಅದು ಮಾಮೂಲಿ ಸಂಧಿಯಲ್ಲ ಜಲಸಂಧಿ. ಅದು ಇರಾನ್‌ನಲ್ಲಿದೆ. ಅದನ್ನು ಮುಚ್ಚಿದರೆ ಜಗತ್ತಿನ ಇತರೆ ಭಾಗಗಳಿಗೆ ತೈಲ, ಎಲ್‌ಪಿಜಿ ಅನಿಲವನ್ನು ಹೊತ್ತು ಸಾಗುವ ಶೇ.65 ಹಡಗುಗಳ ಸಂಚಾರ ಸ್ಥಗಿತವಾಗುತ್ತದೆ. ಹೀಗೆಯೇ ಮುಂದುವರಿದರೆ ಭಾರತ ಸೇರಿದಂತೆ ಜಗತ್ತಿನ ಹಲವಾರು ದೇಶಗಳು ನಿತ್ಯ ಊಟ ಮಾಡುವುದಕ್ಕೂ ಪರದಾಡಬೇಕಾಗುತ್ತದೆ ಎಂದು ಶಿಕ್ಷಕರು ಹೊಸ ಸಂಧಿಯ ಮಹತ್ವವನ್ನು ವಿವರಿಸಿದ್ದಾರೆ. ತಮ್ಮ ವ್ಯಾಕರಣದ ಪುಸ್ತಕದಲ್ಲಿ ಈ ಸಂಧಿ ಇಲ್ಲದಿರುವುದರಿಂದ ಹೆಚ್ಚುವರಿ ತಲೆಬಿಸಿ ಇಲ್ಲ ಎಂದು ಕನ್ನಡ ವಿದ್ಯಾರ್ಥಿಗಳು ಸುಮ್ಮನಾಗಿದ್ದಾರೆ. ಆದರೆ ಇರಾನ್ ಇದೇ ಸಂಧಿಯನ್ನು ಬಳಸಿ ಅಮೆರಿಕವನ್ನು ಹೈರಾಣು ಮಾಡಿದೆ. ಈ ಒತ್ತಡಕ್ಕೆ ಸಿಕ್ಕಿ ಅಮೆರಿಕ ಅಧ್ಯಕ್ಷ ಟ್ರಂಪ್ ತಾನೇನು ಮಾತಾಡುತ್ತಿದ್ದೇನೆ ಎಂಬ ಪರಿಜ್ಞಾನವೇ ಇಲ್ಲದಂತೆ ಹೇಳಿಕೆ ನೀಡುತ್ತಿದ್ದಾರೆ. ಇರಾನಿನ ನೆರೆದೇಶಗಳಲ್ಲಿನ ನೆಲೆಗಳನ್ನು ಬಳಸಿ ಅಮೆರಿಕ ಇರಾನ್ ಮೇಲೆ ದಾಳಿ ಮಾಡಬಹುದಂತೆ, ಆದರೆ ಅದೇ ನೆಲೆಗಳ ಮೇಲೆ ಇರಾನ್ ಪ್ರತಿದಾಳಿ ಮಾಡಿದರೆ ಅದು ತಪ್ಪಂತೆ! ಇದಕ್ಕೂ ಮೊದಲು ಇರಾನ್ ಶೀಘ್ರದಲ್ಲೇ ಶರಣಾಗಲಿದೆ, ಯುದ್ಧ ಮುಗಿಯುತ್ತದೆ ಎಂದು ಟ್ರಂಪ್ ಹೇಳಿದ್ದರು. ಈಗ ಇರಾನ್ ಶರಣಾಗಬೇಕು ಎಂದು ಬೇಡಿಕೊಳ್ಳುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ಬಿಗ್ ಮ್ಯಾಕ್ ಇಂಡೆಕ್ಸ್ ಎಂದರೇನು?

ಅರ್ಥಶಾಸ್ತ್ರದಂಥ ಗಂಭೀರ ವಿಷಯವನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ಸರಳವಾಗಿ ಮತ್ತು ಕುತೂಹಲಕಾರಿಯಾಗಿ ನಿರೂಪಿಸುವುದರಲ್ಲಿ ದಿ ಎಕನಾಮಿಸ್ಟ್ ಪತ್ರಿಕೆ ಸದಾ ಮುಂಚೂಣಿಯಲ್ಲಿರುವುದನ್ನು ಗಮನಿಸಿರಬಹುದು. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಅವರು 1986ರಲ್ಲಿ ಪರಿಚಯಿಸಿದ ಬಿಗ್ ಮ್ಯಾಕ್ ಇಂಡೆಕ್ಸ್. ಹಾಗಾದರೆ ಬಿಗ್ ಮ್ಯಾಕ್ ಇಂಡೆಕ್ಸ್ ಎಂದರೇನು? ಇದು ವಿವಿಧ ದೇಶಗಳ ಕರೆನ್ಸಿಗಳ (ನೋಟು) ಮೌಲ್ಯವನ್ನು ಅಳೆಯಲು ಬಳಸುವ ಒಂದು ಅನೌಪಚಾರಿಕ ಸಾಧನ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ದೇಶದ ಹಣದ ಮೌಲ್ಯವು ವಾಸ್ತವವಾಗಿ ಎಷ್ಟು ಇರಬೇಕು ಮತ್ತು ಪ್ರಸ್ತುತ ಎಷ್ಟು ಇದೆ (ಅಂದರೆ ಅದು ಓವರ್ ವ್ಯಾಲ್ಯೂಡ್ ಆಗಿದೆಯೇ ಅಥವಾ ಅಂಡರ್ ವ್ಯಾಲ್ಯೂಡ್ ಆಗಿದೆಯೇ?) ಎಂಬುದನ್ನು ಇದು ಪತ್ತೆ ಮಾಡುತ್ತದೆ. ಇದಕ್ಕೆ ಆಧಾರವಾಗಿ ಬಳಸುವುದು ಮೆಕ್‌ಡೊನಾಲ್ಡ್ಸ್ (McDonald's) ಕಂಪನಿಯ ಪ್ರಸಿದ್ಧ 'ಬಿಗ್ ಮ್ಯಾಕ್' ಬರ್ಗರ್. ಈ ಸೂಚ್ಯಂಕ ಹೇಗೆ ಕೆಲಸ ಮಾಡುತ್ತದೆ? ಬಿಗ್ ಮ್ಯಾಕ್ ಇಂಡೆಕ್ಸ್ ಖರೀದಿ ಶಕ್ತಿ ಸಮಾನತೆ' (Purchasing Power Parity) ಅಂದರೆ ಪಿಪಿಪಿ ಎಂಬ ಆರ್ಥಿಕ ಸಿದ್ಧಾಂತದ ಮೇಲೆ ನಿಂತಿದೆ. ದೀರ್ಘಾವಧಿಯಲ್ಲಿ, ಯಾವುದೇ ಎರಡು ದೇಶಗಳ ನಡುವಿನ ವಿನಿಮಯ ದರವು (Exchange Rate), ಆ ಎರಡು ದೇಶಗಳಲ್ಲಿನ ಒಂದೇ ರೀತಿಯ ವಸ್ತುಗಳ ಬೆಲೆಯನ್ನು ಸಮಾನವಾಗಿಸುವ ಮಟ್ಟಕ್ಕೆ ಬದಲಾಗಬೇಕು. ಉದಾಹರಣೆಗೆ, ಅಮೆರಿಕದಲ್ಲಿ ಒಂದು ಬಿಗ್ ಮ್ಯಾಕ್ ಬರ್ಗರ್ ಬೆಲೆ 5 ಡಾಲರ್ ಇದೆ ಎಂದು ಭಾವಿಸೋಣ. ಭಾರತದಲ್ಲಿ ಅದೇ ಬರ್ಗರ್ ಬೆಲೆ 200 ರುಪಾಯಿ ಇದೆ ಎಂದುಕೊಳ್ಳೋಣ. ಹಾಗಿದ್ದಲ್ಲಿ, ಪಿಪಿಪಿ ಸಿದ್ಧಾಂತದ ಪ್ರಕಾರ ಒಂದು ಡಾಲರ್ ಮೌಲ್ಯವು 40 ರುಪಾಯಿ ಆಗಿರಬೇಕು. ಆದರೆ, ಮಾರುಕಟ್ಟೆಯಲ್ಲಿ ಒಂದು ಡಾಲರ್ ಮೌಲ್ಯ 80 ರುಪಾಯಿ ಆಗಿದ್ದರೆ, ಭಾರತೀಯ ರುಪಾಯಿಯು ಡಾಲರ್ ಎದುರು 'ಅಂಡರ್‌ವ್ಯಾಲ್ಯೂಡ್' (ಕಡಿಮೆ ಮೌಲ್ಯದ ಸ್ಥಿತಿಯಲ್ಲಿ) ಇದೆ ಎಂದು ಅರ್ಥ. ಇದಕ್ಕೆ ಬಿಗ್ ಮ್ಯಾಕ್' ಅನ್ನೇ ಏಕೆ ಆರಿಸಿಕೊಳ್ಳಲಾಗಿದೆ? ಜಗತ್ತಿನ ಸಾವಿರಾರು ವಸ್ತುಗಳ ಪೈಕಿ ಇದನ್ನೇ ಸೂಚ್ಯಂಕಕ್ಕೆ ಆಯ್ಕೆ ಮಾಡಲು ಕಾರಣಗಳಿವೆ - ಮೊದಲನೆಯದು ಜಾಗತಿಕ ಲಭ್ಯತೆ. ಮೆಕ್‌ಡೊನಾಲ್ಡ್ಸ್ ಜಗತ್ತಿನ ಬಹುತೇಕ ಎಲ್ಲ ದೇಶಗಳಲ್ಲೂ ಇದೆ. ಎರಡನೆಯದು, ಏಕರೂಪದ ಗುಣಮಟ್ಟ. ನೀವು ಲಂಡನ್ನಲ್ಲಿ ಬಿಗ್ ಮ್ಯಾಕ್ ತಿಂದರೂ ಅಥವಾ ಟೋಕಿಯೊದಲ್ಲಿ ತಿಂದರೂ ಅದರ ತಯಾರಿಕಾ ವಿಧಾನ, ಕಚ್ಚಾ ವಸ್ತುಗಳು ಮತ್ತು ಗುಣಮಟ್ಟ ಬಹುತೇಕ ಒಂದೇ ಆಗಿರುತ್ತದೆ. ಮೂರನೆಯದು, ಸ್ಥಳೀಯ ಉತ್ಪಾದನಾ ವೆಚ್ಚ. ಈ ಬರ್ಗರ್ ತಯಾರಿಸಲು ಸ್ಥಳೀಯವಾಗಿ ಸಿಗುವ ಮಾಂಸ, ತರಕಾರಿ, ಬಾಡಿಗೆ ಮತ್ತು ಕಾರ್ಮಿಕರ ಕೂಲಿಯನ್ನು ಬಳಸಲಾಗುತ್ತದೆ. ಹಾಗಾಗಿ ಇದು ಆ ದೇಶದ ಆರ್ಥಿಕತೆಯ ನೈಜ ಚಿತ್ರಣವನ್ನು ನೀಡುತ್ತದೆ. ಇದು ಬಹಳ ಜನಪ್ರಿಯವಾಗಿದ್ದರೂ, ಇದನ್ನು ಸಂಪೂರ್ಣ ವೈಜ್ಞಾನಿಕ ಎಂದು ಕರೆಯಲು ಸಾಧ್ಯವಿಲ್ಲ. ಇದಕ್ಕೆ ಕೆಲವು ಕಾರಣಗಳಿವೆ - ಪ್ರತಿ ದೇಶದಲ್ಲೂ ಆಹಾರದ ಮೇಲಿನ ತೆರಿಗೆ ಬೇರೆ ಬೇರೆ ಇರುತ್ತದೆ. ಕೆಲವು ದೇಶಗಳಲ್ಲಿ ಬರ್ಗರ್ ಮಾರುಕಟ್ಟೆಯಲ್ಲಿ ತೀವ್ರ ಸ್ಪರ್ಧೆ ಇರಬಹುದು, ಕೆಲವು ಕಡೆ ಇಲ್ಲದಿರಬಹುದು. ಸಾಂಸ್ಕೃತಿಕ ವ್ಯತ್ಯಾಸಗಳೂ ಪ್ರಭಾವ ಬೀರಬಹುದು. ಉದಾಹರಣೆಗೆ, ಭಾರತದಲ್ಲಿ ಗೋಮಾಂಸದ ಬಿಗ್ ಮ್ಯಾಕ್ ಬದಲಿಗೆ ಚಿಕನ್ ಅಥವಾ 'ವೆಜ್ ಮಹಾರಾಜ ಮ್ಯಾಕ್' ಬಳಸಲಾಗುತ್ತದೆ. ಇದು ಬೆಲೆಯಲ್ಲಿ ವ್ಯತ್ಯಾಸ ಉಂಟುಮಾಡಬಹುದು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕಾರ್ಮಿಕರ ಕೂಲಿ ಅಧಿಕವಾಗಿರುವುದರಿಂದ ಅಲ್ಲಿ ಬರ್ಗರ್ ಬೆಲೆ ಸಹಜವಾಗಿಯೇ ಹೆಚ್ಚಿರುತ್ತದೆ. ದಿ ಎಕನಾಮಿಸ್ಟ್ ಈ ಸೂಚ್ಯಂಕವನ್ನು ಆರಂಭದಲ್ಲಿ ಒಂದು ತಮಾಷೆಯಾಗಿ ಪರಿಚಯಿಸಿತ್ತು. ಆದರೆ ಇಂದು ಇದು ಅರ್ಥಶಾಸ್ತ್ರದ ಪಠ್ಯಪುಸ್ತಕಗಳ ಭಾಗವಾಗಿದೆ. ಅನೇಕ ಶೈಕ್ಷಣಿಕ ಲೇಖನಗಳಲ್ಲಿ ಇದನ್ನು ಉಲ್ಲೇಖಿಸಲಾಗುತ್ತದೆ. ಇದು ಜಟಿಲವಾದ ಕರೆನ್ಸಿ ಮಾರುಕಟ್ಟೆಯನ್ನು ಸಾಮಾನ್ಯ ಓದುಗರಿಗೆ ಸರಳವಾಗಿ ವಿವರಿಸುವಲ್ಲಿ ಯಶಸ್ವಿಯಾಗಿದೆ. ಭಾರತದಲ್ಲಿ ಬಿಗ್ ಮ್ಯಾಕ್ ಬೆಲೆ ವಿಶ್ವದ ಇತರ ದೇಶಗಳಿಗೆ ಹೋಲಿಸಿದರೆ ಕಡಿಮೆ. ಇದರರ್ಥ ಭಾರತೀಯ ರುಪಾಯಿಯು ಡಾಲರ್ ಎದುರು ಗಣನೀಯವಾಗಿ ಅಂಡರ್‌ವ್ಯಾಲ್ಯೂಡ್ ಆಗಿದೆ ಎಂದು ಈ ಇಂಡೆಕ್ಸ್ ಹೇಳುತ್ತದೆ. ಇದು ಭಾರತೀಯರ ಖರೀದಿ ಶಕ್ತಿಯನ್ನು ಜಾಗತಿಕ ಮಟ್ಟದಲ್ಲಿ ಅಳೆಯಲು ಒಂದು ಸುಲಭ ಮಾರ್ಗವಾಗಿದೆ. ಬಿಗ್ ಮ್ಯಾಕ್ ಇಂಡೆಕ್ಸ್ ಎಂಬುದು ಜಾಗತಿಕ ಅರ್ಥವ್ಯವಸ್ಥೆಯ ನಾಡಿಮಿಡಿತವನ್ನು ಅಳೆಯುವ ಒಂದು ಸ್ವಾದಿಷ್ಟ ಸಾಧನ!

ಇರಾನಿನ ಸಾವಿರ ವರ್ಷಗಳ ನಾಗರಿಕತೆಯೂ, ಐವತ್ತು ವರ್ಷಗಳ ಸಂಕೋಲೆಯೂ

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಇಸ್ರೇಲ್ - ಅಮೆರಿಕ ಜಂಟಿಯಾಗಿ ಇರಾನ್ ಮೇಲೆ ಯುದ್ಧ ಸಾರಿರುವ ಹಿನ್ನೆಲೆಯಲ್ಲಿ ಇರಾನ್ ಈಗ ಜಾಗತಿಕವಾಗಿ ಮುನ್ನೆಲೆಗೆ ಬಂದಿದೆ. ಅಮೆರಿಕದ ಮಿತ್ರ ದೇಶಗಳೂ ಈ ಯುದ್ಧದಲ್ಲಿ ಭಾಗವಹಿಸುತ್ತಿಲ್ಲ. ವಿಶ್ವದ ಬಲಾಢ್ಯ ರಾಷ್ಟ್ರಗಳಾದ ಚೀನಾ, ರಷ್ಯಾ, ಫ್ರಾನ್ಸ್, ಜಪಾನ್, ಬ್ರಿಟನ್, ಭಾರತ, ಆಸ್ಟ್ರೇಲಿಯಾ ಈ ಯುದ್ಧದಿಂದ ಹೊರಗೆ ಉಳಿದಿವೆ. ವೆನೆಜುವೆಲಾ ರೀತಿಯಲ್ಲಿ ಇರಾನ್‌ನನ್ನೂ ಮಣಿಸಬಹುದು ಎಂದು ಅಮೆರಿಕ ಭಾವಿಸಿತ್ತು. ಆದರೆ ಈ ಯುದ್ಧ ಅದನ್ನು ಆರಂಭಿಸಿದವರ ಮತ್ತು ಅದನ್ನು ಮುಂದುವರಿಸಿದವರ ನಿಯಂತ್ರಣಕ್ಕೆ ಸಿಗುತ್ತಿಲ್ಲ. ಅಮೆರಿಕವನ್ನು ಬೆಂಬಲಿಸುವ ರಾಷ್ಟ್ರಗಳ ಮೇಲೆ ಇರಾನ್ ಪ್ರತೀಕಾರದ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಆದರೆ ವಿಚಿತ್ರ ಅಂದರೆ ಇರಾನ್‌ನಲ್ಲಿ ವಸ್ತುಸ್ಥಿತಿ ಮೇಲ್ನೋಟಕ್ಕೆ ಕಾಣುವಂತೆ ಸರಿ ಇಲ್ಲ. ತಮ್ಮ ದೇಶದ ಮೇಲೆ ದಾಳಿ ನಡೆಯುತ್ತಿರುವಾಗ, ದೇಶಪ್ರೇಮ ಎಂಬ ಒಂದು ಅಂಶ ಇಡೀ ದೇಶವಾಸಿಗಳನ್ನು ಒಂದೆಡೆ ಹಿಡಿದಿಟ್ಟಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ಅಲ್ಲಿನ ಜನ ಅವುಡುಗಚ್ಚಿ ಸುಮ್ಮನೆ ಇದ್ದಾರೆ. ಆದರೆ ಅಸಲಿ ಚಿತ್ರಣವೇ ಬೇರೆ. ಬಹುಸಂಖ್ಯಾಕ ಇರಾನಿಯರು, ಅಲ್ಲಿನ ಸರಕಾರದ ವಿರುದ್ಧವೇ ಇರುವುದು ವಾಸ್ತವ.

ಅಷ್ಟಕ್ಕೂ ಇರಾನ್ ಎನ್ನುವುದು ಕೇವಲ ಒಂದು ದೇಶವಲ್ಲ, ಅದು ಒಂದು ಪ್ರಾಚೀನ ನಾಗರಿಕತೆ. ಸಾವಿರಾರು ವರ್ಷಗಳ ಇತಿಹಾಸವಿರುವ ಈ ನೆಲದಲ್ಲಿ ಇಂದು ಏರ್ಪಟ್ಟಿರುವ ರಾಜಕೀಯ ಬಿಕ್ಕಟ್ಟು ಮತ್ತು ಅಲ್ಲಿನ ಜನರ ಸಂಕಷ್ಟಗಳನ್ನು ಅರ್ಥಮಾಡಿಕೊಳ್ಳಲು ಅದರ ಆಳವಾದ ಇತಿಹಾಸ ಮತ್ತು ಇಂದಿನ ವಾಸ್ತವದ ನಡುವಿನ ವ್ಯತ್ಯಾಸವನ್ನು ಗಮನಿಸಬೇಕು.

ಇರಾನ್ (ಪರ್ಷಿಯಾ) ಜಗತ್ತಿನ ಅತ್ಯಂತ ಹಳೆಯ ನಾಗರಿಕತೆಗಳಲ್ಲಿ ಒಂದು. ಎಲಾಮೈಟ್ ಸಾಮ್ರಾಜ್ಯದಿಂದ ಹಿಡಿದು ಸೈರಸ್ ದಿ ಗ್ರೇಟ್ ಸ್ಥಾಪಿಸಿದ ಅಕೆಮೆನಿಡ್ ಸಾಮ್ರಾಜ್ಯದವರೆಗೆ, ಇರಾನ್ ಜಗತ್ತಿಗೆ ಮಾನವ ಹಕ್ಕುಗಳನ್ನು ಮೊದಲು ಘೋಷಣೆ ಮಾಡಿದ ದೇಶವೆಂಬ ಹೆಗ್ಗಳಿಕೆಯನ್ನು ಹೊಂದಿದೆ. ಸೈರಸ್ ಸಿಲಿಂಡರ್ ಇಂದಿಗೂ ಧಾರ್ಮಿಕ ಸಹಿಷ್ಣುತೆ ಮತ್ತು ಸ್ವಾತಂತ್ರ್ಯದ ಸಂಕೇತವಾಗಿದೆ. ಕ್ರಿ.ಪೂ. 3200ರ ಸುಮಾರಿಗೆ ಇಂದಿನ ನೈಋತ್ಯ ಇರಾನ್‌ನಲ್ಲಿ ಎಲಾಮೈಟ್ ನಾಗರಿಕತೆ ಉದಯಿಸಿತು. ಇವರು ಸುಮೇರಿಯನ್ ಮತ್ತು ಅಕ್ಕೇಡಿಯನ್ ನಾಗರಿಕತೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಆದರೆ, ಇರಾನ್‌ನ ಇತಿಹಾಸಕ್ಕೆ ಹೊಸ ದಿಕ್ಕು ಸಿಕ್ಕಿದ್ದು ಕ್ರಿ.ಪೂ. 550ರಲ್ಲಿ ಸೈರಸ್ ದಿ ಗ್ರೇಟ್ ಅಕೆಮೆನಿಡ್ ಸಾಮ್ರಾಜ್ಯವನ್ನು ಸ್ಥಾಪಿಸಿದಾಗ. ಸೈರಸ್ ಕೇವಲ ಒಬ್ಬ ವಿಜೇತನಾಗಿರದೇ, ಒಬ್ಬ ನ್ಯಾಯಬದ್ಧ ಮತ್ತು ಸಹಿಷ್ಣು ಆಡಳಿತಗಾರನಾಗಿ ಹೊರಹೊಮ್ಮಿದ್ದ.

ಕ್ರಿ.ಪೂ. 539ರಲ್ಲಿ ಸೈರಸ್, ಬ್ಯಾಬಿಲೋನ್ ಅನ್ನು ವಶಪಡಿಸಿಕೊಂಡಾಗ, ಅಂದಿನ ಕಾಲಕ್ಕೆ ಅಸಾಧ್ಯವೆನಿಸುವ ನಿರ್ಧಾರವನ್ನು ಕೈಗೊಂಡ. ಅವನು ಬ್ಯಾಬಿಲೋನ್‌ನ ಜನರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸಿ, ಅವರು ತಮಗೆ ಇಷ್ಟ ಬಂದ ಧರ್ಮವನ್ನು ಪಾಲಿಸುವ ಸ್ವಾತಂತ್ರ್ಯ ನೀಡಿದ. ಈ ಘೋಷಣೆಗಳನ್ನು ಅಕ್ಕೇಡಿಯನ್ ಭಾಷೆಯಲ್ಲಿ ಮಣ್ಣಿನ ಸಿಲಿಂಡರ್ ಮೇಲೆ ಕೆತ್ತಲಾಯಿತು, ಇದನ್ನು ಇಂದು 'ಸೈರಸ್ ಸಿಲಿಂಡರ್' ಎಂದು ಕರೆಯಲಾಗುತ್ತದೆ. ಇದನ್ನು ಇತಿಹಾಸಕಾರರು ಜಗತ್ತಿನ ಮೊದಲ ಮಾನವ ಹಕ್ಕುಗಳ ಘೋಷಣೆ' ಎಂದು ಪರಿಗಣಿಸುತ್ತಾರೆ. ಸೈರಸ್‌ನ ಕಾಲದಲ್ಲಿ ಯಹೂದಿಗಳನ್ನು ಬ್ಯಾಬಿಲೋನ್‌ನ ಸೆರೆಯಿಂದ ಮುಕ್ತಗೊಳಿಸಿ, ಅವರು ಜೆರುಸಲೇಮ್‌ಗೆ ಮರಳಿ ತಮ್ಮ ದೇವಾಲಯವನ್ನು ಪುನರ್‌ನಿರ್ಮಿಸಲು ಅನುವು ಮಾಡಿಕೊಟ್ಟಿದ್ದು ಇತಿಹಾಸದ ಅಪರೂಪದ ಘಟನೆ. ಈ ಕಾರಣಕ್ಕಾಗಿಯೇ ಬೈಬಲ್‌ನಲ್ಲಿ ಸೈರಸ್‌ನನ್ನು ಒಬ್ಬ ಮಹಾನ್ ನಾಯಕನಾಗಿ ಚಿತ್ರಿಸಲಾಗಿದೆ. ಅಕೆಮೆನಿಡ್ ಸಾಮ್ರಾಜ್ಯವು ಇಂದಿನ ಭಾರತದ ಗಡಿಯಿಂದ ಹಿಡಿದು ಈಜಿಪ್ಟ್‌ವರೆಗೂ ಹರಡಿತ್ತು. ಇಷ್ಟು ದೊಡ್ಡ ಸಾಮ್ರಾಜ್ಯವನ್ನು ಆಳಲು ಸೈರಸ್ ಮತ್ತು ಅವನ ಉತ್ತರಾಧಿಕಾರಿಗಳು ಬಳಸಿದ ಆಯುಧ ಖಡ್ಗ ಮಾತ್ರವಾಗಿರಲಿಲ್ಲ, ಬದಲಿಗೆ 'ಸಹಿಷ್ಣುತೆ' ಮತ್ತು 'ಸ್ವಾತಂತ್ರ್ಯ'ವಾಗಿತ್ತು.

ಇಂದು ನಾವು ಚರ್ಚಿಸುವ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಬೇರುಗಳನ್ನು 2500 ವರ್ಷಗಳ ಹಿಂದೆಯೇ ಪರ್ಷಿಯಾದ ಮಣ್ಣಿನಲ್ಲಿ ಬಿತ್ತಲಾಗಿತ್ತು. ಸಾವಿರಾರು ವರ್ಷಗಳ ಈ ಭವ್ಯ ಇತಿಹಾಸವೇ ಇಂದಿನ ಇರಾನಿಯನ್ನರಿಗೆ ಅವರ ಸಾಂಸ್ಕೃತಿಕ ಅಸ್ಮಿತೆಯ ಹೆಮ್ಮೆಯಾಗಿದೆ. ಕೇವಲ ಐವತ್ತು ವರ್ಷಗಳ ಆಡಳಿತವು ಈ ಮಹಾನ್ ಪರಂಪರೆಯನ್ನು ಅಳಿಸಲು ಸಾಧ್ಯವಿಲ್ಲ ಎಂಬುದಕ್ಕೆ ಸೈರಸ್ ಸಿಲಿಂಡರ್ ಒಂದು ಶಾಶ್ವತ ಸಾಕ್ಷಿಯಾಗಿದೆ.

ಪರ್ಷಿಯನ್ ನಾಗರಿಕತೆಯು ಜಗತ್ತಿಗೆ ನೀಡಿದ ಕೊಡುಗೆ ಕೇವಲ ತೈಲ ಪೂರೈಕೆ, ಕಟ್ಟಡಗಳಿಗೆ ಅಥವಾ ಯುದ್ಧಗಳಿಗೆ ಸೀಮಿತವಾಗಿಲ್ಲ. ಅದು ಮಾನವನ ಬುದ್ಧಿಶಕ್ತಿ ಮತ್ತು ಆತ್ಮದ ವಿಕಾಸಕ್ಕೆ ಸಂಬಂಧಿಸಿದ್ದು. ವಿಜ್ಞಾನ, ಗಣಿತ, ಕಲೆ ಮತ್ತು ಸಾಹಿತ್ಯದ ಪ್ರತಿ ಕ್ಷೇತ್ರದಲ್ಲೂ ಪರ್ಷಿಯನ್ನರು ಅಳಿಸಲಾಗದ ಮುದ್ರೆ ಒತ್ತಿದ್ದಾರೆ. ಅವರ ಈ ಬೌದ್ಧಿಕ ಶ್ರೀಮಂತಿಕೆಯೇ ಇಂದಿನ ಸಂಕುಚಿತ ಆಡಳಿತದ ವಿರುದ್ಧದ ಅವರ ಮಾನಸಿಕ ಹೋರಾಟಕ್ಕೆ ಪ್ರೇರಣೆಯಾಗಿದೆ.

ಕಲೆ, ಸಾಹಿತ್ಯ, ಗಣಿತ ಮತ್ತು ವಿಜ್ಞಾನದಲ್ಲಿ ಪರ್ಷಿಯನ್ನರ ಕೊಡುಗೆ ಅಪಾರ. ಅಲ್-ಖ್ವಾರಿಜ್ಮಿಯಂಥ ಗಣಿತಜ್ಞ, ಒಮರ್ ಖಯ್ಯಾಮ್, ರೂಮಿ, ಸಾದಿಯಂಥ ಕವಿಗಳು ಇಡೀ ವಿಶ್ವಕ್ಕೆ ಪ್ರೀತಿ ಮತ್ತು ತತ್ವಜ್ಞಾನವನ್ನು ಬೋಧಿಸಿದವರು. ಇರಾನಿನ ಇಸ್ಫಹಾನ್‌ನಂಥ ನಗರವನ್ನು 'ಅರ್ಧ ಜಗತ್ತು' (ನಿಸ್ಫ್-ಈ-ಜಹಾನ್) ಎಂದು ಕರೆಯುತ್ತಿದ್ದರು. ಅಷ್ಟು ಸುಂದರವಾದ ನಗರಗಳನ್ನು ನಿರ್ಮಿಸಿದ ಜನರಲ್ಲಿ ಸೌಂದರ್ಯ ಮತ್ತು ಸ್ವಾತಂತ್ರ್ಯದ ಅರಿವು ರಕ್ತಗತವಾಗಿ ಬಂದಿದೆ. ಪರ್ಷಿಯನ್ನರ ಬೌದ್ಧಿಕ ಬೇರುಗಳು ತುಂಬಾ ಆಳವಾಗಿವೆ. ಅವರು ಕೇವಲ ಧಾರ್ಮಿಕ ಗ್ರಂಥಗಳನ್ನಷ್ಟೇ ಓದಿದವರಲ್ಲ, ಬದಲಿಗೆ ಖಗೋಳದ ರಹಸ್ಯಗಳನ್ನು ಬಿಡಿಸಿದವರು ಮತ್ತು ಪ್ರೀತಿಯ ತತ್ವಜ್ಞಾನವನ್ನು ಜಗತ್ತಿಗೆ ಹಂಚಿದವರು. ಆಗಿನ ಪರ್ಷಿಯಾ ಅಥವಾ ಈಗಿನ ಇರಾನ್‌ಗೆ ಇಂಥ ಭವ್ಯ ನಾಗರಿಕತೆ, ಇತಿಹಾಸವಿದೆ.

ಇರಾನ್ ದೇಶದ ಇತಿಹಾಸದಲ್ಲಿ 1979ರ ಇಸ್ಲಾಮಿಕ್ ಕ್ರಾಂತಿಯು ಒಂದು ಅತ್ಯಂತ ಪ್ರಭಾವಶಾಲಿ ಮತ್ತು ವಿವಾದಾತ್ಮಕ ತಿರುವು. ಸಾವಿರಾರು ವರ್ಷಗಳ ಕಾಲ ಶ್ರೀಮಂತ ನಾಗರಿಕತೆಯನ್ನು ಹೊಂದಿದ್ದ ಇರಾನ್, ಕೇವಲ ಈ ಐದು ದಶಕಗಳಲ್ಲಿ ಸಂಪೂರ್ಣ ಬದಲಾಯಿತು. 1979ಕ್ಕಿಂತ ಮೊದಲು ಇರಾನ್ ಅನ್ನು ಮೊಹಮ್ಮದ್ ರೆಜಾ ಶಾ ಪಹ್ಲವಿ ಆಳುತ್ತಿದ್ದ. ಆ ಕಾಲದಲ್ಲಿ ಇರಾನ್ ಮಧ್ಯಪ್ರಾಚ್ಯದ ಅತ್ಯಂತ ಆಧುನಿಕ ದೇಶಗಳಲ್ಲಿ ಒಂದಾಗಿತ್ತು. ಇದನ್ನು 'ಶ್ವೇತ ಕ್ರಾಂತಿ' ಎಂದು ಕರೆಯಲಾಗುತ್ತಿತ್ತು. ಮಹಿಳೆಯರಿಗೆ ಮತದಾನದ ಹಕ್ಕು ನೀಡಲಾಗಿತ್ತು. ಆಗ ಹಿಜಾಬ್ ಧರಿಸುವುದು ಕಡ್ಡಾಯವಾಗಿರಲಿಲ್ಲ. ಯುವತಿಯರು ಆಧುನಿಕ ಉಡುಪುಗಳನ್ನು ಧರಿಸಿ ವಿಶ್ವವಿದ್ಯಾಲಯಗಳಿಗೆ ಹೋಗುತ್ತಿದ್ದರು. ಸಿನಿಮಾ, ಸಂಗೀತ ಮತ್ತು ಸಾಹಿತ್ಯ ಕ್ಷೇತ್ರಗಳು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದವು. ತೆಹ್ರಾನ್ ನಗರವನ್ನು ಮಧ್ಯಪ್ರಾಚ್ಯದ ಪ್ಯಾರಿಸ್ ಎಂದು ಕರೆಯಲಾಗುತ್ತಿತ್ತು. ಇರಾನ್ ವೇಗವಾಗಿ ಕೈಗಾರಿಕೀಕರಣಗೊಳ್ಳುತ್ತಿತ್ತು ಮತ್ತು ಜಗತ್ತಿನ ಪ್ರಮುಖ ಶಕ್ತಿಗಳೊಂದಿಗೆ ಉತ್ತಮ ಸಂಬಂಧ ಹೊಂದಿತ್ತು.

ಶಾ ಆಡಳಿತದ ಮೇಲಿದ್ದ ಭ್ರಷ್ಟಾಚಾರದ ಆರೋಪ ಮತ್ತು ಅತಿಕ್ರಮಣಕಾರಿ ಪಾಶ್ಚಿಮಾತ್ಯೀಕರಣದ ವಿರುದ್ಧ ಜನರು ಪ್ರತಿಭಟಿಸಿದರು. ಶಾ ಆಡಳಿತ ಸಂದರ್ಭದಲ್ಲಿ ಮಹಿಳೆಯರು ಮಿನಿ ಸ್ಕರ್ಟ್ ಧರಿಸುತ್ತಿದ್ದರು, ವಿಶ್ವವಿದ್ಯಾಲಯಗಳು ಮುಕ್ತವಾಗಿದ್ದವು ಮತ್ತು ಇರಾನ್ ಆರ್ಥಿಕವಾಗಿ ವೇಗವಾಗಿ ಬೆಳೆಯುತ್ತಿತ್ತು. ಆದರೆ, ಶಾ ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ರಹಸ್ಯ ಪೊಲೀಸ್ ಪಡೆ (SAVAK) ಮೂಲಕ ಜನರ ಮೇಲೆ ಹತ್ತಿಕ್ಕುವಿಕೆ ಇತ್ತು. ಇದರ ವಿರುದ್ಧ ಧಾರ್ಮಿಕ ನಾಯಕ ಅಯತೊಲ್ಲಾ ಖೊಮೇನಿ ನೇತೃತ್ವ ವಹಿಸಿಕೊಂಡರು. ಜನರು ಬದಲಾವಣೆ ಮತ್ತು ಪ್ರಜಾಪ್ರಭುತ್ವದ ಕನಸು ಕಂಡು ಕ್ರಾಂತಿಯಲ್ಲಿ ಪಾಲ್ಗೊಂಡರು. ಆ ಕ್ರಾಂತಿಯ ನಂತರ ಸ್ಥಾಪಿತವಾದದ್ದು 'ಇಸ್ಲಾಮಿಕ್ ಗಣರಾಜ್ಯ'. ಹೊಸ ಸಂವಿಧಾನವು ಧಾರ್ಮಿಕ ಮುಖಂಡರಿಗೆ (Supreme Leader) ಸರ್ವೋಚ್ಚ ಅಧಿಕಾರವನ್ನು ನೀಡಿತು. ಕಾನೂನುಗಳು 'ಶರಿಯತ್' ಆಧಾರಿತವಾದವು, ಇದು ಜನರ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅಂಕುಶ ಹಾಕಿತು.

ಅಂದರೆ ಇರಾನ್‌ನ ಇಸ್ಲಾಮಿಕ್ ಗಣರಾಜ್ಯದ ಇತಿಹಾಸ ಕೇವಲ1979ರ ಕ್ರಾಂತಿಯಿಂದ ಶುರುವಾದದ್ದು. ಅಂದರೆ ಸುಮಾರು 47-48 ವರ್ಷಗಳ ಇತಿಹಾಸವಷ್ಟೇ ಈ ಸರಕಾರಕ್ಕಿದೆ. ಅದಕ್ಕಿಂತ ಮೊದಲು ಇರಾನ್ ಬಹಳ ಆಧುನಿಕ ಮತ್ತು ಮುಕ್ತ ದೇಶವಾಗಿತ್ತು. 1979ರಲ್ಲಿ ಬಂದ ಧಾರ್ಮಿಕ ಆಡಳಿತವು ಜನರ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಂಡಿತು. ಸಾವಿರಾರು ವರ್ಷಗಳ ಮುಕ್ತ ಸಂಸ್ಕೃತಿಯನ್ನು ಕೇವಲ ಐದು ದಶಕಗಳ ಈ ಕಟ್ಟುನಿಟ್ಟಾದ ಆಡಳಿತವು ಹತ್ತಿಕ್ಕಲು ಪ್ರಯತ್ನಿಸಿತು.

ಇರಾನ್ ದೇಶದ ಇಂದಿನ ಅತಿದೊಡ್ಡ ಸವಾಲು ಮತ್ತು ಬದಲಾವಣೆಯ ಭರವಸೆ ಇರುವುದು ಅಲ್ಲಿನ ಯುವಜನತೆಯಲ್ಲಿ. ಸಾವಿರಾರು ವರ್ಷಗಳ ಇತಿಹಾಸವಿರುವ ಈ ದೇಶದಲ್ಲಿ, ಪ್ರಸ್ತುತ ಇರುವ ಐವತ್ತು ವರ್ಷಗಳ ಹಳೆಯ ಧಾರ್ಮಿಕ ಆಡಳಿತಕ್ಕೂ ಮತ್ತು ಆಧುನಿಕ ಜಗತ್ತಿನ ಕನಸು ಕಾಣುವ ಯುವಜನತೆಗೂ ನಡುವೆ ಒಂದು ದೊಡ್ಡ ಕಂದಕ ನಿರ್ಮಾಣವಾಗಿದೆ. ಇರಾನ್‌ನ ಜನಸಂಖ್ಯಾ ರಚನೆಯನ್ನು ಗಮನಿಸಿದರೆ, ಆಘಾತಕಾರಿ ಮತ್ತು ಆಶಾದಾಯಕ ಸತ್ಯ ಹೊರಬರುತ್ತದೆ. ಇರಾನ್‌ನ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ.70ಕ್ಕಿಂತ ಹೆಚ್ಚು ಜನರು 30 ವರ್ಷಕ್ಕಿಂತ ಕೆಳಗಿನವರು. ಅಂದರೆ, ಇಂದಿನ ಬಹುಪಾಲು ಜನಸಂಖ್ಯೆಯು 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಜನಿಸಿದವರು. ಇವರಿಗೆ ಕ್ರಾಂತಿಯ ಸಿದ್ಧಾಂತಗಳ ಮೇಲೆ ನಂಬಿಕೆಯಿಲ್ಲ, ಬದಲಿಗೆ ಅವರಿಗೆ ತಮ್ಮ ಭವಿಷ್ಯದ ಬಗ್ಗೆ ಕಾಳಜಿಯಿದೆ. ಇಂದಿನ ಆಡಳಿತವು ಪ್ರತಿಪಾದಿಸುವ ಹಳೆಯ ಸಂಪ್ರದಾಯಗಳು ಈ ಯುವಜನತೆಯ ಆಧುನಿಕ

ಆಲೋಚನೆಗಳಿಗೆ ಹೊಂದಿಕೆಯಾಗುತ್ತಿಲ್ಲ.

ಹಳೆಯ ತಲೆಮಾರಿನ ನಾಯಕರು ಇರಾನ್ ಅನ್ನು ಹೊರಜಗತ್ತಿನಿಂದ ಬೇರ್ಪಡಿಸಲು ಪ್ರಯತ್ನಿಸಿದರೂ, ಡಿಜಿಟಲ್ ಕ್ರಾಂತಿಯು ಯುವಜನತೆಗೆ ಜಗತ್ತಿನ ಕಿಟಕಿಗಳನ್ನು ತೆರೆದಿದೆ. ಇಂದಿನ ಇರಾನಿಯನ್ ಯುವಕ-ಯುವತಿಯರು ಇಂಟರ್ನೆಟ್, ಸಾಮಾಜಿಕ ಜಾಲತಾಣಗಳು ಮತ್ತು ವಿಪಿಎನ್ ಬಳಸಿ ಜಗತ್ತಿನಾದ್ಯಂತ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸುತ್ತಿದ್ದಾರೆ. ಅವರು ನ್ಯೂಯಾರ್ಕ್, ಲಂಡನ್ ಅಥವಾ ಭಾರತದ ಯುವಕರು ಅನುಭವಿಸುತ್ತಿರುವ ವೈಯಕ್ತಿಕ ಸ್ವಾತಂತ್ರ್ಯವನ್ನು ನೋಡುತ್ತಿದ್ದಾರೆ. ಪಾಶ್ಚಿಮಾತ್ಯ ಸಂಗೀತ, ಚಲನಚಿತ್ರಗಳು ಮತ್ತು ಫ್ಯಾಷನ್ ಅವರಿಗೆ ಪರಿಚಿತವಾಗಿದೆ. ಜಾಗತಿಕ ಮಟ್ಟದ ಶಿಕ್ಷಣ ಮತ್ತು ಜ್ಞಾನದ ಹಸಿವು ಅವರಿಗೆ ಧಾರ್ಮಿಕ ನಿರ್ಬಂಧಗಳಿಗಿಂತ ಹೆಚ್ಚಿನದನ್ನು ಬಯಸುವಂತೆ ಮಾಡಿದೆ. ಈ ಯುವಜನತೆಗೆ ಬೇಕಾಗಿರುವುದು ಕೇವಲ ಆರ್ಥಿಕ ಸುಧಾರಣೆಯಲ್ಲ, ಬದಲಿಗೆ ವೈಯಕ್ತಿಕ ಸ್ವಾತಂತ್ರ್ಯ. ಇರಾನ್‌ನ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಗಣನೀಯವಾಗಿದೆ. ಶಿಕ್ಷಣ ಪಡೆದ ಈ ಯುವತಿಯರು ತಮ್ಮ ಉಡುಪು, ಕೆಲಸ ಮತ್ತು ಜೀವನದ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳಲು ಬಯಸುತ್ತಿದ್ದಾರೆ.

ಸರಕಾರವು ಧರ್ಮದ ಹೆಸರಿನಲ್ಲಿ ಹೇರುತ್ತಿರುವ ನಿಯಮಗಳು ಯುವಜನತೆಗೆ ಉಸಿರುಗಟ್ಟಿಸುವಂತಿದೆ. ಉದ್ಯೋಗದ ಕೊರತೆ ಮತ್ತು ಹಣದುಬ್ಬರವು ಈ ಆಕ್ರೋಶಕ್ಕೆ ತುಪ್ಪ ಸುರಿದಂತಾಗಿದೆ. 'ನಮಗೆ ಧರ್ಮದ ಆಡಳಿತ ಬೇಡ, ನಮಗೆ ಉತ್ತಮ, ಆಧುನಿಕ ಜೀವನ ಬೇಕು' ಎಂಬುದು ಇಂದಿನ ಯುವಕರು ಬೀದಿಗೆ ಬಂದು ಕೂಗುತ್ತಿರುವ ಘೋಷಣೆಯಾಗಿದೆ. ಇಂದಿನ ಇರಾನ್ ಸರಕಾರವು ಕೇವಲ ಒಂದು ಸಣ್ಣ ವರ್ಗದ ಮತ್ತು ಸಶಸ್ತ್ರ ಪಡೆಗಳ ಬೆಂಬಲದ ಮೇಲೆ ನಿಂತಿದೆ. ಬಹುಸಂಖ್ಯಾತ ಯುವಜನತೆಯ ದೃಷ್ಟಿಯಲ್ಲಿ ಈ ಸರಕಾರವು ಅವರ ಉದ್ಧಾರಕ್ಕಾಗಿ ಬಂದಿದ್ದಲ್ಲ, ಬದಲಿಗೆ ಅವರ ಕನಸುಗಳನ್ನು ಹತ್ತಿಕ್ಕಲು ಬಂದಿದ್ದು ಎಂಬ ಭಾವನೆಯಿದೆ. ಯುವಜನತೆಗೆ ಇರಾನ್‌ನ ಭವ್ಯ ಸಂಸ್ಕೃತಿಯ ಬಗ್ಗೆ ಹೆಮ್ಮೆಯಿದೆಯೇ ಹೊರತು, ಕಳೆದ ಐದು ದಶಕಗಳ ಕಟ್ಟುನಿಟ್ಟಾದ ನಿಯಮಗಳ ಮೇಲಲ್ಲ.

ಸರಕಾರವು ಧರ್ಮದ ಹೆಸರಿನಲ್ಲಿ ಹೇರುತ್ತಿರುವ ನಿರ್ಬಂಧಗಳು, ವಿಶೇಷವಾಗಿ ಮಹಿಳೆಯರ ಮೇಲಿನ ಕಟ್ಟುಪಾಡುಗಳು (ಹಿಜಾಬ್ ಕಡ್ಡಾಯದಂಥ ನಿಯಮಗಳು) ಜನರಲ್ಲಿ ತೀವ್ರ ಆಕ್ರೋಶ ಮೂಡಿಸಿವೆ. 'ಮಹಸಾ ಅಮಿನಿ' ಎಂಬ ಯುವತಿಯ ಸಾವಿನ ನಂತರ ನಡೆದ ಪ್ರತಿಭಟನೆಗಳು ಇಡೀ ಜಗತ್ತಿನ ಗಮನ ಸೆಳೆದವು. ಹೆಣ್ಣು, ಜೀವನ, ಸ್ವಾತಂತ್ರ್ಯ (Zan, Zendegi, Azadi) ಎಂಬ ಘೋಷಣೆ ಇಡೀ ಇರಾನ್‌ನ ಪ್ರತಿ ಮನೆಯಲ್ಲೂ ಮೊಳಗಿತು. ಇದು ಕೇವಲ ಒಂದು ಸಣ್ಣ ಪ್ರತಿಭಟನೆಯಲ್ಲ, ಬದಲಿಗೆ ಐವತ್ತು ವರ್ಷಗಳ ಕಾಲ ಅನುಭವಿಸಿದ ದಮನಿತ ಭಾವನೆಗಳ ಸ್ಫೋಟ.

ಇರಾನ್‌ನ ಜನಸಾಮಾನ್ಯರು ಮೂಲತಃ ಅತಿಥಿ ಸತ್ಕಾರ ಬಯಸುವವರು, ಪ್ರೀತಿವಂತರು ಮತ್ತು ಜೀವನ್ಮುಖಿಗಳು. ಅಲ್ಲಿನ ಹಬ್ಬಗಳು (ನೌರೂಜ್), ಅವರ ಸಂಗೀತ ಮತ್ತು ಆಹಾರ ಪದ್ಧತಿಗಳು ಬದುಕಿನ ಬಗ್ಗೆ ಅವರ ಪ್ರೀತಿಯನ್ನು ತೋರಿಸುತ್ತವೆ. ಸರಕಾರ ಎಷ್ಟೇ ಕಟ್ಟುನಿಟ್ಟಾಗಿದ್ದರೂ, ಜನರು ತಮ್ಮ ಖಾಸಗಿ ಜೀವನದಲ್ಲಿ ಪಾಶ್ಚಿಮಾತ್ಯ ಸಂಗೀತ ಆಲಿಸುತ್ತಾರೆ, ಚಲನಚಿತ್ರಗಳನ್ನು ನೋಡುತ್ತಾರೆ ಮತ್ತು ಪ್ರಜಾಪ್ರಭುತ್ವದ ಕನಸು ಕಾಣುತ್ತಾರೆ. ಆದರೆ, ರಾಜಕೀಯ ನಾಯಕರ ಸ್ವಾರ್ಥ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವರು ಅನುಸರಿಸುತ್ತಿರುವ ಹಠಮಾರಿ ಧೋರಣೆಯಿಂದಾಗಿ ಇರಾನ್ ಮೇಲೆ ಸಾಲು ಸಾಲು ಆರ್ಥಿಕ ದಿಗ್ಬಂಧನಗಳು ಬಿದ್ದಿವೆ. ಇದರ ನೇರ ಪರಿಣಾಮ ಅಲ್ಲಿನ ಜನರ ಮೇಲಾಗುತ್ತಿದೆ. ಪರಿಣಾಮ, ದಿನಬಳಕೆಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಪದವೀಧರ ಯುವಕರಿಗೆ ಕೆಲಸ ಸಿಗುತ್ತಿಲ್ಲ. ಮಧ್ಯಮ ವರ್ಗದ ಜನರು ಬಡತನದ ರೇಖೆಗಿಂತ ಕೆಳಗೆ ತಳ್ಳಲ್ಪಡುತ್ತಿದ್ದಾರೆ.

ಇರಾಕಿನ ಶಿಯಾ ಸಶಸ್ತ್ರ ಗುಂಪು ಹಶದ್ ಅಲ್-ಶಬಿ, ಇರಾನ್ ಸರಕಾರದ ನೇರ ಬೆಂಬಲ ಹೊಂದಿದೆ. ಇರಾನ್‌ನಲ್ಲಿ ಜನಸಾಮಾನ್ಯರು ಸರಕಾರದ ವಿರುದ್ಧ ಬೀದಿಗಿಳಿದಾಗ, ಅಲ್ಲಿನ ಸ್ಥಳೀಯ ಪೊಲೀಸರು ಅಥವಾ ಸೈನಿಕರು ತಮ್ಮದೇ ದೇಶದ ಜನರ ಮೇಲೆ ಗುಂಡು ಹಾರಿಸಲು ಹಿಂಜರಿಯಬಹುದು ಎಂಬ ಭೀತಿಯಿಂದ ಸರಕಾರವು ಈ ಇರಾಕಿ ಗುಂಪುಗಳನ್ನು ಕರೆಯಿಸುತ್ತದೆ. ಇವರಿಗೆ ಇರಾನಿಯನ್ ಜನರ ಮೇಲೆ ಯಾವುದೇ ಸಹಾನುಭೂತಿ ಇಲ್ಲ, ಇವರು ಇರಾನಿಯನ್ನರ ವಿರುದ್ಧ ಅತ್ಯಂತ ಕ್ರೂರವಾಗಿ ವರ್ತಿಸುತ್ತಾರೆ. ಅಫ್ಘಾನಿಸ್ತಾನದ ಫಾತಿಮಿಯೌನ್ ಬ್ರಿಗೇಡ್ ಮತ್ತು ಪ್ಯಾಲಸ್ಟೀನ್‌ನ ಕೆಲವು ಸಶಸ್ತ್ರ ಗುಂಪುಗಳನ್ನು ಇರಾನ್ ಸರಕಾರವು ಆರ್ಥಿಕ ಲಾಭದ ಆಮಿಷವೊಡ್ಡಿ ತನ್ನ ರಕ್ಷಣೆಗಾಗಿ ಬಳಸಿಕೊಳ್ಳುತ್ತಿದೆ. ಸ್ವದೇಶಿ ಜನರನ್ನೇ ಶತ್ರುಗಳಂತೆ ಕಂಡು, ಅವರನ್ನು ಸಾಯಿಸಲು ಹೊರಗಿನವರನ್ನು ಕರೆಸುವುದು, ಇರಾನಿನ ಆಡಳಿತವು ಜನರ ಮೇಲಿನ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ ಎಂಬುದಕ್ಕೆ ಸಾಕ್ಷಿ.

ಸಾಮಾನ್ಯವಾಗಿ, ಒಂದು ರಾಷ್ಟ್ರದ ಮೇಲೆ ಪರಕೀಯ ದೇಶಗಳು ದಾಳಿ ನಡೆಸಿದಾಗ ಅಲ್ಲಿನ ಜನರಲ್ಲಿ ದೇಶಭಕ್ತಿ ಜಾಗೃತವಾಗಿ, ಶತ್ರುವಿನ ವಿರುದ್ಧ ಒಗ್ಗಟ್ಟಾಗುವುದು ನೈಸರ್ಗಿಕ ಪ್ರಕ್ರಿಯೆ. ಆದರೆ, ಇಂದಿನ ಇರಾನ್‌ನಲ್ಲಿ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಅಮೆರಿಕ ಅಥವಾ ಇತರ ಪಾಶ್ಚಿಮಾತ್ಯ ದೇಶಗಳು ಇರಾನ್‌ನ ಮಿಲಿಟರಿ ನಾಯಕರು ಅಥವಾ ಆಡಳಿತದ ಮೇಲೆ ಕ್ರಮ ಕೈಗೊಂಡಾಗ ಅಲ್ಲಿನ ಜನಸಾಮಾನ್ಯರು ಸಂಭ್ರಮಿಸುತ್ತಿರುವುದು ಜಾಗತಿಕ ರಾಜಕಾರಣದಲ್ಲಿ ಒಂದು ವಿಶಿಷ್ಟ ಮತ್ತು ಆಘಾತಕಾರಿ ಬೆಳವಣಿಗೆಯಾಗಿದೆ. ಇರಾನಿಯನ್ನರ ಈ ವಿಚಿತ್ರ ಪ್ರತಿಕ್ರಿಯೆಗೆ ಮುಖ್ಯ ಕಾರಣ ಅವರ ಆದ್ಯತೆಗಳ ಬದಲಾವಣೆ. ಇಂದಿನ ಇರಾನಿಯನ್ನರು ತಮ್ಮನ್ನು ಆಳುತ್ತಿರುವ ಸರಕಾರವನ್ನೇ ಆಂತರಿಕ ಆಕ್ರಮಣಕಾರರು ಎಂದು ಪರಿಗಣಿಸುತ್ತಾರೆ.

ದಶಕಗಳಿಂದ ಅನುಭವಿಸುತ್ತಿರುವ ಚಿತ್ರಹಿಂಸೆ, ಸ್ವಾತಂತ್ರ್ಯದ ಹರಣ ಮತ್ತು ಆರ್ಥಿಕ ಸಂಕಷ್ಟಗಳಿಂದ ಜನರಲ್ಲಿ ಎಷ್ಟು ಜುಗುಪ್ಸೆ ಮೂಡಿದೆಯೆಂದರೆ, ಅವರಿಗೆ ತಮ್ಮ ಸರಕಾರಕ್ಕೆ ಹೊಡೆತ ಬೀಳುವ ಯಾವುದೇ ಘಟನೆಯೂ ಆಶಾದಾಯಕವಾಗಿ ಕಾಣುತ್ತಿದೆ. ಇರಾನ್‌ನ ಪ್ರತಿಭಟನೆಗಳಲ್ಲಿ ಕೇಳಿಬರುವ ಪ್ರಸಿದ್ಧ ಘೋಷಣೆಯೆಂದರೆ - 'ನಮ್ಮ ನಿಜವಾದ ಶತ್ರು ಅಮೆರಿಕವಲ್ಲ, ಬದಲಿಗೆ ನಮ್ಮನ್ನು ಆಳುತ್ತಿರುವ ಈ ಭ್ರಷ್ಟ ಮತ್ತು ಕ್ರೂರ ಸರಕಾರ' (ದುಷ್ಮನೇ ಮಾ ಹಮೀಂಜಾಸ್ತ್, ದೋರೂಘ್ ಮೀಗಾನ್ ಅಮ್ರಿಕಾಸ್ತ್). ಇರಾನ್ ಸರಕಾರವು ದೇಶದ ಆರ್ಥಿಕ ಕುಸಿತ ಮತ್ತು ಜನರ ಸಂಕಷ್ಟಗಳಿಗೆ ಯಾವಾಗಲೂ 'ಅಮೆರಿಕ ಮತ್ತು ಇಸ್ರೇಲ್' ಕಾರಣ ಎಂದು ಬೊಟ್ಟು ಮಾಡಿ ತೋರಿಸಿದಾಗಲೆಲ್ಲ ಅಲ್ಲಿನ ಜನ ಈ ಸ್ಲೋಗನ್ ಕೂಗುತ್ತಾರೆ. ಇರಾನ್‌ನ ಇಂದಿನ ವಾಸ್ತವಿಕ ಪರಿಸ್ಥಿತಿಯನ್ನು ಈ ಒಂದೇ ಸಾಲು ಬಹಳ ಅರ್ಥಪೂರ್ಣವಾಗಿ ಬಿಂಬಿಸುತ್ತದೆ.

ಇಡೀ ಜಗತ್ತು ಇರಾನ್ ಮತ್ತು ಅಮೆರಿಕದ ನಡುವಿನ ಸಂಘರ್ಷವನ್ನು 'ಎರಡು ದೇಶಗಳ ನಡುವಿನ ಸಮರ' ಎಂದು ನೋಡುತ್ತದೆ. ವಿಪರ್ಯಾಸ ಅಂದ್ರೆ, ಇರಾನ್ ಒಳಗಿನ ಪರಿಸ್ಥಿತಿಯೇ ಬೇರೆ. 2020ರಲ್ಲಿ ಅಮೆರಿಕವು ಇರಾನ್‌ನ ಪ್ರಭಾವಿ ಜನರಲ್ ಕಾಸಿಂ ಸುಲೈಮಾನಿಯನ್ನು ಹತ್ಯೆ ಮಾಡಿದಾಗ, ಇಡೀ ಜಗತ್ತು ಇರಾನ್‌ನಲ್ಲಿ ಯುದ್ಧದ ಭೀತಿ ಎದುರಾಗಬಹುದು ಎಂದು ಅಂದಾಜಿಸಿತ್ತು. ಸರಕಾರವು ಲಕ್ಷಾಂತರ ಜನರನ್ನು ಬೀದಿಗೆ ಕರೆತಂದು ದೊಡ್ಡ ಮಟ್ಟದ ಶೋಕಾಚರಣೆ ನಡೆಸಿತು. ಆದರೆ, ಅದೇ ಸಮಯದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಗುಪ್ತವಾಗಿ ಇರಾನಿಯನ್ನರು ಸಿಹಿ ಹಂಚಿ ಸಂಭ್ರಮಿಸಿದರು. ಸುಲೈಮಾನಿ ಇರಾನಿಯನ್ನರ ಪಾಲಿಗೆ ದೇಶದ ರಕ್ಷಕನಾಗಿರಲಿಲ್ಲ, ಬದಲಿಗೆ ಸಿರಿಯಾ ಮತ್ತು ಇರಾಕ್‌ನಲ್ಲಿ ನಡೆದ ರಕ್ತಪಾತದ ರೂವಾರಿಯಾಗಿದ್ದ. ದೇಶದ ಹಣವನ್ನು ವಿದೇಶಿ ಸಂಘರ್ಷಗಳಿಗೆ ಬಳಸಿ, ಸ್ವದೇಶಿ ಯುವಕರನ್ನು ಹತ್ತಿಕ್ಕುತ್ತಿದ್ದ ವ್ಯಕ್ತಿಯ ಪತನವು ಜನರಿಗೆ ವಿಮೋಚನೆಯಂತೆ ಕಂಡಿತು.

ಅಮೆರಿಕವು ಇರಾನ್ ಮೇಲೆ ಆರ್ಥಿಕ ದಿಗ್ಬಂಧನ ಹೇರಿದಾಗ ಅಥವಾ ರಾಜತಾಂತ್ರಿಕ ಒತ್ತಡ ತಂದಾಗ, ಸರಕಾರವು ಅದನ್ನು 'ಜನರ ಮೇಲಿನ ದಾಳಿ' ಎಂದು ಬಿಂಬಿಸುತ್ತದೆ. ಆದರೆ ಜನರು ಇದನ್ನು 'ಸರ್ವಾಧಿಕಾರಿಗಳ ಮೇಲಿನ ದಾಳಿ' ಎಂದು ಭಾವಿಸುತ್ತಾರೆ. ಆಡಳಿತವು ದುರ್ಬಲಗೊಂಡರೆ ಮಾತ್ರ ತಮಗೆ ಸ್ವಾತಂತ್ರ್ಯ ಸಿಗಬಹುದು ಎಂಬುದು ಜನರ ನಂಬಿಕೆ. ಅಂತಾರಾಷ್ಟ್ರೀಯ ಹಂತದಲ್ಲಿ ಆಡಳಿತಕ್ಕೆ ಮುಖಭಂಗವಾದಾಗಲೆಲ್ಲ, ಇರಾನ್‌ನ ಒಳಗಿರುವ ಜನರು ರಹಸ್ಯವಾಗಿ ಸಂಭ್ರಮಿಸುವುದು ಅಲ್ಲಿನ ಸರಕಾರದ ಮೇಲಿನ ತೀವ್ರ ಆಕ್ರೋಶದ ಸಂಕೇತವಾಗಿದೆ. ಇಂದು ಇರಾನಿಯನ್ನರು ತಮ್ಮದೇ ಆಡಳಿತದ ದಬ್ಬಾಳಿಕೆಯಿಂದ ಅದೆಷ್ಟು ಮನನೊಂದಿದ್ದಾರೆಂದರೆ, ಹೊರಗಿನವರು ಬಂದು ಆಕ್ರಮಣ ಮಾಡಿದರೆ ಅದನ್ನು ಸಂತೋಷದಿಂದ ಸ್ವಾಗತಿಸುತ್ತಾರೆ. ಅಮೆರಿಕದ ದಾಳಿಯನ್ನು ಅವರು ಸಂಭ್ರಮಿಸುತ್ತಿರುವುದು ಪರಕೀಯರ ಮೇಲಿನ ಪ್ರೀತಿಯಿಂದಲ್ಲ, ಬದಲಿಗೆ ತಮ್ಮನ್ನು ಪೀಡಿಸುತ್ತಿರುವ ಸ್ವಾರ್ಥಿ ಆಡಳಿತದ ಮೇಲಿನ ತೀವ್ರ ದ್ವೇಷದಿಂದ. ಇದು ಯಾವುದೇ ಆಡಳಿತಕ್ಕೆ ದೊಡ್ಡ ಎಚ್ಚರಿಕೆಯ ಗಂಟೆ.

ಇರಾನ್‌ನಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಎಂಬುದು ಕೇವಲ ಒಂದು ಮಿಲಿಟರಿ ಪಡೆಯಲ್ಲ; ಅದು ಇಡೀ ದೇಶದ ಆರ್ಥಿಕತೆಯನ್ನು ನಿಯಂತ್ರಿಸುವ ಒಂದು ಬೃಹತ್ ವ್ಯವಸ್ಥೆ. ಇರಾನ್‌ನ ತೈಲ, ಅನಿಲ, ನಿರ್ಮಾಣ ಮತ್ತು ಸಂವಹನ ಕ್ಷೇತ್ರಗಳ ಹೆಚ್ಚಿನ ಭಾಗವು ಇವರ ಕೈಯಲ್ಲಿದೆ. ಈ ಸಂಸ್ಥೆಯು ಸರಕಾರಕ್ಕೆ ಉತ್ತರದಾಯಿಯಲ್ಲದ ಒಂದು ಬೃಹತ್ ಉದ್ಯಮದಂತೆ ಕಾರ್ಯನಿರ್ವಹಿಸುತ್ತದೆ. ಇಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದಿಂದಾಗಿ ಸಂಪತ್ತು ಕೇವಲ ಕೆಲವು ಪ್ರಭಾವಿ ನಾಯಕರ ಕೈಸೇರುತ್ತಿದೆ. ದೇಶದ ಅಭಿವೃದ್ಧಿಗೆ ಬಳಕೆಯಾಗಬೇಕಾದ ಈ ಲಾಭವು ಜನರ ಕಲ್ಯಾಣಕ್ಕೆ ತಲುಪುವ ಬದಲು, ಶಸ್ತ್ರಾಸ್ತ್ರಗಳ ಖರೀದಿ ಮತ್ತು ವಿದೇಶಿ ಸಂಘರ್ಷಗಳಿಗೆ ಬಳಕೆಯಾಗುತ್ತಿದೆ. ಮಧ್ಯಪ್ರಾಚ್ಯದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಮತ್ತು ಅಮೆರಿಕ ಅಥವಾ ಸೌದಿ ಅರೇಬಿಯಾದಂಥ ವಿರೋಧಿಗಳಿಗೆ ಸವಾಲು ಹಾಕಲು ಇರಾನ್ ಕಳೆದ ಎರಡು ದಶಕಗಳಿಂದ ನಿರಂತರವಾಗಿ ಬಾಡಿಗೆ ಯುದ್ಧಗಳನ್ನು ನಡೆಸುತ್ತಿದೆ. ಲೆಬನಾನಿನ ಹಿಜ್ಬುಲ್ಲಾ ಸಂಘಟನೆಗೆ ಇರಾನ್ ವರ್ಷಕ್ಕೆ ಕೋಟ್ಯಂತರ ಡಾಲರ್ ಹಣ ಮತ್ತು ಅತ್ಯಾಧುನಿಕ ಕ್ಷಿಪಣಿಗಳನ್ನು ಪೂರೈಸುತ್ತದೆ. ಯೆಮನ್‌ನ 'ಹೂತಿ' ಬಂಡುಕೋರರಿಗೆ ಇರಾನ್ ಹಣಕಾಸು ಮತ್ತು ತಾಂತ್ರಿಕ ನೆರವು ನೀಡುತ್ತಿದೆ, ಇದು ಆ ಭಾಗದಲ್ಲಿ ಯುದ್ಧದ ಕಿಚ್ಚನ್ನು ಹೆಚ್ಚಿಸಿದೆ. ಸಿರಿಯಾದಲ್ಲಿ ಅಸ್ಸಾದ್ ಸರಕಾರವನ್ನು ಉಳಿಸಿಕೊಳ್ಳಲು ಇರಾನ್ ತನ್ನ ಸೈನ್ಯ ಮತ್ತು ಸಂಪತ್ತನ್ನು ಆ ದೇಶಕ್ಕೆ ಧಾರೆ ಎರೆದಿದೆ.

ಇರಾನ್ ದೇಶವು ಪ್ರಕೃತಿದತ್ತವಾದ ಅಪಾರ ಸಂಪತ್ತನ್ನು ಹೊಂದಿದ್ದರೂ, ಅಲ್ಲಿನ ಸಾಮಾನ್ಯ ಪ್ರಜೆ ಬಡತನ ಮತ್ತು ಹಸಿವಿನಿಂದ ನರಳುತ್ತಿರುವುದು ಜಗತ್ತಿನ ಅತಿದೊಡ್ಡ ದುರಂತಗಳಲ್ಲಿ ಒಂದು. ವಿಶ್ವದ ಒಟ್ಟು ತೈಲ ನಿಕ್ಷೇಪದಲ್ಲಿ ನಾಲ್ಕನೇ ಸ್ಥಾನ ಮತ್ತು ಅನಿಲ ನಿಕ್ಷೇಪದಲ್ಲಿ ಎರಡನೇ ಸ್ಥಾನ ಹೊಂದಿರುವ ಈ ದೇಶ ಆರ್ಥಿಕವಾಗಿ ಅಧೋಗತಿಗೆ ಇಳಿದಿದೆ. ಇರಾನ್‌ನ ಸಾಮಾನ್ಯ ಪ್ರಜೆಯು ಹಣದುಬ್ಬರ ಮತ್ತು ನಿರುದ್ಯೋಗದಿಂದ ತತ್ತರಿಸುತ್ತಿದ್ದಾನೆ. ಅಂತಾರಾಷ್ಟ್ರೀಯ ಆರ್ಥಿಕ ನಿರ್ಬಂಧಗಳಿಂದಾಗಿ ದೇಶದಲ್ಲಿ ಔಷಧಗಳ ಕೊರತೆ ಮತ್ತು ಆಹಾರ ಪದಾರ್ಥಗಳ ಬೆಲೆ ಗಗನಕ್ಕೇರಿದೆ. ಇಂಥ ಸಮಯದಲ್ಲಿ ಸರಕಾರವು ತನ್ನ ಜನರ ಹೊಟ್ಟೆ ತುಂಬಿಸುವ ಬದಲು, ಪ್ಯಾಲಸ್ಟೀನ್ ಅಥವಾ ಲೆಬನಾನ್‌ನಲ್ಲಿರುವ ಸಶಸ್ತ್ರ ಗುಂಪುಗಳಿಗೆ ಹಣ ನೀಡುವುದನ್ನು ಇರಾನಿಯನ್ನರು ತೀವ್ರವಾಗಿ ವಿರೋಧಿಸುತ್ತಿದ್ದಾರೆ. 'ನೆ ನಜೆ ಗಾಜಾ, ನೆ ಲೆಬನಾನ್, ಜಾನೆಮ್ ಫೆದಾಯೆ ಇರಾನ್' (ಗಾಜಾ ಬೇಡ, ಲೆಬನಾನ್ ಬೇಡ, ನನ್ನ ಪ್ರಾಣ ಇರಾನ್‌ಗೆ ಮಾತ್ರ) ಎಂಬ ಘೋಷಣೆ ಪ್ರತಿಭಟನೆಗಳಲ್ಲಿ ಮೊಳಗುತ್ತಿರುವುದು ಇದೇ ಕಾರಣಕ್ಕೆ.

ಇರಾನ್ ನಾಯಕರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಇಡೀ ದೇಶವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂಟಿ ಮಾಡಿದ್ದಾರೆ. ಅಭಿವೃದ್ಧಿ ಹೊಂದಬಹುದಾಗಿದ್ದ ಒಂದು ಮಹಾನ್ ರಾಷ್ಟ್ರವು ಇಂದು ಕೇವಲ ಯುದ್ಧ ಮತ್ತು ಸಿದ್ಧಾಂತದ ಅಖಾಡವಾಗಿ ಮಾರ್ಪಟ್ಟಿದೆ. ದೇಶದ ಅಮೂಲ್ಯವಾದ ತೈಲ ಸಂಪತ್ತು ಜನರ ಮನೆ ಬೆಳಗುವ ಬದಲು, ಬಾಂಬ್ ಸಿಡಿಯಲು ಕಾರಣವಾಗುತ್ತಿದೆ. ಯಾವುದೇ ದೇಶವು ತನ್ನ ಪ್ರಜೆಗಳನ್ನು ಹಸಿವಿನಿಂದ ಇಟ್ಟು, ಬೇರೆ ದೇಶಗಳಲ್ಲಿ ಪ್ರಭಾವ ಬೆಳೆಸಲು ಸಾಧ್ಯವಿಲ್ಲ. ಇರಾನ್ ಇಂದಿನ ಸ್ಥಿತಿ ಇದಕ್ಕೆ ಕನ್ನಡಿ ಹಿಡಿದಿದೆ. ಸಾವಿರಾರು ವರ್ಷಗಳ ಇತಿಹಾಸವಿರುವ ದೇಶವನ್ನು ನಲವತ್ತು ವರ್ಷಗಳ ಸ್ವಾರ್ಥಿ ರಾಜಕಾರಣವು ಆರ್ಥಿಕವಾಗಿ ಮತ್ತು ನೈತಿಕವಾಗಿ ಕುಸಿಯುವಂತೆ ಮಾಡಿದೆ. ಜನರ ಆಕ್ರೋಶವು ಸ್ಫೋಟಗೊಳ್ಳುತ್ತಿರುವುದು ಇದೇ ಕಾರಣಕ್ಕಾಗಿ - ಅವರಿಗೆ ಬೇಕಾಗಿರುವುದು ಬಾಹ್ಯ ಯುದ್ಧಗಳಲ್ಲ, ಬದಲಿಗೆ ಗೌರವಯುತವಾದ ಬದುಕು.

ಇರಾನ್ ಸರಕಾರವು ತನ್ನ ಆಡಳಿತದ ಅವಧಿಯಲ್ಲಿ ಸಾವಿರಾರು ವಿರೋಧಿಗಳನ್ನು ವ್ಯವಸ್ಥಿತವಾಗಿ ಸಾಯಿಸಿದೆ. ಇರಾನ್-ಇರಾಕ್ ಯುದ್ಧದ ನಂತರ, ಅಯತೊಲ್ಲಾ ಖೊಮೇನಿಯ ಆದೇಶದಂತೆ ಜೈಲಿನಲ್ಲಿದ್ದ ಸುಮಾರು 30,000 ರಾಜಕೀಯ ಕೈದಿಗಳನ್ನು ಕೆಲವೇ ವಾರಗಳಲ್ಲಿ ನೇಣು ಹಾಕಲಾಯಿತು. ಇದು ಇತಿಹಾಸದ ಅತ್ಯಂತ ಕರಾಳ ಅಧ್ಯಾಯ. 2019ರಲ್ಲಿ ಪೆಟ್ರೋಲ್ ಬೆಲೆ ಏರಿಕೆ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಕೇವಲ ಮೂರು ದಿನಗಳಲ್ಲಿ 1500ಕ್ಕೂ ಹೆಚ್ಚು ಜನರನ್ನು ಸಾಯಿಸಲಾಯಿತು. 2022ರಲ್ಲಿ ಮಹಸಾ ಅಮಿನಿ ಸಾವಿನ ನಂತರ ನಡೆದ ಪ್ರತಿಭಟನೆಗಳಲ್ಲಿ ನೂರಾರು ಯುವಕರು ಕಣ್ಣು ಕಳೆದುಕೊಂಡರು ಮತ್ತು ಸಾವಿರಾರು ಜನರನ್ನು ಜೈಲಿಗೆ ತಳ್ಳಲಾಯಿತು. ಇತ್ತೀಚಿನ ವರದಿಗಳ ಪ್ರಕಾರ, ವಿವಿಧ ಹಂತಗಳಲ್ಲಿ ನಡೆದ ಸಂಘರ್ಷಗಳಲ್ಲಿ ಬಲಿಯಾದ ಇರಾನಿಯನ್ನರ ಸಂಖ್ಯೆ 40,000 ದಾಟಿದೆ. ಇಂದಿನ ಆಡಳಿತವು ಇರಾನ್‌ನ ಇಸ್ಲಾಮಿಕ್ ಪೂರ್ವ ಇತಿಹಾಸವನ್ನು ಅಳಿಸಿಹಾಕಲು ಪ್ರಯತ್ನಿಸುತ್ತಿದೆ. ಪರ್ಸೆಪೊಲಿಸ್‌ನಂಥ ಭವ್ಯ ಐತಿಹಾಸಿಕ ತಾಣಗಳನ್ನು ನಿರ್ಲಕ್ಷಿಸಲಾಗುತ್ತಿದೆ. ನೌರೂಜ್ (ಪರ್ಷಿಯನ್ ಹೊಸ ವರ್ಷ) ಹಬ್ಬವನ್ನು ಆಚರಿಸುವುದರ ಮೇಲೆ ನಿರ್ಬಂಧಗಳನ್ನು ಹೇರಲಾಗುತ್ತಿದೆ. ಆದರೆ ಇರಾನಿಯನ್ನರು ತಮ್ಮ ಮೂಲ ಬೇರುಗಳನ್ನು ಬಿಟ್ಟುಕೊಡಲು ತಯಾರಿಲ್ಲ.

ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಗಳನ್ನು ಹತ್ತಿಕ್ಕಲು ಅಲ್ಲಿನ ಭದ್ರತಾ ಪಡೆಗಳು ಮತ್ತು ಅವರ ಬೆಂಬಲಿತ ಸಶಸ್ತ್ರ ಗುಂಪುಗಳು ಮಾದಕ ವಸ್ತುಗಳನ್ನು ನೀಡುತ್ತಿವೆ. ಇರಾನ್‌ನ ಭದ್ರತಾ ಪಡೆಗಳು (ವಿಶೇಷವಾಗಿ ಬಸಿಜ್ ಮತ್ತು ಐಆರ್‌ಜಿಸಿ) ತಮ್ಮದೇ ದೇಶದ ನಿರಪರಾಧಿ ಪ್ರಜೆಗಳನ್ನು, ವಿದ್ಯಾರ್ಥಿಗಳನ್ನು ಮತ್ತು ಮಹಿಳೆಯರನ್ನು ಮುಲಾಜಿಲ್ಲದೇ ಸಾಯಿಸಲು ಅಥವಾ ಚಿತ್ರಹಿಂಸೆ ನೀಡಲು ಕ್ಯಾಪ್ಟಗನ್ ಎಂಬ ಮಾದಕ ಪದಾರ್ಥ ನೀಡುತ್ತಿವೆ. ಇದು ಮಿದುಳಿನ ಸಂವೇದನೆಯನ್ನು ಮರೆಮಾಚಿ, ಸೈನಿಕರನ್ನು ಯಾಂತ್ರಿಕ 'ಕೊಲೆಗಡುಕ'ರನ್ನಾಗಿ ಬದಲಿಸುತ್ತದೆ.

ಇರಾನ್‌ನ ಸ್ಥಿತಿ ಇಂದು ಅಯೋಮಯವಾಗಿದೆ. ಒಂದು ಕಡೆ ಸಾವಿರಾರು ವರ್ಷಗಳ ಸಂಸ್ಕೃತಿಯ ಹೆಮ್ಮೆ, ಇನ್ನೊಂದು ಕಡೆ ಐವತ್ತು ವರ್ಷಗಳ ಕರಾಳ ಆಡಳಿತದ ಸಂಕೋಲೆ. ಮೊನ್ನೆ ಅಯತೊಲ್ಲಾ ಖೊಮೇನಿಯನ್ನು ಇಸ್ರೇಲ್-ಅಮೆರಿಕ ಹತ್ಯೆ ಮಾಡಿದಾಗ, ಇರಾನಿನ ಜನ ಬೀದಿಗಿಳಿದು ಸಂಭ್ರಮಿಸಿದರು. ಕಾರಣ, ಖೊಮೇನಿಯನ್ನು ಯಾರೂ ಸಾಯಿಸಲು ಸಾಧ್ಯವೇ ಇಲ್ಲ ಎಂದು ಇರಾನಿನ ಜನ ಭಾವಿಸಿದ್ದರು. ಆದರೆ ಖೊಮೇನಿ ಹತ್ಯೆ ಸುದ್ದಿ ಕೇಳಿದ ಅಲ್ಲಿನ ಜನತೆ ಇಸ್ರೇಲ್-ಅಮೆರಿಕವನ್ನು ಪ್ರಶಂಸಿಸಿದರು. ಇಸ್ರೇಲ್-ಅಮೆರಿಕ ಸೇರಿ ಇರಾನನ್ನು ದುರ್ಬಲಗೊಳಿಸುವ ಪ್ರತಿ ಕ್ರಮವನ್ನು ಇರಾನಿಯರು ಸ್ವಾಗತಿಸುತ್ತಾರೆ. ಈಗ ನಡೆಯುತ್ತಿರುವ ಯುದ್ಧದಲ್ಲಿ ಇಸ್ರೇಲ್-ಅಮೆರಿಕ ಶಕ್ತಿ ಮೀರಿ, ಇರಾನಿನ ನಾಗರಿಕರ ಮೇಲೆ ದಾಳಿ ಮಾಡುತ್ತಿಲ್ಲ. ಈ ವರ್ಷದ ಫೆಬ್ರವರಿ ಇಪ್ಪತ್ತೆಂಟರಿಂದ ಇಲ್ಲಿ ತನಕ ಸತ್ತವರ ಸಂಖ್ಯೆ, ಸಾಮಾನ್ಯವಾಗಿ ಇರಾನಿನಲ್ಲಿ ನಡೆಯುವ ಎರಡು ದಿನಗಳ ಪ್ರತಿಭಟನೆಯಲ್ಲಿ ಸಾಯುವುದಕ್ಕಿಂತ ಕಮ್ಮಿ. ಈ ಸಂಘರ್ಷ ಇಲ್ಲಿಗೆ ಹೋಗಿ ನಿಲ್ಲುವುದೋ ಗೊತ್ತಿಲ್ಲ. ಆದರೆ ಈ ಆಡಳಿತದ ವಿರುದ್ಧ ಹೋರಾಡಿ ಪ್ರಾಣ ತೆತ್ತ ನಲವತ್ತು ಸಾವಿರ ಜನರ ಸಾವು ವ್ಯರ್ಥವಾಗಲಿಕ್ಕಿಲ್ಲ.

ಭಟ್ಟರ್ ಸ್ಕಾಚ್

- **ಅಪೂರ್ವ ಬನ್ನಿಮಠ, ಮೈಸೂರು**
ಭಟ್ರೇ, ಮದುವೆಗೂ, ಮ್ಯಾಗಿ ನೂಡಲ್ಸ್‌ಗೂ ಇರುವ ಸಾಮ್ಯತೆ ಏನು?
- **ಎರಡೂ ಕೂಡ 'ಎರಡೇ ನಿಮಿಷ'ದಲ್ಲಿ ಸಿದ್ಧವಾಗುತ್ತವೆ ಎಂದು ನಂಬಿಸಿ, ಕೊನೆಗೆ ಜೀವನ ಪರ್ಯಂತ 'ಬೇಯಿಸುತ್ತಲೇ' ಇರುತ್ತೇವೆ !**

- **ರಾಜಿ, ಬೆಂಗಳೂರು**
ಭಟ್ರೇ, ಸಾಲ ಕೊಟ್ಟವನಿಗೂ ಮತ್ತು ಇನ್ಸ್ಟಾಗ್ರಾಮ್‌ಗೂ ಇರುವ ವ್ಯತ್ಯಾಸ?
- **ಇನ್ಸ್ಟಾಗ್ರಾಮ್‌ನಲ್ಲಿ ನಮ್ಮನ್ನು ಫಾಲೋ ಮಾಡುತ್ತಾರೆ, ಸಾಲ ಕೊಟ್ಟವನು ನಮ್ಮನ್ನು ಚೇಸ್ ಮಾಡುತ್ತಾನೆ!**

- **ಚಿದಾನಂದ ಗದಗ, ಗದಗ**
ಭಟ್ರೇ, ಜೀವನದಲ್ಲಿ ಯಾವುದು ಅತಿ ವೇಗವಾಗಿ ಓಡುತ್ತದೆ? ಹುಲಿಯೋ ಅಥವಾ ಚಿರತೆಯೋ?
- **ಸಂಬಳ ಬಂದ ದಿನ ನಮ್ಮ ಕೈಯಿಂದ ಓಡುವ ಹಣ!**

- **ಪಿ.ಕೇಶವ (ಇಮೇಲ್ ಮೂಲಕ)**
ಭಟ್ರೇ, ಅಡುಗೆ ಮಾಡುವವರಿಗೂ ಮತ್ತು ಸಾಫ್ಟ್‌ವೇರ್ ಇಂಜಿನಿಯರ್‌ಗಳಿಗೂ ಇರುವ ವ್ಯತ್ಯಾಸ?
- **ಅಡುಗೆಯಲ್ಲಿ ಉಪ್ಪು ಹೆಚ್ಚಾದರೆ ಗೊತ್ತಾಗುತ್ತದೆ, ಕೋಡಿಂಗ್‌ನಲ್ಲಿ ಬಗ್ ಎಲ್ಲಿದೆ ಅಂತ ದೇವರಿಗೂ ಗೊತ್ತಾಗಲ್ಲ!**

- **ವಾಣಿ ಉದಯ, ಮಂಗಳೂರು**
ಭಟ್ರೇ, ಜೇಬಿನಲ್ಲಿ ಹಣವಿಲ್ಲದಿದ್ದರೂ ಶ್ರೀಮಂತರಾಗಿ ಕಾಣುವುದು ಹೇಗೆ?
- **ಬೇರೆಯವರ ವೈ-ಫೈ ಪಾಸ್‌ವರ್ಡ್ ಗೊತ್ತಿದ್ದರೆ ಸಾಕು!**

- **ಪ್ರೇಮ ಕೆ., ತುಮಕೂರು**
ಭಟ್ರೇ, ಪ್ರೀತಿ ಮತ್ತು ಕೆಮ್ಮಿನ ನಡುವಿನ ಹೋಲಿಕೆ ಏನು?
- **ಇವೆರಡನ್ನೂ ಎಷ್ಟು ಮುಚ್ಚಿಡಲು ಪ್ರಯತ್ನಿಸಿದರೂ, ಯಾವುದೋ ಒಂದು ಕ್ಷಣದಲ್ಲಿ ಹೊರಗೆ ಬಂದೇ ಬರುತ್ತವೆ!**

- **ಸೂರಿ, ಜಯನಗರ**
ಭಟ್ರೇ, ಮದುವೆಯಾದ ಗಂಡ ಮತ್ತು ನ್ಯೂಸ್ ಚಾನೆಲ್ ನಡುವಿನ ವ್ಯತ್ಯಾಸವೇನು?
- **ನ್ಯೂಸ್ ಚಾನೆಲ್‌ನಲ್ಲಿ ಬ್ರೇಕಿಂಗ್ ನ್ಯೂಸ್ ಬರುತ್ತದೆ, ಮನೆಯಲ್ಲಿ ಗಂಡನಿಗೆ ಬ್ರೇಕಿಂಗ್ ರೂಲ್ಸ್ ಬರುತ್ತದೆ!**

- **ತ್ರಿವೇಣಿ ನಾಡಿಗ, ಸಂಜಯನಗರ**
ಭಟ್ರೇ, ಸೋಮವಾರಕ್ಕೂ ಮತ್ತು ಚಳಿಗಾಲಕ್ಕೂ ಇರುವ ಸಾಮ್ಯತೆ?
- **ಎರಡೂ ಬಂದಾಗ ಹೊದಿಕೆ ಬಿಟ್ಟು ಏಳಲು ಮನಸ್ಸೇ ಬರುವುದಿಲ್ಲ!**

ಯುದ್ಧ ಎಂದರೆ ಎಲ್ಲರಿಗೂ ಬಹಳ ಇಷ್ಟ!

ಕಾಡುದಾರಿ
ಹರೀಶ್ ಕೇರ
vveditoped@gmail.com

ಹಿರಿಯ ಪತ್ರಕರ್ತ ಪಿ.ಸಾಯಿನಾಥ್ ಅವರ 'Everybody Loves a Good Drought' ಎಂಬ ಹೆಸರಿನ ಪುಸ್ತಕವೊಂದಿದೆ. ಬರ ಪರಿಸ್ಥಿತಿಗಳು ಸಾಮಾನ್ಯ ಜನರನ್ನು ಸುಲಿದು ಹಾಕುತ್ತವೆ. ಆದರೆ ಶ್ರೀಮಂತರು, ಆಯಕಟ್ಟಿನ ತಾಣಗಳಲ್ಲಿರುವವರು, ಉದ್ಯಮಿಗಳು, ರಾಜಕಾರಣಿಗಳು ಹೀಗೆ ಎಲ್ಲರೂ ಈ ಬರದಿಂದ ತಮಗೆ ಸಾಧ್ಯವಾದಷ್ಟು ಲಾಭವನ್ನು ಗೆಬರಿಕೊಳ್ಳುತ್ತಾರೆ. ಬರದ ಹೆಸರಿನಲ್ಲಿ ಯೋಜನೆಗಳ ಅನುದಾನ ಸ್ಯಾಂಕ್ಷನ್ ಮಾಡುವ ಮೇಲಿನವರಿಂದ ಹಿಡಿದು, ಕೂಲಿಗೆ ಅದನ್ನು ಹಂಚಬೇಕಾದ ಮೇಸ್ತ್ರಿಯವರೆಗೆ ಎಲ್ಲರೂ ಬರದಿಂದಾಗಿ ದುಂಡಗಾಗುತ್ತಾರೆ. ಆದ್ದರಿಂದ ಇಂಥ ಜನರಿಗೆ ಬರ ಎಂದರೆ ಒಂಥರಾ ಪ್ರೀತಿ. ಭಾರತದ ನಾನಾ ಕಡೆ ನಡೆಸಿದ ವಿಸ್ತಾರ ಕ್ಷೇತ್ರ ಕಾರ್ಯ ಆಧರಿಸಿ ಬರೆದ ಪುಸ್ತಕವಿದು. ಈ ಪುಸ್ತಕದ ಶೀರ್ಷಿಕೆಯನ್ನೂ ಪರಿಕಲ್ಪನೆಯನ್ನೂ ತುಸು ಎತ್ತಿಕೊಂಡು, ಬದಲಾಯಿಸಿ ನಾವು ಈಗ 'ಒಳ್ಳೆಯ ಯುದ್ಧ ಅಂದರೆ ಎಲ್ಲರಿಗೂ ಇಷ್ಟ' ಎಂದು ಹೇಳಬಹುದು.

ಇರಾನ್-ಇಸ್ರೇಲ್-ಅಮೆರಿಕ ಯುದ್ಧದಿಂದ ನೇರ ಲಾಭ ಮಾಡಿಕೊಂಡವರು ಯಾರು ಎಂಬುದನ್ನು ತಿಳಿಯಲು ಹೆಚ್ಚು ತಿಣುಕಾಡಬೇಕಿಲ್ಲ. ಕೊಲ್ಲಿ ಸಂಘರ್ಷದಿಂದಾಗಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 100 ಡಾಲರ್ ದಾಟಿದೆ. ಹೀಗಾಗಿ ಈ ವರ್ಷ ಅಮೆರಿಕದ ತೈಲ ಉತ್ಪಾದಕರು ಹೆಚ್ಚುವರಿ 63 ಶತಕೋಟಿ ಡಾಲರ್ ಲಾಭ ಗಳಿಸಲಿದ್ದಾರೆ ಎಂದು ಇಂಧನ ಸಂಶೋಧನಾ ಸಂಸ್ಥೆ ರಿಸ್ಟಾಡ್ ಎನರ್ಜಿ ಲೆಕ್ಕಹಾಕಿದೆ. ಈ ವರ್ಷ ಅಮೆರಿಕದ ದೈತ್ಯ ತೈಲ ಕಂಪನಿಗಳ ಷೇರು ಬೆಲೆಗಳು ಸುಮಾರು 30%ರಷ್ಟು ಏರಿಕೆಯಾಗಿವೆ. ರಷ್ಯಾ ಉಕ್ರೇನ್ ಅನ್ನು ಆಕ್ರಮಿಸಿದ ನಂತರ ಈ ಏರಿಕೆ ಶುರುವಾಗಿದೆ. ಇರಾನ್ ಮೇಲಿನ ದಾಳಿಯ ಬಳಿಕ ಇದು ಇನ್ನಷ್ಟು ಏರಿದೆ. ದ್ರವೀಕೃತ ನೈಸರ್ಗಿಕ ಅನಿಲ (LNG) ಬೆಲೆ ಸಹ ಗಗನಕ್ಕೇರಿದೆ. ಹಾಗೇ ಗ್ಯಾಸೋಲಿನ್, ಡೀಸೆಲ್ ಮತ್ತು ಜೆಟ್ ಇಂಧನದ ದರ ಕೂಡ ಹೆಚ್ಚಾಗಿದೆ. ಎಕ್ಸಾನ್, ಚೆನಿಯರ್ ಎನರ್ಜಿ, ವೆಂಚರ್ ಗ್ಲೋಬಲ್, ವ್ಯಾಲೆರೊ ಎನರ್ಜಿ, ಮ್ಯಾರಥಾನ್ ಪೆಟ್ರೋಲಿಯಂ, ಫಿಲಿಪ್ಸ್ 66 ಇವರೆಲ್ಲಾ ಲಾಭ ಮಾಡಿಕೊಂಡವರು.

ಅತ್ತ ರಷ್ಯಾದ ತೈಲ ಕಂಪನಿಗಳು ಕೂಡ ಸಾಕಷ್ಟು ಬಾಚಿಕೊಳ್ಳುತ್ತಿವೆ. ತೈಲ ಬೆಲೆಗಳಲ್ಲಿ 14%-30% ಹೆಚ್ಚಳದಿಂದಾಗಿ ರಷ್ಯಾ ದಿನಕ್ಕೆ ಅಂದಾಜು 15 ಕೋಟಿ ಡಾಲರ್‌ನಿಂದ 59 ಕೋಟಿ ಡಾಲರ್‌ನಷ್ಟು ಹೆಚ್ಚುವರಿ ಬಜೆಟ್ ಆದಾಯ ಗಳಿಸುತ್ತಿದೆ. ಮಧ್ಯಪ್ರಾಚ್ಯದಿಂದ ಬರುವ ತೈಲಕ್ಕೆ ಅಡ್ಡಿಯಾದಾಗ ಖರೀದಿದಾರರು ಹುಡುಕಿದ ಮೊದಲ ಪರ್ಯಾಯ ರಷ್ಯಾ. ಬೇಡಿಕೆ ಹೆಚ್ಚಾಯಿತು. ಜಾಗತಿಕ ಬೆಲೆಗಳನ್ನು ಸ್ಥಿರಗೊಳಿಸುವ ಪ್ರಯತ್ನದಲ್ಲಿ ಅಮೆರಿಕ ಕೂಡ ಇದಕ್ಕೆ ತಾತ್ಕಾಲಿಕ ವಿನಾಯಿತಿ ನೀಡಿತು. ರಷ್ಯಾದಿಂದ ತೈಲ ಖರೀದಿಸಲು ಭಾರತಕ್ಕೆ ಅಮೆರಿಕದ ಅನುಮತಿ ಬೇಕು ಎಂಬುದೇ ಇದುವರೆಗೆ ಕಂಡು ಕೇಳರಿಯದ ವಿಷಯ. ಆದರೂ ಎಲ್ಲ ಕಡೆಯೂ ತನ್ನದೂ ಒಂದಿರಲಿ ಎಂದು ತೂರಿಸುವ ಅಮೆರಿಕದ ಬುದ್ಧಿ ಇದರಿಂದ ರುಜುವಾತಾಗುತ್ತದೆ ಅಷ್ಟೇ.

ಯುದ್ಧದಿಂದ ಪರಮಾಯಿಷಿ ಖುಷಿ ಮತ್ತು ಲಾಭ ಯಾರಿಗೆ ಎಂಬುದು ಬಿಡಿಸಿ ಹೇಳಬೇಕಿಲ್ಲ, ಅವು ಶಸ್ತ್ರಾಸ್ತ್ರ ಕಂಪನಿಗಳು. ಈಗಾಗಲೇ ಅಮೆರಿಕ ಹಾಗೂ ಇಸ್ರೇಲ್‌ನ ಹಲವು ದೊಡ್ಡ ಕಂಪನಿಗಳು ಲಾಭದಿಂದ ತುಂಬಿ ತುಳುಕುತ್ತಿವೆ. ಲಾಕ್‌ಹೀಡ್ ಮಾರ್ಟಿನ್ ಕಂಪನಿ ಎಫ್-35 ಯುದ್ಧ ವಿಮಾನಗಳು, ಜಾವೆಲಿನ್ ಕ್ಷಿಪಣಿಗಳನ್ನು ಇಸ್ರೇಲ್‌ಗೆ ಸರಬರಾಜು ಮಾಡುತ್ತಿದೆ. ಯುದ್ಧ ಮುಂದುವರಿದರೆ ಹೊಸ ಆರ್ಡರ್‌ಗಳು ಬರುತ್ತವೆ. ಆರ್‌ಟಿಎಕ್ಸ್ ಕಂಪನಿ ಪೇಟ್ರಿಯಟ್ ಕ್ಷಿಪಣಿ, ಐರನ್ ಡೋಮ್ ತಂತ್ರಜ್ಞಾನ, ಏರ್ ಡಿಫೆನ್ಸ್ ಮಿಸೈಲ್‌ಗಳನ್ನು ಒದಗಿಸುತ್ತಿದೆ. ಇರಾನ್‌ನ ಮಿಸೈಲ್ ದಾಳಿಗಳಿಗೆ ಪ್ರತಿಯಾಗಿ ಇವು ಬೇಕು. ನಾರ್ತ್ರಾಪ್ ಗ್ರುಮ್ಮನ್ ಕಂಪನಿ

ಡ್ರೋನ್‌ಗಳು, ಸರ್ವೇಲೆನ್ಸ್ ಸಿಸ್ಟಮ್ಸ್, ಎಲೆಕ್ಟ್ರಾನಿಕ್ ಯುದ್ಧತಂತ್ರಜ್ಞಾನವನ್ನು ಕೊಡುತ್ತದೆ. ಬೋಯಿಂಗ್ ಕಂಪನಿ ಅಪಾಚೆ ಹೆಲಿಕಾಪ್ಟರ್‌ಗಳು, ಮಿಲಿಟರಿ ವಿಮಾನಗಳನ್ನು ಒದಗಿಸುತ್ತದೆ. ದೀರ್ಘಕಾಲದ ನಿರ್ವಹಣೆ, ಪೂರಕ ಬಿಡಿಭಾಗವೆಲ್ಲ ಇದರದೇ. ಎಲ್ಬಿಟ್ ಸಿಸ್ಟಮ್ಸ್ ಕಂಪನಿಯು ರಫೇಲ್ ಯುದ್ಧವಿಮಾನವನ್ನು ಒದಗಿಸುತ್ತದೆ.

ಯುದ್ಧ ನಡೆಯುತ್ತಿರುವಾಗ ಹೇಗೂ ಉಂಟಲ್ಲ, ಯುದ್ಧ ಮುಗಿದ ಮೇಲೂ ಇವರ ವ್ಯಾಪಾರಕ್ಕೆ ಧಕ್ಕೆಯಿಲ್ಲ. 'ಇರಾನನ್ನು ನಮ್ಮ ಅಸ್ತ್ರಗಳು ಹೇಗೆ ಬಡಿದುಹಾಕಿದವು ನೋಡಿ' ಎನ್ನುತ್ತ ಇಡೀ ಯುದ್ಧವನ್ನು ತಮ್ಮ ಜಾಹೀರಾತು ಮಾಡಿಕೊಂಡು ಈ ಕಂಪನಿಗಳು ಇತರ ದೇಶಗಳೊಂದಿಗೆ ವ್ಯಾಪಾರ ಕುದುರಿಸುತ್ತವೆ. ಈಗ ಪಾಕ್-ಆಫ್ಘನ್ ನಡುವೆ ನಡೆಯುತ್ತಿರುವ ಚಿಲ್ಲರೆ ಯುದ್ಧದಲ್ಲೂ ಇವುಗಳು ಲಾಭ ಹಿಂಜುತ್ತವೆ. ಮಿಸೈಲ್, ಡ್ರೋನ್, ಬಾಂಬ್‌ಗಳ ಬಳಕೆ, ಬಳಸಿದ ಶಸ್ತ್ರಾಸ್ತ್ರಗಳನ್ನು ಮತ್ತೆ ತುಂಬುವುದು, ಇದರಿಂದ ವರ್ಷಗಳವರೆಗೆ ಆದಾಯ. ಯುದ್ಧದ ಭಯದಿಂದ ಮಧ್ಯಪ್ರಾಚ್ಯ, ಯುರೋಪ್ ದೇಶಗಳು ಹೊಸ ಒಪ್ಪಂದ ಮಾಡಿಕೊಂಡು ತಮ್ಮ ರಕ್ಷಣಾ ಖರ್ಚು ಹೆಚ್ಚಿಸುತ್ತವೆ. ಯುದ್ಧ ಎಂಬುದು ಲೈವ್ ಡೆಮೋ. ಒಂದು ಮಿಸೈಲ್ ಅಥವಾ ಡಿಫೆನ್ಸ್ ಸಿಸ್ಟಮ್ ಅಲ್ಲಿ ಯಶಸ್ವಿಯಾದರೆ ಬೇರೆ ದೇಶಗಳು ಖರೀದಿಸಲು ಮುಂದೆ ಬರುತ್ತವೆ. ಹೀಗೆ ಯುದ್ಧರಂಗವು ರಂಗಭೂಮಿಯೂ ಹೌದು. ಇನ್ನು ಇವುಗಳ ಸ್ಟಾಕ್ ಮಾರ್ಕೆಟ್ ಲಾಭ ಹೇಗೂ ಇದೆಯಲ್ಲ.

ಸದ್ದಿಲ್ಲದೇ ಲಾಭ ಮಾಡಿಕೊಂಡ ಇನ್ನೊಂದು ವಿಭಾಗ ಎಂದರೆ ವಿಮಾ ಕಂಪನಿಗಳು. ಕೆಲವು ವಿಮಾ ಕಂಪನಿಗಳೇ ಹಗಲು ದರೋಡೆಕೋರರು ಎಂಬುದು ನಿಜ. ಈಗ ಇದು ಇನ್ನೊಂದು ಲೆವೆಲ್‌ಗೆ ಹೋಗಿದೆ. ಹೊರ್ಮುಜ್ ಜಲಸಂಧಿ ಬಿಕ್ಕಟ್ಟಿನಿಂದಾಗಿ ವಿಮಾದಾರರು ಹಡಗುಗಳ ಮೇಲಿನ 'ವಾರ್ ರಿಸ್ಕ್' ಪ್ರೀಮಿಯಂಗಳನ್ನು 25 ಪಟ್ಟು ಹೆಚ್ಚಿಸಿದ್ದಾರೆ. ಹೆಚ್ಚಿನ ಅಪಾಯದ ಸಾಗಣೆಯನ್ನು ಹೆಚ್ಚಿನ ಲಾಭದ ವ್ಯವಹಾರವನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಈಗಿರುವ ಕಡಿಮೆ-ವೆಚ್ಚದ ಪಾಲಿಸಿಗಳನ್ನು ಹೆಚ್ಚಿನ ಬೆಲೆ ವ್ಯಾಪ್ತಿಗೆ ಏರಿಸಿದ್ದಾರೆ. ವಾರ್ ರಿಸ್ಕ್ ಪ್ರೀಮಿಯಂಗಳು ಪ್ರತಿ ಪ್ರಯಾಣಕ್ಕೆ ಸುಮಾರು 2.50 ಲಕ್ಷ ಡಾಲರ್‌ನಿಂದ 10 ಲಕ್ಷ ಡಾಲರ್‌ವರೆಗೆ ಏರಿವೆ. ಹೆಚ್ಚಿನ ಅಪಾಯದ ವಲಯಗಳಲ್ಲಿ ಅಸ್ತಿತ್ವದಲ್ಲಿರುವ ಕವರೇಜ್‌ಗಳನ್ನೇ ರದ್ದುಗೊಳಿಸಿದ್ದಾರೆ. ಲಾಯ್ಡ್ಸ್ ಆಫ್ ಲಂಡನ್ ಇಂಥದೊಂದು ವಿಮಾ ಕಂಪನಿ.

ಇನ್ನು ಮೀಡಿಯಾಗಳು. ಇವುಗಳ ವಿಚಾರ ಹೇಳುವ ಮುನ್ನ ಹಳೆ ಕಥೆಯೊಂದನ್ನು ಹೇಳಬೇಕು. ಅಮೆರಿಕದ ಹಳದಿ ಪತ್ರಿಕೋದ್ಯಮದ ಪಿತಾಮಹನೆಂದೇ ಬ್ರ್ಯಾಂಡ್ ಆಗಿರುವ ವಿಲಿಯಂ ರಾಂಡಾಲ್ಫ್ ಹರ್ಸ್ಟ್ (William Randolph Hearst) ಆಗ ನ್ಯೂಯಾರ್ಕ್‌ನಲ್ಲಿ ಮಾರ್ನಿಂಗ್ ಜರ್ನಲ್ ಎಂಬ ಪತ್ರಿಕೆ ನಡೆಸುತ್ತಿದ್ದ. ಆಗಷ್ಟೇ ಕ್ಯೂಬಾ, ಸ್ಪೇನ್‌ನಿಂದ ಮುಕ್ತಿ ಪಡೆಯಲು ಮುಂದಾಗಿತ್ತು. ಅದಕ್ಕೆ ನೆರವಾಗುತ್ತಿದ್ದದ್ದು ಅಮೆರಿಕ. ಕ್ಯೂಬಾದಲ್ಲಿ ನಡೆಯುತ್ತಿರುವ ದಂಗೆಯ ವರದಿ ಮಾಡುವುದಕ್ಕೆ ಒಬ್ಬ ವರದಿಗಾರನನ್ನು ಹರ್ಸ್ಟ್ ಕಳಿಸಿದ. ಆ ರಿಪೋರ್ಟರ್ ಅಲ್ಲಿ ಹೋಗಿ, ಯುದ್ಧದ ಯಾವುದೇ ಸುಳಿವಿಲ್ಲದ್ದನ್ನು ಕಂಡು ಕಂಗಾಲಾದ. ಇಲ್ಲಿ ಯಾವುದೇ ದಂಗೆ, ಯುದ್ಧ ನಡೆಯುತ್ತಿಲ್ಲ ಎಂದು ಹರ್ಸ್ಟ್ ಸಂದೇಶ ಬಿಟ್ಟ. ಹರ್ಸ್ಟ್ ಮರುತಂತಿಯಲ್ಲಿ ಆತನಿಗೆ ನೀನು ಅಲ್ಲಿಂದ ವರದಿ, ಚಿತ್ರ ಕಳಿಸು. ನಾನು ಇಲ್ಲಿಂದ ಯುದ್ಧವನ್ನು ಕಳಿಸುತ್ತೇನೆ ಎಂದು ಬರೆದ. ಸರಿ, ವರದಿಗಾರ ಅಲ್ಲಿಂದ ಕಲ್ಪಿತ, ಪ್ರಚೋದನಕಾರಿ ವರದಿಗಳನ್ನು ಕಳಿಸತೊಡಗಿದ. ಇದನ್ನೆಲ್ಲ ಓದಿ ರೊಚ್ಚಿಗೆದ್ದ ಅಮೆರಿಕನ್ನರು, ಕ್ಯೂಬನ್ನರಿಗೆ ಸಹಾಯ ಮಾಡುವಂತೆ ಅಮೆರಿಕ ಸರಕಾರದ ಮೇಲೆ ಒತ್ತಡ ಹಾಕಿದರು. ಅಮೆರಿಕ ಕ್ಯೂಬಾಗೆ ಮಿಲಿಟರಿ ನುಗ್ಗಿಸಿತು. ಹೀಗೆ ಇಲ್ಲದ ಯುದ್ಧವನ್ನು ಮೀಡಿಯಾ ಸೃಷ್ಟಿಸಿತು. ಈ ಘಟನೆ ಹೀಗೇ ನಡೆಯಿತೇ ಎಂಬುದರ ಬಗ್ಗೆ ತಜ್ಞರಲ್ಲಿ ಭಿನ್ನಾಭಿಪ್ರಾಯ ಇದೆ. ಆದರೆ ಆ ಕಾಲದ ಹಳದಿ ಪತ್ರಿಕೋದ್ಯಮದ ಸ್ಪ್ಯಾನಿಶ್- ಅಮೆರಿಕನ್ ಯುದ್ಧವನ್ನು ವ್ಯಾಪಕವಾಗಿ ಪ್ರಭಾವಿಸಿದ್ದಂತೂ ನಿಜ.

ಇದನ್ನು ನೋಡಿದರೆ, ಮೀಡಿಯಾಗಳಿಗೆ ಯುದ್ಧ ಯಾಕೆ ಪ್ರಿಯ ಎಂದು ಗೊತ್ತಾಗುತ್ತದೆ. ದೀಪಾವಳಿ ಪಟಾಕಿಗಳಂತೆ ಸಿಡಿಯುವ ಡ್ರೋನ್‌ಗಳು, ಆಕಾಶದಲ್ಲಿ ಹೊಗೆಯ ಗೆರೆಯೆಳೆಯುತ್ತಾ ಹೋಗಿ ನರಕ ಸೃಷ್ಟಿಸುವ ಕ್ಷಿಪಣಿಗಳು, ಎಲ್ಲಿಂದ ಎಲ್ಲಿಗೋ ಬೆಂಕಿಯ ಮಳೆ ಸುರಿಸುವ ಯುದ್ಧವಿಮಾನಗಳು, ಭಸ್ಮೀಭೂತ ನಗರಗಳು, ಛಿದ್ರ ಕಟ್ಟಡಗಳು, ಎಲ್ಲವೂ ತೆರೆ ಮೇಲೆ ನೋಡಲು ಬಹಳ ಚಂದ. ಸಮರ ನೇರವಾಗಿ ತಲುಪದ ಜಾಗಗಳಲ್ಲಿ ಕುಳಿತು ಇವನ್ನು ಸಿನಿಮಾ ನೋಡಿದಂತೆ ನೋಡಬಹುದು.

ಇರಾನಿನ ಶಾಲೆ ಮೇಲೆ ಕ್ಷಿಪಣಿ ಬಿದ್ದು ಇಷ್ಟು ಮಕ್ಕಳನ್ನು ಸಾಯಿಸಿತು ಎಂಬುದು ಕೂಡ ನಮಗೆ ಒಂದು ಸೊಗಸಾದ ವರದಿ. ಇಲ್ಲಿ ಎಲ್ಲವೂ ಥಿಯೇಟರ್. ಯಾರು ಹೆಚ್ಚು ರಂಗುರಂಗಾದ ವಿನಾಶವನ್ನು ಸೃಷ್ಟಿಸುತ್ತಾರೋ ಅವರಿಗೆ ಅಧಿಕ ಲಾಭ. ಮತ್ತು ಈಗ ನಮಗೆ ಇವನ್ನೆಲ್ಲ ನೋಡಲು ಸೋಶಿಯಲ್ ಮೀಡಿಯಾ ಕೂಡ ಇರುವುದರಿಂದ, ಸಾಂಪ್ರದಾಯಿಕ ಮಾಧ್ಯಮವೂ ಅಗತ್ಯವಿಲ್ಲ, ಯೂಟ್ಯೂಬ್, ಎಕ್ಸ್, ಫೇಸ್‌ಬುಕ್ ಮೊದಲಾದವರ ಲಾಭ ಎಷ್ಟು ಪಟ್ಟು ಹೆಚ್ಚಿತೋ ಯಾರಿಗೆ ಗೊತ್ತು.

ಯುದ್ಧ ಎಂಬುದು ಯಾರಿಗೂ ಗೆಲ್ಲುವ ಬಾಬತ್ತಲ್ಲ. ಗೆದ್ದವ ಸೋತ, ಸೋತವ ಸತ್ತ ಎಂಬ ಮಾತೇ ಇದೆ. ಯುದ್ಧಕ್ಕೆ ಮುಂಗಾಲಪುಟಿಕೆಯಲ್ಲಿ ಹೊರಟ ಅಮೆರಿಕ ಕೂಡ ಈಗ ಹೊರ್ಮುಜ್ ಕಾಲುವೆಗೆ ಬನ್ನಿರೋ ಎಂದು ಮಿತ್ರದೇಶಗಳತ್ತ ಬಾಯಿ ಬಡಿದುಕೊಳ್ಳುತ್ತಿದೆ. ಇಸ್ರೇಲ್ ಇನ್ನೊಂದಷ್ಟು ಶಾಶ್ವತ ಶತ್ರುಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಆದರೆ ಇದೆಲ್ಲದರ ನಡುವೆಯೇ ಲಾಭ ಮಾಡುವವರು ಇದ್ದಾರೆ. ಇರಾನ್ ಈ ಸಮರದಲ್ಲಿ ಸೋತ, ಸೋಲುವ ದೇಶ ಎನ್ನುವಂತೆಯೂ ಇಲ್ಲ. ನನ್ನೊಂದಿಗೇ ನಿನ್ನನ್ನೂ ಮುಳುಗಿಸುತ್ತೇನೆ ಎನ್ನುವಂತಿರುವ ಅದು ಕಳೆದುಕೊಳ್ಳುವುದೇನೂ ಇಲ್ಲ. ಖಮೇನಿ ಸತ್ತರೂ ಅಲ್ಲಿನ ಆಡಳಿತ ಗಟ್ಟಿಯಾಗಿ ಉಳಿದಿದೆ. ಯುದ್ಧದಲ್ಲಿ ಬದುಕುಳಿಯುವುದು ಗೆಲುವಿಗೆ ಕಡಿಮೆಯೇನಲ್ಲ. ಅತ್ತ ಚೀನಾ ಮತ್ತು ರಷ್ಯಾ ತಮ್ಮದೇ ಆದ ರೀತಿಯಲ್ಲಿ ಮಿತ್ರರನ್ನು ಮಾಡಿಕೊಂಡು, ವ್ಯಾಪಾರ ವ್ಯವಹಾರ ಗಟ್ಟಿ ಮಾಡಿಕೊಳ್ಳುತ್ತಿವೆ. ಅಮೆರಿಕ- ಇಸ್ರೇಲ್ ಎಸಗಿರುವ ಕ್ರೌರ್ಯದ ಮುಂದೆ ಉಕ್ರೇನ್‌ನ ಮೇಲೆ ರಷ್ಯಾ ಎಸಗಿರುವ ದೌರ್ಜನ್ಯ ಮರೆಯಾಗಿ ಹೋಗಿದೆ. ಆ ಮಟ್ಟಿಗೆ ಪುಟಿನ್-ಟ್ರಂಪ್ ಎಲ್ಲರೂ ಕೈಕುಲುಕಿಕೊಂಡಿದ್ದಾರೆ. ಅತ್ತ ಇದೇ ಸಮಯ ಎಂದು ಉತ್ತರ ಕೊರಿಯಾ ಉಕ್ಕೇರುತ್ತಿದೆ. ಇತ್ತ ಅಪ್ಪ-ಅಮ್ಮ ಲಡಾಯಿ ಮಾಡುತ್ತಿರುವಾಗ ಅಂಗಳದಲ್ಲಿ ದೊಡ್ಡ ಮಗ ಸಣ್ಣವನನ್ನು ಚಚ್ಚಿದಂತೆ ಅಫ್ಘಾನಿಸ್ತಾನವನ್ನು ಪಾಕ್ ಚಚ್ಚುತ್ತಿದೆ. ಹೊಸ ವರ್ಲ್ಡ್ ಆರ್ಡರ್ ಅಥವಾ ಜಾಗತಿಕ ವ್ಯವಸ್ಥೆ ಉಂಟಾಗುವ ಸೂಚನೆ ಕಾಣಿಸುತ್ತಿದೆ. ಎಲ್ಲರೂ ಲಾಭ ಮಾಡಿದವರೇ. ಹಾಗಾದರೆ ಸೋತವರು, ಸತ್ತವರು, ಹತಾಶರಾದವರು ಯಾರು? ಕೇಳಬೇಡಿ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಉಮರ್ಜಿ ಲೇಖನ ಅರ್ಥಪೂರ್ಣ

ಯಕ್ಷಪ್ರಶ್ನೆ ಅಂಕಣದಲ್ಲಿ ಜನಮೇಜಯ ಉಮರ್ಜಿರವರು, ಶರಣರ ಬಯಕೆ ಲಿಂಗಾಗ ಸಾಮರಸ್ಯವೋ? ಸಮಸಮಾಜವೋ? ಎಂಬ ಶೀರ್ಷಿಕೆಯಲ್ಲಿ ಲೇಖನ ಬರೆದಿದ್ದಾರೆ. 'ಸಮಸಮಾಜ'ದ ಬಗೆಗೆ ಬಹಳ ಅರ್ಥವತ್ತಾಗಿ ವಿಶ್ಲೇಷಿಸಿದ್ದಾರೆ. ಶರಣರು ಹಾಗು ಶರಣ ಸಾಹಿತ್ಯ ಸಮಸಮಾಜ ಚಳವಳಿಗಿಂತ ಮಿಗಿಲಾಗಿ ಆಧ್ಯಾತ್ಮಿಕ ಹಾಗು ಸಾಂಸ್ಕೃತಿಕ ಅಂಶಗಳನ್ನು ಹೆಚ್ಚಾಗಿ ಒಳಗೊಂಡಿದೆ. ಬಸವಾದಿ ಶಿವಶರಣರು ಅಂದು ತಮ್ಮ ವಚನ ಸಾಹಿತ್ಯದಲ್ಲಿ ದಾಸೋಹ, ಕಾಯಕ ಹಾಗೂ ಭಕ್ತಿಭಾವದ ಬಗೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಅನುಭವ ಮಂಟಪದಲ್ಲಿ ಎಲ್ಲಾ ಮಹಾಶರಣರು ಕೂಡ ಚರ್ಚಿಸಿ ಮಿಮಾಂಸೆಯಿಂದ ಅಂತಿಮಘಟ್ಟವಾದ 'ಭಕ್ತಿ'ಯೆಡೆಗೆ ತೆರಳಿ ನಿಲ್ಲುತ್ತಿದ್ದರು ಎಂದು ದಾಖಲಿಸಲಾಗಿದೆ. ಯುರೋಪಿಯನ್ ಕ್ರಾಂತಿಯಂತಹ ಯಾವುದೇ ಸಮಸಮಾಜದ ಪರಿಕಲ್ಪನೆಗಿಂತ ಆಧ್ಯಾತ್ಮಿಕತೆಗೇ ಗಮನ ಕೊಟ್ಟಿರುವುದು ಕಂಡುಬರುತ್ತದೆ. ಲೇಖಕರು ವಿಚಾರ ಮಂಡಿಸುತ್ತಾ ಶರಣರ ಆಶಯ ಸಾಮರಸ್ಯ ಯುತ ಸಮಾಜವಾಗಿತ್ತು ಎಂದು ಪ್ರಚುರಪಡಿಸಿದ್ದಾರೆ. ಯುರೋಪಿಯನ್ ಸೊಸೈಟಿಯ ಈ ಎಲ್ಲಾ 'ಪದಪುಂಜ'ಗಳನ್ನು ಬದಿಗಿರಿಸಿ 'ಶರಣಸಾಹಿತ್ಯ'ವನ್ನು ಗ್ರಹಿಸಿದಾಗ ಎಲ್ಲಾ ಶ್ರೀಶರಣರ ಆಶಯ ಹಾಗು ಅಂತಿಮಗುರಿ ಅಧ್ಯಾತ್ಮಿಕತೆಯೇ ಆಗಿತ್ತು ಎಂಬುದನ್ನು ನಾವೆಲ್ಲರೂ ಗಮನಿಸಬೇಕು.

-ರಾ.ರಾಮಾರಾಧ್ಯ, ಮೈಸೂರು

ಮೆಚ್ಚಬೇಕಾದ ದೇವೇಗೌಡರ ನಡೆ

ಲೋಕಸಭೆಯಲ್ಲಿ ಅಧಿವೇಶನ ನಡೆವ ಸಂದರ್ಭದಲ್ಲಿ ವಿಪಕ್ಷಗಳಿಂದ ಆಗುತ್ತಿರುವ ದುರ್ನಡತೆಗಳನ್ನು ಕಂಡ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರಿಗೆ ತಮ್ಮ ಸದಸ್ಯರ ನಡವಳಿಕೆನ್ನು ತಿದ್ದುವಂತೆ ತಿಳಿಹೇಳುವ ಪತ್ರವನ್ನು ಬರೆದಿರುವುದು ವರದಿಯಾಗಿದೆ. ಹೇಳುವವರು ಕೇಳುವವರು ಇಲ್ಲದಿದ್ದರೆ ಹೀಗೆಯೇ ಆಗುವುದು. ತಮ್ಮ ನಾಯಕನ ನಡೆಯೇ ಹಾದಿ ತಪ್ಪಿದಾಗ ಹಿಂಬಾಲಕರೂ ಸಹ ಅದೇ ಸರಿಯೇನೋ ಎಂದು ಭಾವಿಸಿ ಹಾದಿ ತಪ್ಪುವುದು ಸಹಜ. ಇಂತಹವನ್ನು ಕಂಡ ಮಾಜಿ ಪ್ರಧಾನಿ ದೇವೇಗೌಡರ ಮನಸ್ಸಿಗೆ ಬೇಸರವಾಗಿ ಪತ್ರ ಬರೆದಿರುವುದು ಮೆಚ್ಚತಕ್ಕದ್ದು. ಮಗನಿಗೆ ಸೋನಿಯಾ ಗಾಂಧಿ ಬುದ್ಧಿ ಹೇಳಿದರೆ ಇತರರೂ ಪಾಠ ಕಲಿಯುತ್ತಾರೆ. ಇನ್ನಾದರೂ ವಿಪಕ್ಷವು ಹುಡುಗಾಟಗಳನ್ನು ಅಥವಾ ಆಧಾರರಹಿತ ಆರೋಪಗಳನ್ನು ಮಾಡದೆ ತನ್ನ ಕೆಲಸವನ್ನು ನಿಷ್ಠೆಯಿಂದ ಮಾಡಲಿ. ವಿರೋಧ ವ್ಯಕ್ತಪಡಿಸುವುದಕ್ಕೂ ರೀತಿ ನೀತಿ ಇದೆ ಎಂಬುದನ್ನು ಅರಿಯಲಿ.

-ಪತ್ತಂಗಿ ಎಸ್. ಮುರಳಿ, ಬೆಂಗಳೂರು

14 ತಿಂಗಳು ಕಳೆದರೂ ಅಪೆಕ್ಸ್ ಬ್ಯಾಂಕ್‌ಗೆ ನೇಮಕಾತಿಯಾಗಿಲ್ಲ

ಕರ್ನಾಟಕ ಅಪೆಕ್ಸ್ ಬ್ಯಾಂಕಿನ ಸಹಾಯಕರ 87 ಹುದ್ದೆಗಳ ನೇಮಕಾತಿ ಪರೀಕ್ಷೆ ನಡೆದು ಪರಿಷ್ಕೃತ ಫಲಿತಾಂಶದ ಅಂತಿಮ ಪಟ್ಟಿ ಪ್ರಕಟವಾಗಿ 14 ತಿಂಗಳಾದರೂ ಹುದ್ದೆಗಳ ಭರ್ತಿ ಮಾಡುತ್ತಿಲ್ಲ. ಹೀಗಾಗಿ ಅರ್ಹ ಪ್ರಾಮಾಣಿಕ ಅಭ್ಯರ್ಥಿಗಳ ಭವಿಷ್ಯಕ್ಕೆ ಆತಂಕ ತಂದಿದೆ. ಇದರಲ್ಲೂ ನೇಮಕಾತಿ ಅಕ್ರಮ ಗೋಲ್‌ಮಾಲ್, ಅವ್ಯವಹಾರ ನಡೆಯುತ್ತಿದೆಯೇ...? ಸಹಕಾರ ಖಾತೆ ಈಗ ಸಿಎಂರವರಲ್ಲಿಯೇ ಇರುವುದರಿಂದ ಈ ಬಗ್ಗೆ ಶೀಘ್ರವಾಗಿ ಗಮನಹರಿಸಿ, ಪ್ರಾಮಾಣಿಕರ ನೇಮಕಾತಿ ಮಾಡಿ ಸಹಕಾರಿ ಹಣಕಾಸು ಸಂಸ್ಥೆ ಉಳಿಸಲಿ.

-ಎಸ್.ಎನ್.ರಮೇಶ್, ಮಂಡ್ಯ

ಯುಡಿಐಡಿ: ದಿವ್ಯಾಂಗರ ಗುರುತೋ? ಗೌರವವೋ?

ಹಿಂದೆ ಭಾರತದಲ್ಲಿ ವಿಶೇಷಚೇತನರಿಗೆ ನೀಡಲಾಗುತ್ತಿದ್ದ ಪ್ರಮಾಣಪತ್ರಗಳು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತಿದ್ದವು. ಇದರಿಂದ ಹಲವು ಸಮಸ್ಯೆಗಳು ಉಂಟಾಗುತ್ತಿತ್ತು. ಒಂದೇ ವ್ಯಕ್ತಿಗೆ ಹಲವು ಪ್ರಮಾಣಪತ್ರಗಳು, ಸೇವೆಗಳ ದುರುಪಯೋಗ, ನಿಖರ ಡೇಟಾ ಲಭ್ಯವಿಲ್ಲ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯದ ಕೊರತೆಯೂ ಸೇರಿದಂತೆ ಹಲವಾರು ಸಮಸ್ಯೆಗಳನ್ನು ನಿವಾರಿಸಲು, ಭಾರತ ಸರ್ಕಾರವು ಯುಡಿಐಡಿ (ವಿಶೇಷಚೇತನರ ವಿಶಿಷ್ಟ ಗುರುತುಪತ್ರ) ಯೋಜನೆಯನ್ನು ಆರಂಭಿಸಿತು.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತದಲ್ಲಿ ವಿಶೇಷಚೇತನರ ಹಕ್ಕುಗಳು, ಸೌಲಭ್ಯಗಳು ಮತ್ತು ಸಾಮಾಜಿಕ ಒಳಗೊಳ್ಳುವಿಕೆ (inclusion) ಬಗ್ಗೆ ಕಳೆದ ಕೆಲವು ದಶಕಗಳಲ್ಲಿ ಮಹತ್ತರ ಚರ್ಚೆಗಳು ನಡೆದಿವೆ. ವಿವಿಧ ಸರ್ಕಾರಗಳು ಹಲವು ಯೋಜನೆಗಳ ಮೂಲಕ ವಿಶೇಷಚೇತನರ ಜೀವನಮಟ್ಟವನ್ನು ಸುಧಾರಿಸಲು ಪ್ರಯತ್ನಿಸಿವೆ. ಈ ಹಿನ್ನೆಲೆಯಲ್ಲಿ, UDID (Unique Disability ID) ಯೋಜನೆ ಒಂದು ಕ್ರಾಂತಿಕಾರಿ ಹೆಜ್ಜೆಯಾಗಿದೆ. ಯುಡಿಐಡಿ ಎಂದರೆ ಪ್ರತಿ ವಿಶೇಷಚೇತನರ ವ್ಯಕ್ತಿಗೆ ನೀಡಲಾಗುವ ಒಂದು ವಿಶಿಷ್ಟ ಗುರುತಿನ ಸಂಖ್ಯೆ (Unique ID), ಇದು ದೇಶಾದ್ಯಂತ ವಿಶೇಷಚೇತನರ ಮಾಹಿತಿಯನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವ ಮತ್ತು ಸೇವೆಗಳನ್ನು ಸುಲಭಗೊಳಿಸುವ ಒಂದು ಮಹತ್ವದ ವ್ಯವಸ್ಥೆಯಾಗಿದೆ.

ಯುಡಿಐಡಿ ಯೋಜನೆಯ ಹಿನ್ನೆಲೆ ಗಮನಿಸಿದಾಗ, ಹಿಂದೆ ಭಾರತದಲ್ಲಿ ವಿಶೇಷಚೇತನರಿಗೆ ನೀಡಲಾಗುತ್ತಿದ್ದ ಪ್ರಮಾಣಪತ್ರಗಳು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತಿತ್ತು. ಇದರಿಂದ ಹಲವು ಸಮಸ್ಯೆಗಳು ಉಂಟಾಗುತ್ತಿತ್ತು. ಒಂದೇ ವ್ಯಕ್ತಿಗೆ ಹಲವು ಪ್ರಮಾಣಪತ್ರಗಳು, ಸೇವೆಗಳ ದುರುಪಯೋಗ, ನಿಖರ ಡೇಟಾ ಲಭ್ಯವಿಲ್ಲ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಕೊರತೆ ಮುಂತಾದ ಈ ಸಮಸ್ಯೆಗಳನ್ನು ನಿವಾರಿಸಲು, ಭಾರತ ಸರ್ಕಾರವು ಯುಡಿಐಡಿ ಯೋಜನೆಯನ್ನು ಆರಂಭಿಸಿತು. ಪ್ರತಿ ವಿಶೇಷಚೇತನರ ವ್ಯಕ್ತಿಗೆ ಒಂದೇ ರೀತಿಯ ಯುನಿಕ್ ಐಡಿ ಎಂಬ ರಾಷ್ಟ್ರೀಯ ಗುರುತು ನೀಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ವಿಶೇಷಚೇತನರ ನಿಖರ ಸಂಖ್ಯೆಯನ್ನು ತಿಳಿದುಕೊಳ್ಳಲು ಡಿಜಿಟಲ್ ಡೇಟಾಬೇಸ್ ನಿರ್ಮಾಣವಾಗುತ್ತದೆ. ಸರ್ಕಾರಿ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು ಸಹಾಯವಾಗುವುದು. ಜೊತೆಗೆ, ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದು ಮತ್ತು ಭ್ರಷ್ಟಾಚಾರ ಕಡಿಮೆ ಮಾಡುವುದು.

ಯುಡಿಐಡಿ ಕಾರ್ಡ್ ಒಂದು ಡಿಜಿಟಲ್ ಹಾಗೂ ಭೌತಿಕ ಗುರುತು ಪತ್ರವಾಗಿದೆ. ಇದರಲ್ಲಿ ಹೆಸರು, ವಿಳಾಸ, ಅಂಗವೈಕಲ್ಯದ ಪ್ರಕಾರ, ಪ್ರಮಾಣ (percentage of disability), ವಿಶಿಷ್ಟ ಗುರುತಿನ ಸಂಖ್ಯೆ ಮುಂತಾದ ಮಾಹಿತಿಗಳು ಸೇರಿರುತ್ತವೆ. ರಾಷ್ಟ್ರೀಯ ಡೇಟಾಬೇಸ್ ಅಂದರೆ, ಎಲ್ಲಾ ವಿಶೇಷಚೇತನರ ಮಾಹಿತಿ ಒಂದೇ ಡೇಟಾಬೇಸ್‌ನಲ್ಲಿ ದೊರೆಯುವಂತೆ ಯುಡಿಐಡಿ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆ ಹೊಂದಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ವಿಶೇಷಚೇತನರ ಎಲ್ಲಾ ಸೌಲಭ್ಯಗಳಿಗೆ ಒಂದೇ ಕಾರ್ಡ್ ಎಂಬ ರೀತಿಯಲ್ಲಿ ದೇಶಾದ್ಯಂತ ಯಾವ ರಾಜ್ಯದಲ್ಲಿದ್ದರೂ ಬಳಸಬಹುದು. ಭಾರತದಲ್ಲಿ ವಿಶೇಷಚೇತನರ ಒಟ್ಟು ಸಂಖ್ಯೆಯು ಜನಗಣತಿ 2011 ಪ್ರಕಾರ ಸುಮಾರು 2.68 ಕೋಟಿ ವಿಶೇಷಚೇತನರ ಇದ್ದು, ಇದು ದೇಶದ ಜನಸಂಖ್ಯೆಯ 2.21%ರಷ್ಟಿದೆ. ಆದರೆ ನಿಜವಾದ ಸಂಖ್ಯೆ ಈಗ (2025 ಅಂದಾಜು) 3-4 ಕೋಟಿ ಇರಬಹುದು ಎಂದು ಅಂದಾಜಿಸಲಾಗಿದೆ.

ಯುಡಿಐಡಿ ಪ್ರಗತಿಯನ್ನು ಗಮನಿಸಿದಾಗ, ಒಟ್ಟು 1.09 ಕೋಟಿ ಯುಡಿಐಡಿ ಕಾರ್ಡ್‌ಗಳು ಬಿಡುಗಡೆಯಾಗಿವೆ. ದೇಶದ ಮಟ್ಟದಲ್ಲಿ 40% ಮಾತ್ರ ಯುಡಿಐಡಿ ಪಡೆದಿದ್ದಾರೆ ಎಂದು ಅಂದಾಜಿಸಲಾಗಿದೆ. ಒಟ್ಟು PwDs- 3 ಕೋಟಿಯಷ್ಟಿದ್ದು, ಯುಡಿಐಡಿ ಪಡೆದವರು 1-1.2 ಕೋಟಿ ಎನ್ನಲಾಗಿದೆ. ಇನ್ನೂ 60% ಜನರಿಗೆ ಯುಡಿಐಡಿ ಇಲ್ಲವಾಗಿದೆ.

ಯೋಜನೆಯನ್ನು ಉತ್ತಮವಾಗಿ ಜಾರಿಗೆ ತಂದ ರಾಜ್ಯಗಳತ್ತ ಗಮನಿಸಿದಾಗ, ಉತ್ತಮ ಪ್ರದರ್ಶನ (50% ಮೇಲ್ಪಟ್ಟು) ಕರ್ನಾಟಕ, ತಮಿಳುನಾಡು, ಒಡಿಶಾ, ಮೇಘಾಲಯ ಎಂದು ಗುರುತಿಸಿದ್ದರೆ. ಕಡಿಮೆ ಪ್ರದರ್ಶನ ಎಂದು ಪಶ್ಚಿಮ ಬಂಗಾಳ (ಕೇವಲ 6%) ಎನ್ನಲಾಗಿದೆ. ಉಳಿದಂತೆ ಹಲವಾರು ಉತ್ತರ ರಾಜ್ಯಗಳು 20-30% ಮಾತ್ರ ಪ್ರಗತಿ ಸಾಧಿಸಿವೆ.

11 ಲಕ್ಷಕ್ಕಿಂತ ಹೆಚ್ಚು ಅರ್ಜಿಗಳು ಬಾಕಿ ಇದ್ದು, ಅವುಗಳಲ್ಲಿ 60% ಅರ್ಜಿಗಳು 6 ತಿಂಗಳಿಗೂ ಹೆಚ್ಚು ಕಾಲ ಬಾಕಿಯಾಗೇ ಉಳಿದಿವೆ. ರಾಜ್ಯವಾರು ಸಮಸ್ಯೆಗಳನ್ನು ಗಮನಿಸಿದಾಗ, ಮಹಾರಾಷ್ಟ್ರವು 1.9 ಲಕ್ಷ ಅರ್ಜಿಗಳನ್ನು ಬಾಕಿ ಉಳಿಸಿಕೊಂಡಿದೆ. ಇದರಲ್ಲಿ ಉತ್ತರ ಪ್ರದೇಶವು ಅತ್ಯಧಿಕ ಎನ್ನಲಾಗಿದೆ. ಹಿಮಾಚಲ, ಮಿಜೋರಾಮ್ ರಾಜ್ಯಗಳು 80% ತನಕ ಅರ್ಜಿಗಳನ್ನು ಬಾಕಿ ಉಳಿಸಿಕೊಂಡಿವೆ ಎಂದು ವರದಿಯಾಗಿದೆ.

ಇದಕ್ಕೆಲ್ಲ ಸ್ಥಳೀಯ ಕಾರಣ ಮಾತ್ತು ಸಮಸ್ಯೆಗಳನ್ನು ಹುಡುಕಿದಾಗ, ಮೆಡಿಕಲ್ ಬೋರ್ಡ್‌ನಿಂದ ತಡೆಹಿಡಿತ ಹಾಗೂ ಪ್ರಮಾಣೀಕರಣ ನಿಧಾನ, ಡಿಜಿಟಲ್ ವಿಭಾಗೀಕರಣದಲ್ಲಿ ವಿಳಂಬ, ಗ್ರಾಮೀಣ ಜನರಿಗೆ ಆನ್‌ಲೈನ್ ಅರ್ಜಿ ಕಷ್ಟವಾಗುತ್ತಿರುವುದು, ಜಾಗೃತಿಯ ಕೊರತೆ ಸೇರಿದಂತೆ ಇನ್ನೂ ಕೆಲವು ವಿಶೇಷ ಚೇತನರಿಗೆ ಯುಡಿಐಡಿ ಎಂಬ ವಿಶಿಷ್ಟ ಯೋಜನೆಯ ಪರಿಚಯವೇ ಇಲ್ಲದಿರುವುದು ಕೂಡ ಪೂರ್ಣ ಜಾರಿಗೆ ತೊಂದರೆಯಾಗುತ್ತಿದೆ ಎನ್ನಲಾಗಿದೆ.

ಇಷ್ಟಾಗಿಯೂ ಆಧಾರ್, ಮೆಡಿಕಲ್ ಪ್ರಮಾಣಪತ್ರ, ಪ್ರಮಾಣಪತ್ರಗಳ ದೃಢೀಕರಣ ಹಾಗೂ ನಕಲಿ, ಮೋಸ, ವಂಚನೆಗಳನ್ನು ತಡೆಯುವುದಕ್ಕಾಗಿ ನಡೆಸಲಾಗುತ್ತಿರುವ ಫ್ಯಾಕ್ಟ್ ಚೆಕ್ಕಿಂಗ್ ಕಾರಣದಿಂದಲೂ ವಿಳಂಬ ಎನ್ನಲಾಗಿದೆ. ಇಷ್ಟಾಗಿಯೂ ಯುಡಿಐಡಿ ಇದ್ದರೆ ಮಾತ್ರ ಸಿಗುವ ಪ್ರಮುಖ ಯೋಜನೆಗಳೆಂದು, ADIP ಯೋಜನೆ, (ಉಪಕರಣಗಳು), ವಿಕಲಚೇತನ ಪಿಂಚಣಿ, ಸ್ಕಾಲರ್‌ಶಿಪ್, ಜಾಬ್ ರಿಸರ್ವೇಷನ್, ರೈಲು/ಬಸ್ಸುಗಳಲ್ಲಿ ವಿನಾಯ್ತಿ ಮುಂತಾದವುಗಳನ್ನು ಪರಿಗಣಿಸಲಾಗಿದ್ದು, ವಿಶಿಷ್ಟ ಗುರುತಿನ ಸಂಖ್ಯೆ ಇಲ್ಲದ 60% ಜನರು ಈ ಎಲ್ಲಾ ಸೌಲಭ್ಯಗಳಿಂದ ಹೊರಗಿದ್ದಾರೆ ಎಂದು ಅಂದಾಜಿಸಲಾಗಿದೆ.

ಭಾರತದಲ್ಲಿ ವಿಶೇಷಚೇತನರ ಸಂಖ್ಯೆ ಸುಮಾರು 3 ಕೋಟಿಯಷ್ಟಿದ್ದು, ಇದರಲ್ಲಿ ಯುಡಿಐಡಿ ಸಂಖ್ಯೆ ಪಡೆದವರು 1 ಕೋಟಿಯಾಗಿದ್ದರೆ, ಇನ್ನೂ ಸಂಖ್ಯೆ ಹೊಂದಬೇಕಾದವರು ಸುಮಾರು 2 ಕೋಟಿ ಎಂದು ಹೇಳಲಾಗುತ್ತಿದೆ. ನಗರ ಮತ್ತು ಹಳ್ಳಿ ಎಂಬೆರಡು ವ್ಯವಸ್ಥೆಗಳು ಸತ್ಯದ ಭಿನ್ನ ಮುಖಗಳು. ಬೆಂಗಳೂರಿನಲ್ಲಿ ಒಂದು ಕ್ಲಿಕ್‌ನಲ್ಲಿ ಯುಡಿಐಡಿ ಅರ್ಜಿ ಹಾಕಬಹುದು ಅಥವಾ ಪಡೆಯಬಹುದು. ಆದರೆ ಯಾದಗಿರಿ ಭಾಗದ ಒಂದು ಹಳ್ಳಿಯ ವಿಶೇಷಚೇತನರ ಈ ಯೋಜನೆ ಪಡೆಯಲು ಒಂದು ದಿನದ ಪ್ರಯಾಣ ಮಾಡಬೇಕಿರುತ್ತದೆ. ಸರಿಯಾದ ಇಂಟರ್ನೆಟ್ ಇಲ್ಲ, ಸೂಕ್ತ ಮಾಹಿತಿ ಇಲ್ಲ.

ದಯೆ ಎಂಬುದು ವಿಶೇಷಚೇತನರಿಗೆ ದೊಡ್ಡ ಅಪಮಾನವಾಗಿಯೇ ಕಾಡುತ್ತದೆ. ನಾವು ವಿಶೇಷಚೇತನರನ್ನು ಹೇಗೆ ನೋಡುತ್ತೇವೆ? ಅಯ್ಯೋ ಪಾಪ, ಸಹಾಯ ಮಾಡೋಣ ಎಂಬಂತಹ ಕೆಲ ಮಾತುಗಳು ಸೌಮ್ಯವಾಗಿ ಕೇಳುತ್ತವೆ. ಆದರೆ ಇದು ಒಂದು ಅಪಮಾನವೆಂದೇ ಇವರೆಲ್ಲ ತಮ್ಮ ಭಾವನೆ ವ್ಯಕ್ತಪಡಿಸುತ್ತಾರೆ. ಯಾಕೆಂದರೆ ಅವರು ಕೇಳುವುದೇನು ಗೊತ್ತಾ? ನಮಗೆ ಸಮಾನ

ಅವಕಾಶ ಕೊಡಿ ಎಂದು. ಇಂತಹ ಭಾವನಾತ್ಮಕ ವಿಫಲತೆ ಸಂದರ್ಭದಲ್ಲಿ ಯುಡಿಐಡಿ ಅದನ್ನು ಕೊಡಲು ಪ್ರಯತ್ನಿಸುತ್ತದೆ.

ಒಂದು ಕೇಸ್ ಸ್ಟಡಿ ಎಂದು ತೆಗೆದುಕೊಂಡಾಗ, ಕಲಬುರಗಿ ಜಿಲ್ಲೆಯ ಒಬ್ಬ ಯುವತಿ. ಅವಳಿಗೆ ಜನ್ಮದಿಂದಲೇ ದೃಷ್ಟಿ ಸಮಸ್ಯೆ. ಅವಳು ಮೂರು ಬಾರಿ ಅರ್ಜಿ ಹಾಕಿದಳು. ಪ್ರತಿ ಬಾರಿಯೂ, ಡಾಕ್ಯುಮೆಂಟ್ ತಪ್ಪು, ಫೋಟೋ ತಪ್ಪು, ಸಿಗ್ನೇಚರ್ ತಪ್ಪು ಎಂದು ಆಕೆಯನ್ನು ಅಲೆದಾಡಿಸಿದ್ದೇ ಬಂತು. ಆಕೆಗೆ ವಿಶೇಷಚೇತನ ಯೋಜನೆಗೆ ಸೇರುವುದಕ್ಕೇ ಸಮಸ್ಯೆಗಳುಂಟಾದವು. ಬಹುತೇಕವಾಗಿ, ಕಾಗದದ ಕಾಡಿನಲ್ಲಿ ಕಳೆದುಹೋದ ಜೀವನವೆಂಬಂತಾಯಿತು.

ಒಂದು ದಿನ ಅವಳು, ನನ್ನ ಕಣ್ಣು ಕಾಣೋದಿಲ್ಲ ಅನ್ನೋದು ಸಾಕಾಗುವುದಿಲ್ಲವಾ? ಎಂದು ನೊಂದುಕೊಂಡು ಆವೇಶದಿಂದಲೇ ಪ್ರಶ್ನಿಸಿದಳು. ಯುಡಿಐಡಿ ಬಂದ ನಂತರ ಅವಳು ಕಾರ್ಡ್ ಪಡೆದಳು. ಸದ್ಯ ಅವಳ ಜೀವನ ಬದಲಾಗಿದೆಯಾ? ಎಂದರೆ, ಸ್ವಲ್ಪ ಎಂದು ಉತ್ತರಿಸಬಹುದಷ್ಟೆ. ಸಮಾಜ ಬದಲಾಗಿದೆಯಾ? ಎಂದರೆ, ಇಲ್ಲ ಎಂದೇ ಬೇಸರದಿಂದ ಹೇಳಬೇಕಾಗುತ್ತದೆ.

ಇಲ್ಲಿ ತಂತ್ರಜ್ಞಾನ ಎಂಬುದು ರಕ್ಷಕನಾ? ರಾಕ್ಷಸನಾ? ಎಂಬುದೇ ತಾಂತ್ರಿಕ ಕಾಲಘಟ್ಟದಲ್ಲಿ ಕಾಡುತ್ತಿರುವ ಬಹುದೊಡ್ಡ ಪ್ರಶ್ನೆಯಾಗಿದೆ. ಯುಡಿಐಡಿ ಎಂಬುದು ಒಂದು ಡಿಜಿಟಲ್ ವ್ಯವಸ್ಥೆ. ಇದರಿಂದ ವೇಗ ಹೆಚ್ಚಾಗಿದೆ, ಭ್ರಷ್ಟಾಚಾರ ಕಡಿಮೆಯಾಗಿದೆ. ಆದರೆ, ಸರ್ವರ್ ಸಮಸ್ಯೆಗಳು, ಡೇಟಾ ಸುರಕ್ಷತೆ ಪ್ರಶ್ನೆಗಳು, ಹ್ಯಾಕಿಂಗ್ ಭೀತಿ ಕಾಡುತ್ತಿವೆ. ಒಂದು ದಿನ ನಿಮ್ಮ ಡೇಟಾ ಲೀಕ್ ಆಯ್ತು ಅಂದ್ರೆ? ನಿಮ್ಮ ಗೌರವವೇ ಅಪಾಯದಲ್ಲಿರುತ್ತದೆ. ಭವಿಷ್ಯ, ಭಯ ಮತ್ತು ಭರವಸೆ ಎಂಬ ಪರಿಕಲ್ಪನೆಯಲ್ಲಿ ಇದನ್ನು ನೋಡಿದಾಗ, ಭವಿಷ್ಯದಲ್ಲಿ ಯುಡಿಐಡಿ ವ್ಯವಸ್ಥೆ ಏನಾಗಬಹುದು? ಎಐ ಆಧಾರಿತ ಸೇವೆಗಳು, ಸ್ವಯಂಚಾಲಿತ ಪಿಂಚಣಿ, ವೈಯಕ್ತಿಕ ನೆರವು ಮುಂತಾದವುಗಳು ಮುನ್ನೆಲೆಗೆ ಬರುತ್ತವೆ.

ಯುಡಿಐಡಿ ಒಂದು ಮಹತ್ವದ ಹೆಜ್ಜೆಯಾಗಿದ್ದು, ಒಂದು ಕಾರ್ಡ್ ಸಾಕಾಗುವುದಿಲ್ಲ. ಆದರೆ, ಸಮಾಜದ ಮನೋಭಾವ, ಆಡಳಿತದ ನಿಷ್ಠೆ, ಅರಿವು ಇವು ಬದಲಾಗದಿದ್ದರೆ, ಯುಡಿಐಡಿ ಒಂದು ಗುರುತು ಮಾತ್ರವಾಗಿ ಉಳಿಯಬಲ್ಲದು. ಒಂದು ದೇಶದ ಅಭಿವೃದ್ಧಿ ಅದರ ಜಿಡಿಪಿಯಲ್ಲಿ ಇಲ್ಲ, ಅದರ ಅತಿ ದುರ್ಬಲ ನಾಗರಿಕನ ಗೌರವದಲ್ಲಿದೆ.

ಯುಡಿಐಡಿ ಕೂಗೋದಿಲ್ಲ, ಆದರೆ ಅದು ಹೇಳುತ್ತದೆ. ನಾನು ಇದ್ದೇನೆ, ನನಗೆ ಹಕ್ಕುಗಳಿವೆ, ನಾನು ಸಮಾನ ಎಂದು ಧೈರ್ಯವಾಗಿ ಹೇಳುತ್ತದೆ. ಯೋಜನೆಯ ಪ್ರಯೋಜನಗಳು ಹಲವು. ಸೌಲಭ್ಯಗಳ ಸುಲಭ ಲಭ್ಯತೆ, ಪಿಂಚಣಿ, ವಿದ್ಯಾರ್ಥಿವೇತನ, ಉದ್ಯೋಗ ಯೋಜನೆಗಳು. ಸಮಯ ಉಳಿವು, ಒಂದೇ ಕಾರ್ಡ್ ಮೂಲಕ ಎಲ್ಲ ಸೇವೆಗಳು. ಇದರಿಂದಾಗಿ, ಡೇಟಾ ನಿಖರವಾಗಿರುವುದರಿಂದ ಫ್ರಾಡ್ ಕಡಿಮೆ.

ಗೌರವಯುತ ಜೀವನ, ವಿಶೇಷಚೇತನರಿಗೆ ಸಾಮಾಜಿಕ ಗೌರವ ಮತ್ತು ಸ್ವಾಭಿಮಾನ ಬಹಳ ಮುಖ್ಯವಾಗಿವೆ. ಯುಡಿಐಡಿ ಯೋಜನೆ ವಿವಿಧ ಅಂಗವೈಕಲ್ಯಗಳನ್ನು ಒಳಗೊಂಡಿದೆ. ದೃಷ್ಟಿದೋಷ, ಶ್ರವಣ ದೋಷ, ಶಾರೀರಿಕ ಅಂಗವೈಕಲ್ಯ, ಮಾನಸಿಕ ವೈಕಲ್ಯ, ಬುದ್ಧಿಮಾಂದ್ಯತೆ ಹಾಗೂ ಬಹು ಅಂಗವೈಕಲ್ಯವನ್ನೂ ಪರಿಗಣಿಸಲಾಗಿದೆ. ಯೋಜನೆಯು RPWD Act 2016 (Rights of Persons with Disabilities Act) ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಕಾಯ್ದೆ ವಿಶೇಷಚೇತನರಿಗೆ ಸಮಾನ ಹಕ್ಕುಗಳನ್ನು ಒದಗಿಸುತ್ತದೆ. ಈ ಯೋಜನೆ ಡಿಜಿಟಲ್ ಇಂಡಿಯಾ ಮಿಷನ್ ಭಾಗವಾಗಿದೆ. ಇದರ ಮೂಲಕ ಇ-ಗವರ್ನೆನ್ಸ್ ಸುಧಾರಣೆ, ಡಾಟಾ ಆಧಾರಿತ ಪಾಲಿಸಿಗಳು, ಸ್ಮಾರ್ಟ್ ಪಾಲಿಸಿಗಳನ್ನು ಒಳಗೊಂಡಿದ್ದು, ಸಮರ್ಪಕವಾಗಿ ಜಾರಿಗೆ ತರುವುದಾಗಿದೆ.

ಯುಡಿಐಡಿ ಯೋಜನೆಗೆ ಡಿಜಿಟಲ್ ಅಜ್ಞಾನ, ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ಅರಿವು ಕಡಿಮೆ ಇರುವುದು, ಇಂಟರ್ನೆಟ್ ಕೊರತೆ, ವೈದ್ಯಕೀಯ ಸಿಬ್ಬಂದಿ ಕೊರತೆಗಳಂತಹ ಕೆಲವು ಸವಾಲುಗಳಿವೆ. ಇವುಗಳಿಗೆ ಪರಿಹಾರಗಳನ್ನು ಅರಿವು ಅಭಿಯಾನ, ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮಗಳು, ಮೊಬೈಲ್ ಸೇವೆಗಳು, ಗ್ರಾಮೀಣ ಭಾಗದ ಮನೆಬಾಗಿಲಿಗೆ ವೈದ್ಯಕೀಯ ಕ್ಯಾಂಪುಗಳ ಮೂಲಕ ಮಾಹಿತಿ, ಜಾಗೃತಿ ಮೂಡಿಸಬಹುದಾಗಿದೆ.

ಈ ಒಂದು ವಿಶಿಷ್ಟ ಯೋಜನೆ ಕುರಿತಂತೆ ಕರ್ನಾಟಕ ರಾಜ್ಯದ ಒಟ್ಟು ಸ್ಥಿತಿ ಗಮನಿಸಿದಾಗ, ಕರ್ನಾಟಕದಲ್ಲಿ ಯುಡಿಐಡಿ ಕವರೇಜ್ 45-50% (CAG) ರಷ್ಟು ಮಾತ್ರವೇ ಆಗಿದೆ ಎಂಬ ವರದಿಯಾಗಿದೆ. ಅಂದಾಜು ವಿಶೇಷಚೇತನರ 13-15 ಲಕ್ಷಗಳಷ್ಟಿದ್ದಾರೆ ಎನ್ನಲಾಗಿದೆ. ಇದರಲ್ಲಿ ಯುಡಿಐಡಿ ಪಡೆದವರು 6-7 ಲಕ್ಷಗಳಷ್ಟಿದ್ದರೆ, ಇನ್ನೂ 6-8 ಲಕ್ಷ ಜನರು ಬಾಕಿ ಉಳಿದಿದ್ದಾರೆ ಎಂದು ವರದಿಯಾಗಿದೆ. ರಾಜ್ಯದಲ್ಲಿ ಇನ್ನೂ ಅರ್ಧ ಜನರಿಗೆ ಯುಡಿಐಡಿ ಸಿಕ್ಕಿಲ್ಲ ಎಂಬುದು ಸ್ಪಷ್ಟ ಮಾಹಿತಿ ಎನ್ನಬಹುದು. ಇದನ್ನು 2025ಕ್ಕೆ ಹೊಂದಿಕೊಂಡಂತೆ ಜಿಲ್ಲಾವಾರು ಗಮನಿಸಿದಾಗ, ಅತಿಹೆಚ್ಚು ಜಾಗೃತಿ, ಸೌಕರ್ಯ ಇರುವುದು ಉಡುಪಿ ಜಿಲ್ಲೆ ಹಾಗೂ ಬೆಂಗಳೂರು ನಗರದಲ್ಲಿ ಎಂದು ವರದಿ. ಮೈಸೂರು ಉತ್ತಮ ಪ್ರಗತಿ ಹೊಂದಿದ್ದರೆ, ಬೆಳಗಾವಿ, ತುಮಕೂರು ಉತ್ತಮ ಪ್ರಗತಿಯಲ್ಲಿವೆ. ದಕ್ಷಿಣ ಕನ್ನಡ ಜಿಲ್ಲೆಯು ಉತ್ತಮ ಪ್ರಗತಿಯತ್ತ ಸಾಗುತ್ತಿದೆ.

ಮಧ್ಯಮ ಪ್ರದರ್ಶನ ಜಿಲ್ಲೆಗಳೆಂದು ಧಾರವಾಡ, ಶಿವಮೊಗ್ಗ, ಹಾಸನ, ಕೊಪ್ಪಳ, ಬಳ್ಳಾರಿ ಜಿಲ್ಲೆಗಳನ್ನು ಪರಿಗಣಿಸಿದ್ದರೆ, ಕಳಪೆ ಪ್ರಗತಿ ಹೊಂದಿರುವ ಜಿಲ್ಲೆಗಳಾಗಿ ಯಾದಗಿರಿ, ರಾಯಚೂರು, ಕಲಬುರಗಿ, ಬೀದರ, ಚಿಕ್ಕಬಳ್ಳಾಪುರಗಳನ್ನು ಗುರುತಿಸಲಾಗಿದೆ. ಇದೆಲ್ಲವನ್ನು ವಿಮರ್ಶಿಸಿದಾಗ, ನಮಗೆ ದೊರೆತ ಮಾಹಿತಿ ಪ್ರಕಾರ, ಇನ್ನೂ ಮಾಡಬೇಕಾದ ಕೆಲಸಗಳು ಬಹಳಷ್ಟಿದ್ದು, ಅವುಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಯುಡಿಐಡಿ ಕ್ಯಾಂಪುಗಳು, ಗ್ರಾಮ ಮಟ್ಟದಲ್ಲಿ ಮನೆ ಮನೆಗೆ ವಿಶೇಷಚೇತನರನ್ನು ಗುರುತಿಸುವುದು, PHC ಮಟ್ಟದಲ್ಲಿ ಪ್ರಮಾಣೀಕರಿಸುವುದು, ಮೊಬೈಲ್ ಮೆಡಿಕಲ್ ವ್ಯವಸ್ಥೆ ಮಾಡಿಕೊಳ್ಳುವುದು, ಪಂಚಾಯ್ತಿ ಮಟ್ಟದಲ್ಲಿ ಜಾಗೃತಿ ಮೂಡಿಸುವುದು ಇತ್ಯಾದಿ ಉಳಿದಿರುವ ಕೆಲಸಗಳೆನ್ನಬಹುದು.

ವಿಶೇಷಚೇತನ ವಿಶಿಷ್ಟ ಗುರುತಿನ ಸಂಖ್ಯೆ ಯೋಜನೆಯಿಂದ ಲಕ್ಷಾಂತರ ಜನರಿಗೆ ಪ್ರಯೋಜನವಾಗಲಿದೆ. ಸರ್ಕಾರದ ಯೋಜನೆಗಳ ಪರಿಣಾಮಕಾರಿತ್ವ ಹೆಚ್ಚಳವಾಗುತ್ತದೆ. ಡೇಟಾ ಆಧಾರಿತ ನೀತಿ ರೂಪಣೆಯಲ್ಲಿ ದತ್ತಾಂಶ ಸಂಗ್ರಹವಾಗುತ್ತದೆ. ಸುಧಾರಣೆಗಳಾಗುತ್ತವೆ. ಕರ್ನಾಟಕದಲ್ಲಿ ಯುಡಿಐಡಿ ಯೋಜನೆ ಉತ್ತಮವಾಗಿ ಅನುಷ್ಠಾನಗೊಂಡಿದೆ. ಜಿಲ್ಲಾಸ್ತರದಲ್ಲಿ ಸೇವೆಗಳು, ಎನ್‌ಜಿಓಗಳ ಮೂಲಕ ಸಹಾಯ, ಗ್ರಾಮ ಮಟ್ಟದ ಜಾಗೃತಿಗಳ ಮೂಲಕ ಯೋಜನೆ ಉತ್ತಮ ಫಲಿತಾಂಶ ಕಂಡುಕೊಳ್ಳುತ್ತಿದೆ. ಈ ಯೋಜನೆ ಭವಿಷ್ಯದಲ್ಲಿ, ಎಐ ಆಧಾರಿತ ಸೇವೆಗಳು, ಆರೋಗ್ಯ ಡೇಟಾ ಇಂಟಿಗ್ರೇಷನ್, ಸ್ಮಾರ್ಟ್ ಕಾರ್ಡ್ ವ್ಯವಸ್ಥೆಯನ್ನು ಸರಿಯಾದ ಮಾರ್ಗದ ಮೂಲಕ ಜಾರಿಗೆ ಸಹ ತರಬಹುದಾಗಿದೆ.

ಯುಡಿಐಡಿ ಒಂದು ಉತ್ತಮ ಯೋಜನೆಯಾದರೂ, ಇನ್ನಷ್ಟು ಪರಿಣಾಮಕಾರಿ ಮಾಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿಸಬೇಕು ಮತ್ತು ಪಾರದರ್ಶಕತೆ ಹೆಚ್ಚಿಸಬೇಕು ಎಂಬುದು ಎಲ್ಲ ಯೋಜನೆಗಳು ಬೇಡುವಂತೆ ಇದೂ ಸಹ ಉತ್ತಮವನ್ನು ಬಯಸುತ್ತದೆ. ಅಡೆತಡೆ, ವಿಕಲ್ಪಗಳೇನೇ ಇರಲಿ. ಯುಡಿಐಡಿ ಯೋಜನೆ ಭಾರತದಲ್ಲಿ ವಿಶೇಷಚೇತನರ ಬದುಕಿನಲ್ಲಿ ಮಹತ್ತರ ಬದಲಾವಣೆ ತರುತ್ತಿದೆ. ಇದು ಕೇವಲ ಒಂದು ಗುರುತು ಪತ್ರವಲ್ಲ, ಇದು ಒಂದು ಸಮಾನತೆ, ಗೌರವ ಮತ್ತು ಹಕ್ಕುಗಳ ಪ್ರತೀಕವಾಗಿದೆ.

ಭಾರತವು ಒಂದು ಸಮಾನತೆಯ ಸಮಾಜವಾಗಲು, ಯುಡಿಐಡಿಯಂತಹ ಯೋಜನೆಗಳು ಅಗತ್ಯ. ಒಬ್ಬ ವಿಶೇಷಚೇತನರ ವ್ಯಕ್ತಿಗೆ ಸಹಾಯ ಮಾಡುವುದು ಒಂದು ಸೇವೆಯಲ್ಲ - ಅದು ಒಂದು ಸಾಮಾಜಿಕ ಹೊಣೆಗಾರಿಕೆ. ಯುಡಿಐಡಿ ಯೋಜನೆ ಈ ದಿಕ್ಕಿನಲ್ಲಿ ಒಂದು ಮಹತ್ವದ ಹೆಜ್ಜೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 245

ಸಮಾಚಾರ ಸಣ್ಣದಲ್ಲ

ಬ್ರಿಟನ್ ಪ್ರಜೆಗಳಿಗೆ ಸರಕಾರದ ಸೂಚನೆ

ಲಂಡನ್: ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು, ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಯುದ್ಧ 3ನೇ ವಾರ ಮುಗಿಯಲು ಬಂದರೂ ಕೊನೆಗೊಳ್ಳದೇ ಇರುವುದು, ಇನ್ನೊಂದೆಡೆ ಉಕ್ರೇನ್-ರಷ್ಯಾ ನಡುವಿನ ಸೇನಾ ಸಂಘರ್ಷ 3 ವರ್ಷಗಳೇ ಕಳೆದರೂ ನಿಲ್ಲದೇ ಇರುವ ಹಿನ್ನೆಲೆಯಲ್ಲಿ ಯುನೈಟೆಡ್ ಕಿಂಗ್ಡಂ ವಿಶ್ವದ ವಿವಿಧೆಡೆ ಒಟ್ಟು 14 ದೇಶಗಳನ್ನು ತನ್ನ ಪ್ರಜೆಗಳ ಪಾಲಿಗೆ ಅಸುರಕ್ಷಿತ ಎಂದು ಪಟ್ಟಿ ಮಾಡಿದೆ. ಅಫ್ಘಾನಿಸ್ತಾನ, ಬೆಲಾರಸ್, ಬುರ್ಕಿನಾ ಫಾಸೊ, ಹೈತಿ, ಇರಾನ್, ಇರಾಕ್, ಇಸ್ರೇಲ್, ಮಾಲಿ, ನೈಗರ್, ಪ್ಯಾಲೆಸ್ತೀನ್, ರಷ್ಯಾ, ದಕ್ಷಿಣ ಸುಡಾನ್, ಸಿರಿಯಾ ಮತ್ತು ಯೆಮೆನ್ ದೇಶಗಳಲ್ಲಿ ರಾಜಕೀಯ ಅಸ್ಥಿರತೆ ಇದೆ, ಸಂಘರ್ಷವಿದೆ, ಆ ಪ್ರದೇಶದಲ್ಲಿನ ಪರಿಸ್ಥಿತಿ ವೇಗವಾಗಿ ಬದಲಾಗುತ್ತಿದೆ, ಮುಂದೇ ನಾಗಬಹುದು ಎಂದು ಊಹಿಸಲೂ ಆಗದ ಪರಿಸ್ಥಿತಿ ಇದೆ. ಹಾಗಾಗಿ ಈ ದೇಶಗಳಿಗೆ ಬ್ರಿಟನ್ ಪ್ರಜೆಗಳು ಸದ್ಯಕ್ಕೆ ಪ್ರಯಾಣಿಸಬಾರದು. ಒಂದೊಮ್ಮೆ ಪ್ರಸ್ತುತ ಈ 14 ದೇಶಗಳಲ್ಲಿ ಯಾವುದರಲ್ಲಾದರೂ ಒಂದರಲ್ಲಿ ಉಳಿದುಕೊಂಡಿದ್ದರೆ ತಕ್ಷಣವೇ ಅಲ್ಲಿಂದ ಹೊರಡಬೇಕು ಎಂದು ಬ್ರಿಟನ್ ಸರಕಾರ ತನ್ನ ಪ್ರಜೆಗಳಿಗೆ ಸೂಚನೆ ನೀಡಿದೆ.

ಯುಎಇ ಅಧ್ಯಕ್ಷರ ಜತೆ ಮೋದಿ ಮಾತುಕತೆ

ದೆಹಲಿ: ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರಿಗೆ ದೂರವಾಣಿ ಕರೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಪಶ್ಚಿಮ ಏಷ್ಯಾದಲ್ಲಿನ ಪ್ರಸಕ್ತ ಪರಿಸ್ಥಿತಿ ಮತ್ತು ಹೊರ್ಮುಜ್ ಜಲಸಂಧಿ ಬಿಕ್ಕಟ್ಟು ಕುರಿತು ಚರ್ಚಿಸಿದರು. ಯುಎಇ ಅಧ್ಯಕ್ಷರಾದ ಸೋದರ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಜತೆ ದೂರವಾಣಿಯಲ್ಲಿ ಮಾತನಾಡಿದೆ. ಮುಂಚಿತವಾಗಿಯೇ ಈದ್ ಶುಭಾಶಯ ತಿಳಿಸಿದೆ. ಪಶ್ಚಿಮ ಏಷ್ಯಾ ಪರಿಸ್ಥಿತಿ ಬಗ್ಗೆ ಚರ್ಚಿಸಿದ್ದೇವೆ. ಯುಎಇ ಮೂಲಸೌಕರ್ಯಗಳ ಮೇಲಿನ ದಾಳಿಗಳ ಬಗ್ಗೆ ತೀವ್ರ ಖಂಡನೆ ವ್ಯಕ್ತಪಡಿಸಿದೆ ಎಂದು 'ಎಕ್ಸ್'ನಲ್ಲಿ ಪ್ರಧಾನಿ ಮೋದಿ ಬರೆದಿದ್ದಾರೆ. ಹಾರ್ಮುಜ್ ಜಲಸಂಧಿಯ ಮುಕ್ತ ಸಂಚಾರ ಖಾತರಿಯ ಪ್ರಾಮುಖ್ಯತೆಯನ್ನು ಒಪ್ಪಿಕೊಂಡಿದ್ದೇವೆ. ನಿರ್ಣಾಯಕ ಸಮುದ್ರ ಮಾರ್ಗಗಳನ್ನು ರಕ್ಷಿಸುವಲ್ಲಿ ದೆಹಲಿ ಮತ್ತು ಅಬುಧಾಬಿ ನಡುವೆ ಒಮ್ಮತದ ಅಭಿಪ್ರಾಯವಿದೆ. ಯುದ್ಧದ ತೀವ್ರತೆ ತಗ್ಗಿಸಲು, ಪ್ರಾದೇಶಿಕ ಸ್ಥಿರತೆ ಮರುಸ್ಥಾಪಿಸಲು ಒಟ್ಟಾಗಿ ಕೆಲಸ ಮಾಡಲು ಬದ್ಧರಾಗಿದ್ದೇವೆ ಎಂದು ಪ್ರಧಾನಿ ಹೇಳಿದ್ದಾರೆ.

ಪ್ರಜ್ವಲ್ ಸೆಕ್ಸ್ ವಿಡಿಯೋ ಸೋರಿಕೆ: 39 ಜನರ ವಿರುದ್ಧ ಚಾರ್ಜ್ ಶೀಟ್

← ಮೊದಲಪುಟದಿಂದ

2024ರ ಲೋಕಸಭಾ ಚುನಾವಣೆಯ ಹೊಸ್ತಿಲಿನಲ್ಲಿ ಹಾಸನ ಜಿಲ್ಲೆಯಲ್ಲಿ ನೂರಾರು ಪೆನ್‌ಡ್ರೈವ್‌ಗಳು ಪತ್ತೆಯಾಗಿದ್ದವು. ಈ ಪೆನ್‌ಡ್ರೈವ್‌ಗಳಲ್ಲಿ ಮಾಜಿ ಸಂಸದ ಹಾಗೂ ಜೆಡಿಎಸ್ ಅಭ್ಯರ್ಥಿಯಾಗಿದ್ದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ ನೂರಾರು ಅಶ್ಲೀಲ ವಿಡಿಯೋಗಳಿದ್ದವು. ಈ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಹಂಚಿಕೆಯಾಗಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದವು.

ಈ ಬಗ್ಗೆ ಜೆಡಿಎಸ್ ಏಜೆಂಟ್ ಆಗಿದ್ದ ವಕೀಲ ಪೂರ್ಣಚಂದ್ರ ನೀಡಿದ ದೂರಿನ ಆಧಾರದ ಮೇಲೆ ತನಿಖೆ ನಡೆಸಲಾಗಿತ್ತು. ನವೀನ್ ಗೌಡ ಎ1, ಕಾರ್ತಿಕ್ ಎ2 ಪ್ರಕರಣದ ಪ್ರಮುಖ ಆರೋಪಿಗಳು. ಪ್ರಜ್ವಲ್ ರೇವಣ್ಣ ಅವರ ಮಾಜಿ ಕಾರು ಚಾಲಕ ಕಾರ್ತಿಕ್ ವೀಡಿಯೋಗಳನ್ನು ಸಂಗ್ರಹಿಸಿ ಹೊರಹಾಕಿದ ಪ್ರಮುಖ ಸೂತ್ರಧಾರಿ ಎಂದು ಉಲ್ಲೇಖಿಸಲಾಗಿದೆ. ಎ3 ಬಿ.ಸಿ.ಚೇತನ್, ಎ4 ವೈ.ಎಸ್. ಚೇತನ್, ಐದನೇ ಆರೋಪಿ ಲಿಖಿತ್ ಗೌಡ ವೀಡಿಯೋಗಳನ್ನು ವೈರಲ್ ಮಾಡಿದ್ದರು ಎಂದು ದೂರಲಾಗಿದೆ.

277 ಸಾಕ್ಷಿಗಳ ಹೇಳಿಕೆ ದಾಖಲು: ತನಿಖಾ ತಂಡ ಈ ಪ್ರಕರಣವನ್ನು ವೈಜ್ಞಾನಿಕವಾಗಿ ತನಿಖೆ ಮಾಡಿದೆ. 277 ಸಾಕ್ಷಿಗಳ ಹೇಳಿಕೆ ದಾಖಲಿಸಲಾಗಿದೆ. ಇದರಲ್ಲಿ ಸಂತ್ರಸ್ತ ಮಹಿಳೆಯರು, ಪೆನ್‌ಡ್ರೈವ್ ಮಾರಾಟ ಮಾಡಿದ ಅಂಗಡಿ ಮಾಲೀಕ ಮತ್ತು ವಿಡಿಯೋಗಳನ್ನು ಮೊದಲು ನೋಡಿದ ವ್ಯಕ್ತಿಗಳು ಸೇರಿದ್ದಾರೆ. ಆರೋಪಿಗಳ ಮೊಬೈಲ್ ಫೋನ್‌ಗಳು ಮತ್ತು ಪೆನ್‌ಡ್ರೈವ್‌ಗಳನ್ನು ಹೈದರಾಬಾದ್‌ನ ಫೊರೆನ್ಸಿಕ್ ಸೈನ್ಸ್ ಲ್ಯಾಬ್‌ಗೆ ಕಳುಹಿಸಲಾಗಿತ್ತು. ಲ್ಯಾಬ್ ವರದಿಗಳು ಆರೋಪಿಗಳ ವಿರುದ್ಧ ತಾಂತ್ರಿಕ ಪುರಾವೆ ಒದಗಿಸಿವೆ. ವೀಡಿಯೋಗಳು ಯಾವ ಮೊಬೈಲ್‌ನಿಂದ ಸೃಷ್ಟಿಯಾದವು ಮತ್ತು ಯಾವ ಐಪಿ ವಿಳಾಸದ ಮೂಲಕ ಹಂಚಿಕೆಯಾದವು ಎಂಬುದನ್ನು ಎಸ್‌ಐಟಿ ಪತ್ತೆಹಚ್ಚಿದೆ.

{ ಡೊನಾಲ್ಡ್ ಟ್ರಂಪ್ } ಅಮೆರಿಕ ಅಧ್ಯಕ್ಷ

ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ಕೇಂದ್ರ ಮುಖ್ಯಸ್ಥ ಜೋಸೆಫ್ ಕೆಂಟ್ ರಾಜೀನಾಮೆ ನೀಡಿದ್ದು ಒಳ್ಳೆಯದಾಯಿತು. ಕೆಂಟ್ ಒಳ್ಳೆ ವ್ಯಕ್ತಿ. ಆದರೆ ಭದ್ರತಾ ವಿಚಾರದಲ್ಲಿ ದುರ್ಬಲ. ಇರಾನ್‌ನಿಂದ ನಮಗೆ ಭಯವಿಲ್ಲ. ಆದರೆ, ಬೇರೆ ದೇಶಗಳಿಗೆ ಇರಾನ್ ಬೆದರಿಕೆಯಾಗಿತ್ತು. ಇರಾನ್ ವಿರುದ್ಧ ಯುದ್ಧಕ್ಕೆ ಅಮೆರಿಕವನ್ನು ಇಸ್ರೇಲ್ ಒತ್ತಾಯಿಸಿತು ಎಂಬುದು ಸುಳ್ಳು.

ಅಕ್ರಮ ವಲಸಿಗರೇ ನಿಮ್ಮ ದೇಶಕ್ಕೆ ಹೊರಡಿ। ಭಾರತ, ಚೀನಾ, ಕೊಲಂಬಿಯ ಅಕ್ರಮ ವಲಸಿಗರಿಗೆ ಟ್ರಂಪ್ ನಗದು-ಉಚಿತ ವಿಮಾನ ಟಿಕೆಟ್ ಆಮಿಷ

2600 ಡಾಲರ್ ಹಿಡಿ, ತಕ್ಷಣ ಅಮೆರಿಕ ಬಿಡಿ

ವಾಷಿಂಗ್ಟನ್: ಭಾರತೀಯರು ಸೇರಿದಂತೆ ವಿವಿಧ ದೇಶಗಳ ಅಕ್ರಮ ವಲಸಿಗರನ್ನು ಅಮೆರಿಕದಿಂದ ಹೊರದೂಡಲು ಡೊನಾಲ್ಡ್ ಟ್ರಂಪ್ ಸರಕಾರ ಈಗ ಮತ್ತೊಂದು ಪ್ರಯತ್ನ ಆರಂಭಿಸಿದೆ. 'ಉಚಿತ ವಿಮಾನದ ಟಿಕೆಟ್ ಮತ್ತು ಡಾಲರ್ ಕ್ಯಾಷ್' ಆಮಿಷವನ್ನೂ ಮುಂದಿಟ್ಟಿದೆ.

ಹೇಗಾದರೂ ಮಾಡಿ ಅಮೆರಿಕ ದೇಶವನ್ನು ಸೇರಿಕೊಳ್ಳಬೇಕು ಎಂಬುದು ಭಾರತೀಯರು ಸೇರಿದಂತೆ ಬಹುತೇಕ ದೇಶಗಳ ಲಕ್ಷಾಂತರ ಜನರ ಆಸೆ-ಕನಸು. ಒಮ್ಮೆ ಅಮೆರಿಕ ಸೇರಿಕೊಂಡು ಬಿಟ್ಟರೆ ಸ್ವರ್ಗದಂತಹ ಬದುಕು ಸಿಗುತ್ತದೆ ಎಂಬ ಭ್ರಮೆ. ಹೀಗೆ ಕಳ್ಳಮಾರ್ಗದಲ್ಲಿ ಅಥವಾ ನಕಲಿ ದಾಖಲೆಗಳನ್ನು ಹಿಡಿ, ಅಥವಾ 'ಡಂಕಿ' ಮಾರ್ಗದಲ್ಲಿ ಅಥವಾ ಏನೇನೋ ಮಾಡಿ ಅಮೆರಿಕಕ್ಕೆ ನುಸುಳಿಕೊಂಡವರ ದೊಡ್ಡ ಸಂಖ್ಯೆಯೇ ಇದೆ. ಅದರೆ, ಇವರೀಗ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತಕ್ಕೆ ದೊಡ್ಡ ತಲೆನೋವಾಗಿದ್ದಾರೆ.

ಈ ಅಕ್ರಮ ವಲಸಿಗರನ್ನು ಅಮೆರಿಕದಿಂದ ಹೊರಹಾಕುವ ಕಾರ್ಯಾಚರಣೆಯನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ 2025ರ ಜ.20ರಂದು ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಶುರು ಮಾಡಿಸಿದ್ದರು. ಲಕ್ಷಾಂತರ



ಅಕ್ರಮ ವಲಸಿಗರನ್ನು ಅವರವರ ದೇಶಕ್ಕೆ ಅಮೆರಿಕ ವಾಯುಪಡೆ ವಿಮಾನಗಳಿಗೆ ತುಂಬಿ ಕಳುಹಿಸಿಕೊಟ್ಟಿದ್ದರು. ಹಾಗಿದ್ದೂ ಅಮೆರಿಕದಲ್ಲಿ ಇನ್ನೂ ಅಕ್ರಮ ವಲಸಿಗರ ದೊಡ್ಡ ಸಂಖ್ಯೆಯೇ ಉಳಿದುಕೊಂಡಿದೆ. ಅವರನ್ನು ಹೊರಹಾಕುವ ಪ್ರಯತ್ನವನ್ನು ಟ್ರಂಪ್ ಸರಕಾರ ಮಾಡುತ್ತಲೇ ಇದೆ.

ಈಗ ಹೊಸದಾಗಿ ಅಮೆರಿಕ ಸರಕಾರ 'ಸಾವಿರಾರು ಡಾಲರ್ ಹಣ ಕೊಡುತ್ತೇವೆ. ತೆಗೆದುಕೊಂಡು ಜಾಗ ಖಾಲಿ ಮಾಡಿ' ಎಂಬ ಜಾಹೀರಾತು ನೀಡಿ ಅಕ್ರಮ ವಲಸಿಗರನ್ನು ಹೊರಗಟ್ಟುವ ಕಾರ್ಯಕ್ಕೆ ಮುಂದಾಗಿದೆ. ಅದರದೇ ಭಾಗವಾಗಿ, ಭಾರತ, ಚೀನಾ, ಕೊಲಂಬಿಯದಿಂದ ಅಕ್ರಮವಾಗಿ ಅಮೆರಿಕಕ್ಕೆ ನುಸುಳಿಕೊಂಡವರನ್ನೂ ಅವರಾಗಿಯೇ ದೇಶ ತೊರೆಯುವಂತೆ ಮಾಡಲು ಟ್ರಂಪ್ ಸರಕಾರ 'ದೊಡ್ಡ ಆಮಿಷ' ಒಡ್ಡಲಾರಂಭಿಸಿದೆ.

'ಅಮೆರಿಕದ ಹೋಮ್ ಲ್ಯಾಂಡ್ ಸೆಕ್ಯುರಿಟಿ ಡಿಪಾರ್ಟ್‌ಮೆಂಟ್' ಅಕ್ರಮ ವಲಸಿಗರ ಗಮನ ಸೆಳೆದು ಅವರಾಗಿಯೇ ದೇಶ ತೊರೆಯುವಂತೆ ಮಾಡಲು 'ಉಚಿತಗಳ ಆಮಿಷ' ಒಡ್ಡಿದೆ.

ಅದೇ ಕಾರಣವಾಗಿ ತಾಜ್ ಮಹಲ್‌ನ ದೊಡ್ಡ ಚಿತ್ರವನ್ನು ಬಳಸಿಕೊಂಡು ಗಮನ ಸೆಳೆವ ಭಿತ್ತಿಪತ್ರವನ್ನು ವಿನ್ಯಾಸಗೊಳಿಸಿದೆ. ಜತೆಗೆ ಕೊಲಂಬಿಯಾ, ಚೀನಾ ದೇಶದ ಅಕ್ರಮ ವಲಸಿಗರನ್ನೂ ಆಕರ್ಷಿಸಲು ಅವರ ದೇಶಗಳ ಜನಪ್ರಿಯ ಲಾಂಛನಗಳನ್ನು ಮುದ್ರಿಸಿ ಜಾಹೀರಾತು ಪ್ರಕಟಿಸಿದೆ.

ಪ್ರಾಜೆಕ್ಟ್ ಹೋಂ ಕಮಿಂಗ್

ಅಮೆರಿಕದ 'ಡಿಪಾರ್ಟ್‌ಮೆಂಟ್ ಆಫ್ ಹೋಮ್ ಲ್ಯಾಂಡ್ ಸೆಕ್ಯುರಿಟಿ'(ಡಿಎಚ್‌ಎಸ್) ಭಾರತದ ಪ್ರಮುಖ ಪ್ರೇಮ ಸ್ಮಾರಕವಾದ 'ತಾಜ್ ಮಹಲ್' ಚಿತ್ರವನ್ನು ಮುದ್ರಿಸಿದ ಭಿತ್ತಿಪತ್ರದಲ್ಲಿ ತಾಜ್ ಚಿತ್ರದಡಿ 'ಸೆಲ್ಫ್ ಡಿಪೋರ್ಟ್ ಥ್ರೂ ದಿ ಸಿಬಿಪಿ ಹೋಮ್ ಆಪ್' ಎಂದು ಕೆಂಪು ಅಕ್ಷರಗಳಲ್ಲಿ ಮುದ್ರಿಸಿ ಅಕ್ರಮ ವಲಸಿಗ ಭಾರತೀಯರ ಗಮನ ಸೆಳೆಯಲೆತ್ನಿಸಿದೆ. 'ಉಚಿತ ವಿಮಾನದ ಟಿಕೆಟ್ ಮತ್ತು 2600 ಡಾಲರ್' ರೂಪಿಸಿ ಜಾಹೀರಾತು ರೀತಿಯಲ್ಲಿ ಮಾಧ್ಯಮಗಳಲ್ಲಿ ಪ್ರಕಟವಾಗುವಂತೆ ಮಾಡಿದೆ. ಅಕ್ರಮ ವಲಸಿಗರನ್ನು ದೇಶ ಬಿಟ್ಟು ಓಡಿಸುವ ಈ ಕಾರ್ಯಕ್ರಮಕ್ಕೆ 'ಪ್ರಾಜೆಕ್ಟ್ ಹೋಂ ಕಮಿಂಗ್' ಎಂಬ ಸೊಗಸಾದ ಹೆಸರನ್ನೂ ಕೊಡಲಾಗಿದೆ. ಇದು 2025ರ ಮೇ ತಿಂಗಳಲ್ಲೇ ಶುರುವಾಗಿದ್ದು, ಈಗ ಹೊಸದಾಗಿ '2600 ಡಾಲರ್' ಬೋನಸ್ ಕೊಡುಗೆ ಜತೆಗೆ ಚಾಲ್ತಿಗೆ ಬಂದಿದೆ.ಕಸ್ಟಮ್ಸ್ ಅಂಡ್ ಬಾರ್ಡರ್ ಪ್ರೊಟೆಕ್ಷನ್(ಸಿಬಿಪಿ) ಆಪ್ ಬಳಸಿಕೊಂಡು ಅಕ್ರಮ ವಲಸಿಗರು ನೋಂದಣಿ ಮಾಡಿಕೊಂಡರೆ ಅವರಿಗೆ ವಿಮಾನ ಪ್ರಯಾಣದ ಟಿಕೆಟ್ ಉಚಿತ, ಜತೆಗೆ 2600 ಡಾಲರ್ ನಗದು ಸಿಗಲಿದೆ ಎಂದೂ ಡಿಎಚ್‌ಎಸ್ ಹೇಳಿದೆ.ವಿಮಾನದ ಉಚಿತ ಟಿಕೆಟ್ ಮತ್ತು ನಗದು ಹಣದ ಕೊಡುಗೆ ಸೇರಿ ಒಬ್ಬ ಅಕ್ರಮ ವಲಸಿಗನನ್ನು ದೇಶದಿಂದ ಹೊರಹಾಕಲು ಅಮೆರಿಕ ಸರಕಾರ ಒಟ್ಟು 18,245 ಡಾಲರ್ ಹಣ ವೆಚ್ಚ ಮಾಡುತ್ತಿರುವುದಾಗಿ 'ಡಿಎಚ್‌ಎಸ್' ಹೇಳಿಕೊಂಡಿದೆ.

ಅಮೆರಿಕದ 'ಡಿಪಾರ್ಟ್‌ಮೆಂಟ್ ಆಫ್ ಹೋಮ್ ಲ್ಯಾಂಡ್ ಸೆಕ್ಯುರಿಟಿ' ಅಂಕಿ ಅಂಶಗಳ ಪ್ರಕಾರ, ಅಮೆರಿಕದಲ್ಲಿದ್ದ 22 ಲಕ್ಷಕ್ಕೂ ಅಧಿಕ ಮಂದಿ ಅಕ್ರಮ ವಲಸಿಗರು 2025ರ ಜ.20ರ ಬಳಿಕ ಈ 'ಕಸ್ಟಮ್ಸ್ ಅಂಡ್ ಬಾರ್ಡರ್ ಪ್ರೊಟೆಕ್ಷನ್'(ಸಿಬಿಪಿ) ಆಪ್ ಬಳಸಿಕೊಂಡು ತಮ್ಮ ದೇಶವನ್ನು ಸೇರಿಕೊಂಡಿದ್ದಾರೆ. ಈಗಲೂ ಇದೇ ಆಪ್ ಬಳಸಿಕೊಂಡು ಅಕ್ರಮ ವಲಸಿಗರು ನಿಮ್ಮ ದೇಶವನ್ನು ಸೇರಿಕೊಳ್ಳಿ. ಅಮೆರಿಕದಲ್ಲಿ ಬಂಧನಕ್ಕೊಳಗಾಗಿ ಜೈಲು ಶಿಕ್ಷೆಗೆ ಒಳಗಾಗುವುದರಿಂದ ತಪ್ಪಿಸಿಕೊಳ್ಳಿ ಎಂದೂ ಮನವರಿಕೆ ಮಾಡಿಕೊಡಲೆತ್ನಿಸಿದೆ.

ನೈಋತ್ಯ ದೆಹಲಿ ಪಾಲಂ ಪ್ರದೇಶದ 4 ಮಹಡಿ ಕಟ್ಟಡ ಸುಟ್ಟು ಕರಕಲು

ಬೆಂಕಿ: 3 ಮಕ್ಕಳು ಸೇರಿ 9 ಜನ ದುರ್ಮರಣ

ದೆಹಲಿ: ದೇಶದ ರಾಜಧಾನಿ ನಗರ ದೆಹಲಿಯಲ್ಲಿ ಪದೇ ಪದೇ ಬೆಂಕಿ ಅವಘಡಗಳಾಗುತ್ತಿದ್ದು, ನಗರ ನಿವಾಸಿಗಳನ್ನು ಆತಂಕಕ್ಕೀಡು ಮಾಡಿದೆ. ಬುಧವಾರ ನಸುಕಿನಲ್ಲೇ ನಗರದ ಜನತೆ ಮತ್ತೊಂದು ಬೆಂಕಿ ದುರಂತದ ಆಘಾತ ತಟ್ಟಿದೆ.

ನೈಋತ್ಯ ದೆಹಲಿಯ ಪಾಲಂ ಪ್ರದೇಶದ 4 ಅಂತಸ್ತಿನ ಕಟ್ಟಡದಲ್ಲಿ ಬುಧವಾರ ಬೆಳಗ್ಗೆ 6ರ ವೇಳೆ ಅಗ್ನಿ ದುರಂತವಾಗಿದ್ದು, 3 ಮಕ್ಕಳು ಸೇರಿ ಒಂದೇ ಕುಟುಂಬದ 9 ಜನ ಸಜೀವ ದಹನವಾಗಿದ್ದಾರೆ. ಮೂವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಂಕಿ ನಂದಿಸಲು ಮತ್ತು ಜನರನ್ನು ರಕ್ಷಿಸಲು ಅಗ್ನಿಶಾಮಕ ದಳದ 31 ವಾಹನಗಳು ಸ್ಥಳಕ್ಕೆ ಧಾವಿಸಿದ್ದವು.

ಬೆಂಕಿ ಮೊದಲು ಪಾಲಂನ ರಾಮ್ ಮಾರುಕಟ್ಟೆಯಲ್ಲಿನ ಬಟ್ಟೆ ಅಂಗಡಿಯಲ್ಲಿ ಕಾಣಿಸಿಕೊಂಡಿದ್ದು, ಬಳಿಕ ಅಕ್ಕಪಕ್ಕದ ಕಟ್ಟಡಗಳಿಗೂ ಹರಡಿತು. ಪಾಲಂ ಪ್ರದೇಶದ ರಾಮ್ ಚೌಕ್ ಮಾರುಕಟ್ಟೆಯ ಡಬ್ಲ್ಯುಝಡ್-124ಎ ಪ್ರದೇಶದಲ್ಲಿರುವ 4 ಅಂತಸ್ತಿನ ಕಟ್ಟಡವನ್ನಿಡೀ ಬೆಂಕಿ ಆವರಿಸಿಕೊಂಡಿದೆ. ನೆಲ ಮಹಡಿ ಮತ್ತು ಮೊದಲ ಮಹಡಿಯಲ್ಲಿ ರಾಜೇಂದರ್ ಕಶ್ಯಪ್ ಎಂಬವರ ಒಡೆತನದ ಬಟ್ಟೆ ಮತ್ತು ಸೌಂದರ್ಯವರ್ಧಕ ಸಾಮಗ್ರಿಗಳ ಮಾರಾಟ ಮಳಿಗೆಯಿತ್ತು. ಅವರ ಕುಟುಂಬದವರು 2 ಮತ್ತು 3ನೇ ಮಹಡಿಯಲ್ಲಿ ವಾಸಿಸುತ್ತಿದ್ದರು ಎಂದು ಅಧಿಕಾರಿ ತಿಳಿಸಿದ್ದಾರೆ.

ಒಂದೆಡೆ ಅಗ್ನಿಶಾಮಕ ದಳದ ಒಂದು ತಂಡ ಅಗ್ನಿಯನ್ನು ನಂದಿಸುವ ಕೆಲಸ ಮಾಡುತ್ತಿದ್ದರೆ, ಇನ್ನು ಕೆಲವು ಸಿಬ್ಬಂದಿ ಕಟ್ಟಡದಲ್ಲಿ ಸಿಕ್ಕಿಬಿದ್ದಿದ್ದ ಹತ್ತು ಜನರನ್ನು ರಕ್ಷಿಸಿ ಆಂಬ್ಯುಲೆನ್ಸ್‌ಗಳ ಮೂಲಕ ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ದು ದಾಖಲಿಸಿದರು. ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿದ್ದ

ಗಾಯಾಳುಗಳಲ್ಲಿ 8 ಜನರು ಸಾವನ್ನಪ್ಪಿದರು. ಲಾಡೋ (70), ಕಮಲ್ (40), ಪ್ರವೇಶ್ (35), ಆಶು (32), ಹಿಮಾಂಶಿ (22) ಹಾಗೂ 12 ವರ್ಷ, 6 ವರ್ಷ ಹಾಗೂ 5 ವರ್ಷದ ಮೂವರು ಬಾಲಕಿಯರು ಸಾವಿಗೀಡಾದರು. ಐಜಿಐ ಆಸ್ಪತ್ರೆಯಲ್ಲಿ 38 ವರ್ಷದ ಮಹಿಳೆ ಅಸುನೀಗಿದರು. 40ರ ಪುರುಷ ಮತ್ತು 2 ವರ್ಷದ ಬಾಲಕಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಶೇ.25ರಷ್ಟು ಸುಟ್ಟ ಗಾಯಗಳಾಗಿರುವ ಮತ್ತೊಬ್ಬ ಯುವಕನನ್ನು ಸಫ್ದರ್‌ಜಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಗ್ನಿಶಾಮಕ ಮತ್ತು ರಕ್ಷಣಾ ಕಾರ್ಯಾಚರಣೆಗಳ ನಂತರ ಬೆಂಕಿಯನ್ನು ಯಶಸ್ವಿಯಾಗಿ ನಂದಿಸಲಾಗಿದೆ. ಬೆಂಕಿ ಅವಘಡಕ್ಕೇನು ಕಾರಣ ಎಂಬುದನ್ನು ಕಂಡುಕೊಳ್ಳಲು ಎಫ್‌ಎಸ್‌ಎಲ್ ತಂಡ ಸ್ಥಳದಲ್ಲಿ ಸಾಕ್ಷ್ಯಗಳನ್ನು ಕಲೆಹಾಕಿದೆ. ಮ್ಯಾಜಿಸ್ಟೀರಿಯಲ್ ತನಿಖೆಗೂ ದೆಹಲಿ ಸರಕಾರ ಆದೇಶಿಸಿದೆ.

ಮ.ಪ್ರ. ಅಗ್ನಿ ಅವಘಡ: 8 ಜನ ಸಜೀವದಹನ

ಭೋಪಾಲ್: ಮಧ್ಯಪ್ರದೇಶದ ಇಂದೋರ್‌ನ ತಿಲಕ್ ನಗರ ಪ್ರದೇಶದಲ್ಲಿ ಬುಧವಾರ ಬೆಳಗಿನ ಜಾವ ಭಾರಿ ಬೆಂಕಿ ಅವಘಡವಾಗಿದ್ದು, ಕೈಗಾರಿಕೋದ್ಯಮಿ ಕುಟುಂಬದ ಹಲವು ಅಂತಸ್ತುಗಳ ಮನೆ ಬಹುತೇಕ ಸುಟ್ಟು ಭಸ್ಮವಾಗಿದೆ. 12 ವರ್ಷದ ಬಾಲಕಿ, ಇಬ್ಬರು ಮಹಿಳೆಯರು ಸೇರಿದಂತೆ ಒಂದೇ ಕುಟುಂಬದ 8 ಮಂದಿ ಸಜೀವ ದಹನವಾಗಿದ್ದಾರೆ. ಪ್ಲಾಸ್ಟಿಕ್ ತಯಾರಿಕೆ ಉದ್ಯಮ ನಡೆಸುತ್ತಿದ್ದ ಕುಟುಂಬದ ವಿಜಯ್ ಸೇಥಿಯ(65), ಸುಮನ್(60), ಮನೋಜ್ ಪುಗಲಿಯ(65), ಸಿಮ್ರನ್(30), ಟಿನು(35), ಛೋಟು ಸೇಥಿಯ(22) ಮತ್ತು 12 ವರ್ಷದ ರಾಶಿ ಸೇಥಿಯಾ ಎಂದು ಗುರ್ತಿಸಲಾಗಿದೆ. ಆಸ್ಪತ್ರೆಗೆ ದಾಖಲಿಸಲಾಗಿದ್ದ ಗಾಯಾಳುಗಳಲ್ಲಿ ಒಬ್ಬರು ಬುಧವಾರ ಸಂಜೆ ವೇಳೆಗೆ ಅಸುನೀಗಿದ್ದಾರೆ.

ಮನೆಯ ಆವರಣದಲ್ಲಿ(ಹೊರಗೆ) ಎಲೆಕ್ಟ್ರಿಕ್ ವಾಹನ ಚಾರ್ಜ್‌ಗೆ ಹಾಕಿದ್ದ ಪಾಯಿಂಟ್‌ನಲ್ಲಿ ಶಾರ್ಟ್ ಸರ್ಕಿಸ್ ಆಗಿದ್ದು, ಬುಧವಾರ ನಸುಕಿನ 4 ಗಂಟೆಯಲ್ಲಿ ಬೆಂಕಿ ಹೊತ್ತಿಕೊಂಡಿದೆ. ಮನೆಯವರೆಲ್ಲರೂ ಆಳವಾದ ನಿದ್ರೆಯಲ್ಲಿದ್ದ ಕಾರಣ ಸ್ಕೂಟರ್ ಬೆಂಕಿ ಹೊತ್ತಿ ಉರಿಯುತ್ತಿದ್ದುದು ತಕ್ಷಣಕ್ಕೆ ತಿಳಿದಿಲ್ಲ. ಮನೆಯಲ್ಲಿ 10 ಎಲ್‌ಪಿಜಿ ಸಿಲಿಂಡರ್‌ಗಳನ್ನು ಸಂಗ್ರಹಿಸಿಟ್ಟಿದ್ದರು. ಮನೆಯೊಳಕ್ಕೂ ವ್ಯಾಪಿಸಿದ ಬೆಂಕಿಗೆ ಎಲ್‌ಪಿಜಿ ಸಿಲಿಂಡರ್‌ಗಳು ಒಂದಾದ ಮೇಲೊಂದರಂತೆ ಸ್ಫೋಟಗೊಳ್ಳಲಾರಂಭಿಸಿದ್ದರಿಂದ ರಕ್ಷಣಾ ಕಾರ್ಯಾಚರಣೆ ಬಹಳ ಕಷ್ಟವಾಗಿ ಪರಿಣಮಿಸಿದೆ. ಎಲ್‌ಪಿಜಿ ಸಿಲಿಂಡರ್‌ಗಳು ಸ್ಫೋಟಗೊಂಡಿದ್ದರಿಂದ ಮನೆಯೊಳಗಿದ್ದವರನ್ನು ರಕ್ಷಿಸುವ ಕಾರ್ಯಕ್ಕೆ ಭಾರೀ ಅಡಚಣೆಯಾಗಿದೆ. ಪರಿಣಾಮ, ಇಡೀ ಮನೆ ಬೆಂಕಿ, ಮನೆ ಮುಂದೆ ನಿಲುಗಡೆಯಾಗಿದ್ದ ಕಾರು ಸುಟ್ಟುಹೋಗಿದೆ.

ಅಗ್ನಿಶಾಮಕ ದಳದ ಸಿಬ್ಬಂದಿ ಹಲವು ವಾಹನಗಳ ಸಮೇತ ಸ್ಥಳಕ್ಕೆ ಧಾವಿಸಿ ಬಂದಿದ್ದು, ಕಟ್ಟಡದಲ್ಲಿ ಸಿಲುಕಿಕೊಂಡಿದ್ದವರಲ್ಲಿ ಮೂವರನ್ನು ರಕ್ಷಣೆ ಮಾಡಿದ್ದಾರೆ. ಮೂವರೂ ತೀವ್ರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಸಂಜೆ ಒಬ್ಬ ಗಾಯಾಳು ಕೊನೆಯುಸಿರೆಳೆದಿದ್ದಾರೆ. ಮೃತರೆಲ್ಲರೂ ಒಂದೇ ಕುಟುಂಬದವರು. ನೆರೆಯ ಧಾರ್ ಜಿಲ್ಲೆಯ ಪಿತಾಂಪುರ ಕೈಗಾರಿಕಾ ಪ್ರದೇಶದಲ್ಲಿ ಪ್ಲಾಸ್ಟಿಕ್ ತಯಾರಿಕಾ ಘಟಕ ಮತ್ತು ಇಂದೋರ್‌ನ ಸಿಯಾಗಂಜ್ ಮಾರುಕಟ್ಟೆಯಲ್ಲಿ ವ್ಯಾಪಾರ ಮಳಿಗೆ ಇದೆ.

ಇ-ಲಾಕಿಂಗ್ ಸಿಸ್ಟಂ

ಮನೆಗೆ ಎಲೆಕ್ಟ್ರಾನಿಕ್ ಲಾಕಿಂಗ್ ಸಿಸ್ಟಂ ಅಳವಡಿಸಲಾಗಿತ್ತು. ಅಗ್ನಿ ಅವಘಡದಿಂದ ವಿದ್ಯುತ್ ಸರಬರಾಜು ಕಡಿತವಾಗಿದ್ದರಿಂದ ಎಲೆಕ್ಟ್ರಾನಿಕ್ ಲಾಕಿಂಗ್ ವ್ಯವಸ್ಥೆ ಕಾರ್ಯನಿರ್ವಹಿಸದೇ ಹೋಗಿದ್ದರಿಂದ ಬಾಗಿಲು ತೆರೆದು ಮನೆಯೊಳಕ್ಕೆ ಹೋಗಿ ಒಳಗಿದ್ದವರನ್ನು ರಕ್ಷಿಸುವುದು ಮೊದಲಿಗೆ ಬಹಳ ಕಷ್ಟವಾಯಿತು. ಮನೆಯೊ ಳಗಿದ್ದವರಲ್ಲಿ 7 ಮಂದಿ ಸ್ಥಳದಲ್ಲೇ ಸಜೀವ ದಹನವಾಗಿದ್ದಾರೆ. 7 ಮೃತದೇಹಗಳನ್ನು ಹೊರತೆಗೆಯಲಾಗಿದೆ ಎಂದು ಇಂದೋರ್ ಪೊಲೀಸ್ ಆಯುಕ್ತ ಸಂತೋಷ್ ಸಿಂಗ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದ ಪ್ರದ್ಯುತ್

ದೆಹಲಿ: ಅಸ್ಸಾಂ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿರುವ ವೇಳೆಯಲ್ಲೇ ಶತಮಾನ ಹಳೆಯ ಕಾಂಗ್ರೆಸ್ ಪಕ್ಷಕ್ಕೆ ಒಂದಾದ ಮೇಲೊಂದು ದೊಡ್ಡ ಹೊಡೆತಗಳು ಬೀಳುತ್ತಲೇ ಇವೆ. ಕಾಂಗ್ರೆಸ್ ಸಂಸದರಾಗಿದ್ದ ಪ್ರದ್ಯುತ್ ಬೊರ್ಡೊಲೊಯಿ ಪಕ್ಷಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದು, ಮರುದಿನವೇ(ಬುಧವಾರ) ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.ಕಾಂಗ್ರೆಸ್ ಪಕ್ಷದಲ್ಲಿನ ಎಲ್ಲಾ ಸ್ಥಾನಗಳಿಗೂ ರಾಜೀನಾಮೆ ನೀಡಿದ ಬೊರ್ಡೊಲೊಯಿ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಸೈಕಿಯ ಅವರ ಸಮ್ಮುಖ ಬಿಜೆಪಿಗೆ ಸೇರ್ಪಡೆಯಾದರು.ಸಂಸದರ ಅವಧಿ ಇನ್ನೂ ಮೂರು ವರ್ಷ ಇದ್ದರೂ ಕಾಂಗ್ರೆಸ್‌ಗೆ ವಿದಾಯ ಹೇಳಿರುವ ಬೊರ್ಡೊಲೊಯಿ, ಬಿಜೆಪಿ ತತ್ವ-ಸಿದ್ಧಾಂತಗಳನ್ನು ಮೆಚ್ಚಿ ಬಂದಿದ್ದಾರೆ. ಅವರ ಸೇರ್ಪಡೆಯಿಂದ ಬಿಜೆಪಿ ಬಲವರ್ಧನೆಯಾಗಿದೆ ಎಂದು ಸಿಎಂ ಶರ್ಮಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾಂಗ್ರೆಸ್‌ನ ಅಸ್ಸಾಂ ಘಟಕದ ಮಾಜಿ ಅಧ್ಯಕ್ಷ ಭೂಪೇನ್ ಕುಮಾರ್ ಬೋರಾ ರಾಜೀನಾಮೆ ಸಲ್ಲಿಸಿ

ಅಸ್ಸಾಂ ಸಿಎಂ ಹಿಮಂತ ಶರ್ಮಾ ಸಮ್ಮುಖ ಕಾಂಗ್ರೆಸ್ ಮಾಜಿ ಸಂಸದ ಬೊರ್ಡೊಲೊಯಿ ಬಿಜೆಪಿ ಸೇರ್ಪಡೆ

ಬಿಜೆಪಿ ಸೇರಿದ ಒಂದು ತಿಂಗಳಲ್ಲೇ ಕೈ ಪಕ್ಷದ ಪ್ರಮುಖ ನಾಯಕ ಪ್ರದ್ಯುತ್ ಬಿಜೆಪಿ ಸೇರಿದ್ದಾರೆ. ಪ್ರಮುಖರಿಬ್ಬರು ಪಕ್ಷ ತೊರೆದಿದ್ದರಿಂದ ಕಾಂಗ್ರೆಸ್‌ಗೆ ಸದ್ಯದ ಚುನಾವಣೆಯಲ್ಲಿ ದೊಡ್ಡ ಹೊಡೆತ ಬೀಳಲಿದೆ ಎಂದೇ ವಿಶ್ಲೇಷಣೆ ಮಾಡಲಾಗಿದೆ.

ಅಸ್ಸಾಂ ಘಟಕದ ಉಸ್ತುವಾರಿ ಹೊತ್ತಿರುವ ಪ್ರಿಯಾಂಕಾ ವಾದ್ರಾ, ವಿಧಾನಸಭೆ ಚುನಾವಣೆ ಟಿಕೆಟ್ ಹಂಚಿಕೆ ವಿಧಾನದಿಂದ ಅಸಮಾಧಾನಗೊಂಡು ಬೊರ್ಡೊಲೊಯಿ ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ.

ಮೇನಲ್ಲಿ ಹೊಸ ಸಿಡಿಎಸ್ ನೇಮಕ

ದೆಹಲಿ: ರಕ್ಷಣಾ ಪಡೆಗಳ ಮುಖ್ಯಸ್ಥ(ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಅಧಿಕಾರಾವಧಿ ಮೇನಲ್ಲಿ ಕೊನೆಗೊಳ್ಳಲಿದೆ. ನೂತನ ಸಿಡಿಎಸ್ ಯಾರ? ಎಂಬ ಕುರಿತು ಕುತೂಹಲ ಮೂಡಿದೆ. ಸದ್ಯ ಮೂವರು ನಿವೃತ್ತ ಅಧಿಕಾರಿಗಳು ಹೆಸರು ಕೇಳಿಬರುತ್ತಿದೆ. ನಿವೃತ್ತ ಅಧಿಕಾರಿಯನ್ನು ಈ ಹುದ್ದೆಗೆ ನೇಮಿಸುವ ಪೂರ್ವನಿದರ್ಶನವಿದ್ದು, ಲೆಫ್ಟಿನೆಂಟ್ ಜನರಲ್ ಎನ್.ಎಸ್.ರಾಜಾ ಸುಬ್ರಮಣಿ, ಲೆ.ಜ. ಎ.ಕೆ.ಸಿಂಗ್ ಮತ್ತು ಏರ್ ಮಾರ್ಷಲ್ ಪಿ.ಎಂ.ಸಿನ್ಹಾ ಮೂವರೂ ಉನ್ನತ ಕಾರ್ಯಾಚರಣೆಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವರು.

ಭದ್ರತೆಗೆ ಸಂಬಂಧಿಸಿದ ಸಂಪುಟ ಸಮಿತಿಯ ಆಯ್ಕೆ ಪ್ರಕ್ರಿಯೆಯೇನೂ ಸೇವಾ ಹಿರಿತನಕ್ಕೆ ಬದ್ಧವಾಗಿಲ್ಲ. ಜನರಲ್ ಬಿಪಿನ್ ರಾವತ್ ಮತ್ತು ಜನರಲ್ ಚೌಹಾಣ್ ನೇಮಕ ಸಂದರ್ಭವೇ ಅದಕ್ಕೆ ಉದಾಹರಣೆ. ಲೆ.ಜ.ರಾಜಾ ಸುಬ್ರಮಣಿ ಸೇನೆಯಲ್ಲಿ 4 ದಶಕ ಸೇವೆ ಸಲ್ಲಿಸಿ 2025ರ ಜುಲೈನಲ್ಲಿ ಸೇನಾ ಸಿಬ್ಬಂದಿ ಉಪ ಮುಖ್ಯಸ್ಥರಾಗಿ ನಿವೃತ್ತರಾದರು. ಸೇನೆಯ ಸೆಂಟ್ರಲ್ ಕಮಾಂಡ್ ಮತ್ತು ಐಐ ಕಾರ್ಪ್ಸ್ ಕಮಾಂಡಿಂಗ್, 1985ರಲ್ಲಿ ಗರ್ವಾಲ್ ರೈಫಲ್ಸ್‌ಗೆ ನೇಮಕಗೊಂಡರು. ನಿವೃತ್ತಿ ನಂತರ ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದಲ್ಲಿ ಮಿಲಿಟರಿ ಸಲಹೆಗಾರರನ್ನಾಗಿ ನೇಮಿಸಲಾಗಿದೆ. ಅಲ್ಲಿ ಸರಕಾರದ ಕಾರ್ಯತಂತ್ರದ ಯೋಜನಾ ರಚನೆ ಮತ್ತು ರಾಷ್ಟ್ರೀಯ ಭದ್ರತಾ ವ್ಯವಸ್ಥೆಗೆ ಪ್ರಮುಖ ಮಿಲಿಟರಿ ಇಂಟರ್‌ಫೇಸ್ ಆಗಿ ಸೇವೆ ಸಲ್ಲಿಸಿದ್ದಾರೆ.

ಸೇನೆಯ ದಕ್ಷಿಣ ಕಮಾಂಡ್‌ನ ಮಾಜಿ ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಆಗಿದ್ದ ಲೆ.ಜ.ಎ.ಕೆ.ಸಿಂಗ್ ಪ್ರಸ್ತುತ ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿ ಸದಸ್ಯರು. ಭಾರತೀಯ ವಾಯುಪಡೆ ಪಶ್ಚಿಮ ಕಮಾಂಡ್‌ನ ಕಮಾಂಡಿಂಗ್ ಇನ್ ಚೀಫ್ ಆಗಿದ್ದ ಸಿನ್ಹಾ, ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯಲ್ಲಿದ್ದಾರೆ.

ರಷ್ಯಾ ತೈಲನೌಕೆ ಭಾರತಕ್ಕೆ

ದೆಹಲಿ: ರಷ್ಯಾ ದೇಶದ ಕಚ್ಚಾತೈಲ ಸಾಗಣೆಯ ಕಡುಗೆಂಪು ವರ್ಣದ ನೌಕೆ 'ಆಕ್ವಾ ಟೈಟನ್' ವಾಸ್ತವವಾಗಿ ಚೀನಾದ ರಿಝಾವೊ ಬಂದರಿಗೆ ತಲುಪಬೇಕಿದ್ದುದು, ಇದ್ದಕ್ಕಿದ್ದಂತೆ ಮಾರ್ಗ ಬದಲಿಸಿದ್ದು, ಭಾರತದತ್ತ ಸಾಗಿ ಬರುತ್ತಿದೆ. ಬುಧವಾರ ಸಂಜೆ 5ರ ವೇಳೆ ಅಂಡಮಾನ್-ನಿಕೋಬಾರ್ ದ್ವೀಪ ಸಮೂಹದ ಸಮೀಪದ ಕಡಲಿನಲ್ಲಿ ಗಂಟೆಗೆ 12.3 ನಾಟಿಕಲ್ ಕಿಮೀ ವೇಗದಲ್ಲಿ ಸಾಗಿ ಬರುತ್ತಿರುವ ತೈಲ ನೌಕೆ ಮಾ.21ರ ಸಂಜೆ 4.30ರ ವೇಳೆಗೆ ಕರ್ನಾಟಕದ ನವ ಮಂಗಳೂರು ಬಂದರಿಗೆ ಬಂದು ತಲುಪುರ ನಿರೀಕ್ಷೆ ಇದೆ.

ಸಾಮರ್ಥ್ಯ:20 ವರ್ಷ ಹಳೆಯ ತೈಲ ಸಾಗಣೆ ನೌಕೆಯಲ್ಲಿ ಕನಿಷ್ಠ 7 ಲಕ್ಷ ಗರಿಷ್ಠ 10 ಲಕ್ಷ ಬ್ಯಾರೆಲ್ ಕಚ್ಚಾತೈಲ ಭರ್ತಿ ಮಾಡಿ ಸಾಗಿಸಬಹುದಾಗಿದೆ.

- ಮಾ.21ರ ಸಂಜೆ 4.30ಕ್ಕೆ ನವ ಮಂಗಳೂರು ಬಂದರಿಗೆ
- ಕೆಮರೂನ್ ಧ್ವಜ, ಗಂಟೆಗೆ 12.3 ನಾಟಿಕಲ್ ಕಿಮೀ ವೇಗ
- ಕೆಂಪು ವರ್ಣದ ಹಡಗಿನಲ್ಲಿ 7-10 ಲಕ್ಷ ಬ್ಯಾರಲ್ ಕಚ್ಚಾತೈಲ

ಎನ್‌ಡಿಎ ಮೈತ್ರಿಕೂಟದ 'ಟ್ವೆಂಟಿ-20' ಪಕ್ಷದಿಂದ 3 ನಟಿಯರು ಕಣಕ್ಕೆ। ನಟ ರಮೇಶ್‌ಗೆ ಕೈ ಟಿಕೆಟ್, ಮೀಟೂ ಮುಖೇಶ್‌ಗೆ ಕೈಕೊಟ್ಟ ಎಲ್‌ಡಿಎಫ್

ಬದಲಾದ ಕೇರಳಂ ರಾಜಕಾರಣ: ಚುನಾವಣೆ ಕಣದಲ್ಲಿ ಕಲಾವಿದರು

ತಿರುವನಂತಪುರಂ: ಕೇರಳಂ ರಾಜ್ಯದ ವಿಧಾನಸಭಾ ಚುನಾವಣೆ ಏ.9ರಂದು ನಡೆಯಲಿದ್ದು, ರಾಜಕೀಯ ಪಕ್ಷಗಳು ಅಭ್ಯರ್ಥಿಗಳನ್ನು ಆಗಲೇ ಪ್ರಕಟಿಸಲಾರಂಭಿಸಿವೆ. ಆದರೆ, ಪಕ್ಷಗಳ ಅಭ್ಯರ್ಥಿ ಆಯ್ಕೆಗಳನ್ನು ಗಮನಿಸಿದರೆ ಕೇರಳಂ ಏನಾದರೂ ತಮಿಳುನಾಡು ಹಾದಿಯಲ್ಲಿದೆಯೇ? ಎಂಬ ಪ್ರಶ್ನೆಯನ್ನು ಹುಟ್ಟು ಹಾಕುವಂತಿದೆ.

ಕಾರಣವೇನೆಂದರೆ, ಒಂದೊ ಸಿಪಿಐ ನೇತೃತ್ವದ ಎಡಪಕ್ಷಗಳ ಒಕ್ಕೂಟ ಎಲ್‌ಡಿಎಫ್, ಇಲ್ಲವೇ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಒಕ್ಕೂಟದ ಸರಕಾರ ಬರಲಷ್ಟೇ ಸಾಧ್ಯ ಎಂಬಂತಿರುವ ಕೇರಳಂ ರಾಜ್ಯದ ರಾಜಕಾರಣ ಈಗ ಹೊರಳು ಹಾದಿಯಲ್ಲಿರುವಂತೆ ಕಾಣುತ್ತಿದೆ. ಕಳೆದ ಬಾರಿಯ(2024) ಲೋಕಸಭಾ ಚುನಾವಣೆಯಲ್ಲಿ ಖ್ಯಾತ ಚಿತ್ರನಟ ಸುರೇಶ್ ಗೋಪಿ ಅವರು ಬಿಜೆಪಿ ಟಿಕೆಟ್‌ನಿಂದ ತ್ರಿಶೂರು ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿ ಗೆದ್ದು ಲೋಕಸಭೆ ಪ್ರವೇಶಿಸಿದರು. ಅಷ್ಟೇ ಅಲ್ಲದೇ, ಮೊದಲ ಯತ್ನದಲ್ಲೇ ಸಚಿವ ಪದವಿಯನ್ನೂ ಪಡೆದುಕೊಂಡರು. ಇದು ಕೇರಳದಲ್ಲಿನ ರಾಜಕಾರಣ ಬದಲಾಗುತ್ತಿದೆ. ರಾಜ್ಯದ ಮತದಾರರು, ಕೇವಲ ಕೆಂಪು ಧ್ವಜದ ಕಾಮ್ರೇಡ್‌ಗಳು, ಹೋರಾಟಗಾರರು, ಅನುಭವಿ ರಾಜಕಾರಣಿಗಳನ್ನಷ್ಟೇ ಅಲ್ಲ, ಚಿತ್ರರಂಗದ ಖ್ಯಾತ ನಾಮರನ್ನೂ, ನಟರನ್ನೂ ಗೆಲ್ಲಿಸಬಲ್ಲರು ಎಂಬುದನ್ನು ತೋರಿಸಿಕೊಟ್ಟಿತು.

ಈಗ ನಡೆಯಲಿರುವ ವಿಧಾನಸಭೆ ಚುನಾವಣೆಯ ದಿಕ್ಕು ದಿಸೆ ನೋಡಿದರೆ, ದೇವರ ಸ್ವಂತ ನಾಡು ಎಂಬ ಖ್ಯಾತಿಯ ಕೇರಳಂ ರಾಜ್ಯದ ರಾಜಕಾರಣ ಏಕಾಏಕಿ ತಮಿಳುನಾಡಿನಲ್ಲಿ ನಡೆಯುತ್ತಿರುವಂತೆ ಚಲನಚಿತ್ರ ನಟ-ನಟಿಯರ ಬೆನ್ನು ಹತ್ತಿರುವಂತೆ ಕಾಣುತ್ತಿದೆ.

ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟಕ್ಕೆ(ಎನ್‌ಡಿಎ) ಸೇರ್ಪಡೆಯಾಗಿರುವ 'ಟ್ವೆಂಟಿ-20' ಎಂಬ ವಿಚಿತ್ರ ಹೆಸರಿನ ಪಕ್ಷ ಕೂಡಾ ತನಗೆ ಮೀಸಲಾಗಿರುವ 20 ವಿಧಾನಸಭಾ ಕ್ಷೇತ್ರಗಳಲ್ಲಿ ಚಿತ್ರ ನಟಿಯರು, ಸಾಮಾಜಿಕ ಮಾಧ್ಯಮ ಪ್ರಭಾವಿಗಳನ್ನು ಕಣಕ್ಕಿಳಿಸುತ್ತಿದೆ.

ಟ್ವೆಂಟಿ-20 ಪಕ್ಷದ ಪರವಾಗಿ ಮೂವರು ನಟಿಯರು ಚುನಾವಣೆ ಕಣಕ್ಕಿಳಿಯುತ್ತಿದ್ದಾರೆ. ನಟಿಯರಾದ ಲಕ್ಷ್ಮಿ ಪ್ರಿಯಾ, ಅಂಜಲಿ ನಾಯರ್, ವೀಣಾ ನಾಯರ್ ಮೊದಲ ಬಾರಿಗೆ ವಿಧಾನಸಭೆ ಮೆಟ್ಟಿಲೇರಲು ಬಯಸಿದ್ದಾರೆ.

2005ರಿಂದಲೂ ಟಿವಿ ಧಾರಾವಾಹಿಗಳು ಮತ್ತು ಸ್ವಯಂ, ಆಮಿ, ಧ್ಯಾನ್ ಸೇರಿದಂತೆ 80ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಹಾಗೂ 'ಮಲಯಾಳಂ ಸಿನಿ ಕಲಾವಿದರ ಒಕ್ಕೂಟ'ವಾದ 'ಅಮ್ಮಾ'ದಲ್ಲಿ ಉಪಾಧ್ಯಕ್ಷೆಯೂ ಆಗಿರುವ ಲಕ್ಷ್ಮಿ ಪ್ರಿಯಾ, ಪೆರುಂಬವೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ದೃಶ್ಯಂ-2, ಸಿದ್ಧ, ಹೃದಯಂ, ಅಣ್ಣತ್ತ ಸೇರಿದಂತೆ ಹಲವಾರು ಸಿನಿಮಾಗಳಲ್ಲಿ ಮತ್ತು ಕಿರುತೆರೆ ಧಾರಾವಾಹಿಗಳಲ್ಲಿ ನಟಿಸಿರುವ ನಟಿ ಅಂಜಲಿ ನಾಯರ್ ತಿರುಪುನಿತುರ ಕ್ಷೇತ್ರದ ಟಿಕೆಟ್ ಘೋಷಣೆಯಾಗಿದೆ. ಈಕೆ ಇದೇ ಕ್ಷೇತ್ರದಲ್ಲಿ ಉದ್ಯಮ ಸಂಸ್ಥೆಯೊಂದನ್ನೂ ನಡೆಸುತ್ತಿದ್ದಾರೆ.ತಟ್ಟುಮ್ ಪುರತು ಅಚ್ಯುತನ್, ತೇರು ಮತ್ತು ಪಂಚಾಗ್ನಿ ಸೇರಿ ಹಲವಿ ಚಿತ್ರಗಳಲ್ಲಿ ನಟಿಸಿರುವ, ನೃತ್ಯ ಕಲಾವಿದೆಯೂ ಆಗಿರುವ ನಟಿ ವೀಣಾ ನಾಯರ್ ಟ್ವೆಂಟಿ-20 ಪಕ್ಷದಿಂದ ಎಟ್ಟುಮನೂರು ಕ್ಷೇತ್ರದ ಟಿಕೆಟ್ ಪಡೆದುಕೊಂಡಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಪ್ರಭಾವಿಯಾಗಿರುವ ಪ್ರೊಮಿ ಕುರಿಯಾಕೋಸ್‌ಗೆ ಟ್ವೆಂಟಿ-20 ಪಕ್ಷ ಥ್ರಿಕ್ಕಕಾರ ಕ್ಷೇತ್ರದ ಟಿಕೆಟ್ ನೀಡಿದೆ.

ಕಾಂಗ್ರೆಸ್ ಪಕ್ಷ 55 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದು, ನಟ ರಮೇಶ್ ಪಿಷಾರಡಿ ಪಾಲಕ್ಕಾಡ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

ಮಲಯಾಳಂ ಚಲನಚಿತ್ರ ರಂಗದ ಹಿರಿಯ ನಟ ಮುಖೇಶ್ ಪ್ರಸ್ತುತ ಕೊಲ್ಲಂ ಕ್ಷೇತ್ರದ ಕಮ್ಯುನಿಸ್ಟ್ ಪಕ್ಷದ ಶಾಸಕ. ಹೇಮಾ ಸಮಿತಿ ವರದಿಯಲ್ಲಿ ಮುಖೇಶ್ ಸಿನಿಮಾ ಶೂಟಿಂಗ್ ಸೆಟ್‌ಗಳಲ್ಲಿ ನಟಿಯರಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿದ್ದರಿಂದ ಈ ಬಾರಿ ಮುಖೇಶ್‌ಗೆ ಕಮ್ಯುನಿಸ್ಟ್ ಪಕ್ಷ ಟಿಕೆಟ್ ನೀಡಿಲ್ಲ.



ಅಂಜಲಿ ನಾಯರ್

ವೀಣಾ ನಾಯರ್

ರಮೇಶ್ ಪಿಷಾರಡಿ

ಲಕ್ಷ್ಮಿಪ್ರಿಯಾ

ಕುರಿಯಕೋಸ್


ಮುಖೇಶ್

'ಸಿಎಸ್‌ಆರ್' ಹಿನ್ನೆಲೆ 'ಟ್ವೆಂಟಿ-20' ಪಕ್ಷ

ಕೇರಳಂನ ಎರ್ನಾಕುಲಂ ಜಿಲ್ಲೆಯಲ್ಲಿನ ಕೈಟೆಕ್ಸ್ ಗ್ರೂಪ್ ಕಂಪನಿಯ ಮಾಲೀಕ, ಅರ್ಥಶಾಸ್ತ್ರ ಪದವೀಧರರಾದ ಸಾಬು ಎಂ.ಜಾಕೋಬ್ ಅವರು 2015ರಲ್ಲಿ ಸ್ಥಾಪಿಸಿದ, ಕಾರ್ಪೊರೇಟ್ ಹಿನ್ನೆಲೆಯ ರಾಜಕೀಯ ಪಕ್ಷ 'ಟ್ವೆಂಟಿ-20 ಕಿಳಕ್ಕಾಂಬಾಲಂ', ಈಗ ಎನ್‌ಡಿಎ ಮೈತ್ರಿಕೂಟದ ಭಾಗವಾಗಿದೆ. ಕಿಳಕ್ಕಾಂಬಾಲಂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 'ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಲಿಟಿ'(ಸಿಎಸ್ಆರ್) ಚಟುವಟಿಕೆಗಳಿಂದಾಗಿ ಕೈಟೆಕ್ಸ್ ಗ್ರೂಪ್ ಕಂಪನಿ ಮಾಲೀಕ ಸಾಬು ಎಂ.ಜಾಕೋಬ್ ಜನಪ್ರಿಯತೆ ಗಳಿಸಿದರು. ಸ್ವಚ್ಛ ರಾಜಕೀಯ, ಮೂಲ ಸೌಕರ್ಯಗಳ ಅಭಿವೃದ್ಧಿ, ಕಾರ್ಪೊರೇಟ್ ಶೈಲಿ ಆಡಳಿತ ಮೊದಲಾದ ಅಂಶಗಳ ಆಧಾರದ ಮೇಲೆ 'ಟ್ವೆಂಟಿ-20' ರಾಜಕೀಯ ಪಕ್ಷವನ್ನು ಹುಟ್ಟು ಹಾಕಿದರು. ಜಾಕೋಬ್ ಅವರ ಪಕ್ಷಕ್ಕೆ ಎನ್‌ಡಿಎ 20 ಕ್ಷೇತ್ರಗಳನ್ನು ನೀಡಿದೆ. ಆದರೆ, ಟ್ವೆಂಟಿ-20 ಪಕ್ಷವು ಟಿಕೆಟ್ ಹಂಚಿಕೆ ವಿಚಾರದಲ್ಲಿ ತಮಿಳುನಾಡಿನ 'ಜನಪ್ರಿಯ' ಮತ್ತು 'ಸಿನಿಮಾ ಕಲಾವಿದರು' ಮಾದರಿಯನ್ನೇ ಅನುಸರಿಸಿದೆ. ತನಗೆ ಮೀಸಲಾದ 20 ವಿಧಾನಸಭಾ ಕ್ಷೇತ್ರಗಳಲ್ಲಿ 4 ಕ್ಷೇತ್ರಗಳಿಗೆ ಜನಪ್ರಿಯರು, ಜನಕ್ಕೆ ಚಿರಪರಿಚಿತ ಮುಖ ಎಂಬ ಆಧಾರದ ಮೇಲೆ ಅಭ್ಯರ್ಥಿಗಳ ಆಯ್ಕೆ ನಡೆಸಿದೆ. ಅದೇ ಕಾರಣವಾಗಿ. ಮೂವರು ಸಿನಿಮಾ ಮತ್ತು ಕಿರುತೆರೆ ನಟಿಯರಾದ ಲಕ್ಷ್ಮಿ ಪ್ರಿಯಾ, ಅಂಜಲಿ ನಾಯರ್, ವೀಣಾ ನಾಯರ್ ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಪ್ರಭಾವಿಯಾಗಿರುವ ಪ್ರೊಮಿ ಕುರಿಯಕೋಸ್ ಅವರನ್ನೇ ಅಭ್ಯರ್ಥಿಗಳಾಗಿ ಕಣಕ್ಕಿಳಿಸುತ್ತಿದೆ.

ಟ್ವೆಂಟಿ 20 ಪಕ್ಷದ ಸಂಸ್ಥಾಪಕ, ಕೈಟೆಕ್ಸ್ ಕಂಪನಿ ಮಾಲೀಕ ಸಾಬು ಎಂ.ಜಾಕೋಬ್, ಬಿಜೆಪಿ ಕೇರಳ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಜತೆಗೂಡಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ 'ಎನ್‌ಡಿಎ' ಸೇರಿದ ಕ್ಷಣ.

ಸಮಾಚಾರ ಸಣ್ಣದಲ್ಲ

ಉಳಿತಾಯ ಬಜೆಟ್ ಗೆ ಅನುಮೋದನೆ

ಮಹಾಲಿಂಗಪುರ: ಪುರಸಭೆ ಉಳಿತಾಯ ಬಜೆಟ್ ಗೆ ಜಮಖಂಡಿ ಉಪ ವಿಭಾಗಾಧಿಕಾರಿ (ಆಡಳಿತಾಧಿಕಾರಿ) ಶ್ವೇತಾ ಬೀಡಿಕರ ಅವರು ಮಾರ್ಚ್ 12 ರಂದು ಅನುಮೋದನೆ ನೀಡಿ ಮಹಾಲಿಂಗಪುರ ಪಟ್ಟಣದ ಅಭಿವೃದ್ಧಿ ವೇಗವಾಗಿ ನಡೆಯಲಿ ಎಂದು ಹಾರೈಸಿದರು ಎಂದು ಮುಖ್ಯಾಧಿಕಾರಿ ನಾಮದೇವ ಲಮಾಣಿ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ. ಸನ್ 2026-27 ನೇ ಸಾಲಿಗಾಗಿ ತಯಾರಿಸಿದ ಆಯವ್ಯಯದ ಅಂದಾಜು ನಿರೀಕ್ಷಿತ ಆದಾಯ 31 ಕೋ.13 ಲಕ್ಷ - ಅಂದಾಜು ವೆಚ್ಚ 31 ಕೋ 6ಲಕ್ಷ = 6 ಲಕ್ಷ 61 ಸಾವಿರ ಒಟ್ಟು ಉಳಿತಾಯವಾಗಿದೆ.ಪುರಸಭೆಯ ಸನ್ 2026-27 ನೇ ಸಾಲಿನ ಪುರಸಭೆಯ ಅಯವ್ಯಯ ಅಂದಾಜು ಪತ್ರಿಕೆ (ಬಜೆಟ್) ಮಂಡಿಸಿದ್ದು ಸದರ ಬಜೆಟ್ ನಲ್ಲಿ ಪಟ್ಟಣದ ಕುಡಿಯುವ ನೀರು, ನೈರ್ಮಲೀಕರಣ, ಬೀದಿ ದೀಪಗಳ ವ್ಯವಸ್ಥೆ, ರಸ್ತೆ, ಚರಂಡಿ, ಉದ್ಯಾನವನಗಳು, ಕೆರೆ ಹಾಗೂ ಇನ್ನೂ ಅನೇಕ ಅಭಿವೃದ್ಧಿ ಕೆಲಸಗಳು ನಡೆಯಲಿವೆ. ಇಷ್ಟು ಅಲ್ಲದೆ 15ನೇ 16ನೇ ಹಣಕಾಸಿನ / ಎಸ್.ಎಫ್.ಸಿ ಹಾಗೂ ಇತರ ಸರಕಾರದ ಪುರಸ್ಕೃತ ಯೋಜನೆಗಳ ಮುಂದುವರೆದ ಕಾಮಗಾರಿಗಳಿಗಾಗಿ ಅನುದಾನ ಕಾಯ್ದಿರಿಸಲಾಗಿದೆ.ಎಸ್.ಎಫ್.ಸಿ ಹಾಗೂ ಪುರಸಭೆ ನಿಧಿಯಡಿ ಸರಕಾರದ ಮಾರ್ಗಸೂಚಿ ಪ್ರಕಾರ ಶೇ24.10, ಶೇ7.25, ಶೇ5, ಅಡಿಯ ಮೊತ್ತವಾಗಿದೆ.

ಶಿವಶಿಂಪಿಗರಲ್ಲಿ ಜಾಗೃತಿ ಮೂಡಿಸಿ

ರಬಕವಿ-ಬನಹಟ್ಟಿ: ನಮ್ಮ ಸಮುದಾಯ ನಿರ್ಲಕ್ಷಕ್ಕೆ ಒಳಗಾಗಿದೆ, ನಮ್ಮಲ್ಲಿ ಜಾಗೃತಿಯನ್ನು ಮೂಡಿಸುವಂತ ಕಾರ್ಯವಾಗಬೇಕಿದೆ ಇದಕ್ಕಾಗಿ ಜಿಲ್ಲಾವಾರು ನಮ್ಮ ಸಮುದಾಯವರನ್ನು ಭೇಟಿ ಮಾಡಿ ಸಂಘಟನೆಯನ್ನು ಮಾಡಲಾಗುತ್ತಿದೆ ಎಂದು ರಾಜ್ಯ ಹಿಂದುಳಿದ ಮಠಾಧೀಶರ ಒಕ್ಕೂಟದ ಉಪಾಧ್ಯಕ್ಷರು, ಶಿವಶಿಂಪಿ ಸಮಾಜದ ಗುರುಗಳಾದ ಬನಹಟ್ಟಿಯ ಮಹಾಂತ ಮಂದಾರ ಮಠದ ಮಹಾಂತ ದೇವರು ತಿಳಿಸಿದರು. ರಬಕವಿ ಶಿವ ಶಿಂಪಿ ಸಮುದಾಯದವರನ್ನು ಬೇಟಿ ಮಾಡಿ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಶ್ರೀಗಳು, ನಮಗೆ ಈಗ ಮಠವನ್ನು ಕಟ್ಟುವುದು, ವಿದ್ಯಾಪೀಠಗಳನ್ನು ನಿರ್ಮಾಣ ಮಾಡುವುದಕ್ಕಿಂತ ಮುಖ್ಯವಾಗಿ ಸಮಾಜವನ್ನು ಸಂಘಟಿಸಬೇಕಾದ ಅನಿವಾರ್ಯತೆ ಇದೆ. ಎಲ್ಲೇ ಹೋದರು ಸಹಾ ನಿಮ್ಮವರು ಎಷ್ಟು ಮಂದಿ ಇದ್ದಾರೆ ಎಂದು ಕೇಳುವುದು ಆಗಿದೆ, ಈ ಹಿನ್ನಲೆಯಲ್ಲಿ ನಮ್ಮ ಸಮುದಾಯವನ್ನು ಸಂಘಟಿಸುವ ಕಾರ್ಯಕ್ಕೆ ಮುಂದಾಗಿರುವುದಾಗಿ ತಿಳಿಸಿದ ಅವರು, ನಮ್ಮ ಕುಲಗುರುಶಿವದಾಸಿಮಯ್ಯರವರ ಬಗ್ಗೆ ದಾಖಲೆಗಳು ಸಿಗುತ್ತಿಲ್ಲ, ಇದರಿಂದ ನಮ್ಮ ಸಮುದಾಯ ಅದನ್ನು ಹುಡುಕುವತ್ತ ಮುಂದಾಗಿದೆ ಇದರ ಬಗ್ಗೆ ಸರಕಾರಕ್ಕೂ ಸಹಾ ಮನವಿಯನ್ನು ಮಾಡಿದ್ದು ನಮ್ಮ ಕುಲಗುರುಗಳ ವಚನಗಳನ್ನು ಪತ್ತೆ ಮಾಡುವಂತೆ ಕೋರಲಾಗಿದೆ ಎಂದರು. ಈ ಸಂದರ್ಭದಲ್ಲಿ ಬಾಗಲಕೋಟೆ ಶಿವಶಿಂಪಿ ಸಮಾಜದ ಅಧ್ಯಕ್ಷರಾದ ಚಂದ್ರಶೇಖರ ಸಾವಳಗಿ, ರಬಕವಿ ಸಮಾಜದ ಅಧ್ಯಕ್ಷರಾದ ಸಿದ್ದಣ್ಣ ಸಣಕಾಲ, ಚೇರ್ ಮನ್ ಪ್ರಕಾಶ ಸಣಕಾಲ, ಕಾರ್ಯದರ್ಶಿ ಚಿದಾನಂದ ಸೋಲಾಪುರ, ನಿರ್ದೇಶಕರಾದ ಶ್ರೀಶೈಲ ಭೂಯಾರ, ದಾನಪ ತುಂಗಳ , ವಿನೋದ ಸಿಂದಗಿ, ಪ್ರವೀಣ್ ಪಾವಟೆ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ವಸತಿ ಯೋಜನೆ: ಮಾಹಿತಿ ನೀಡಲು ಮನವಿ

ರಬಕವಿ-ಬನಹಟ್ಟಿ: 2016 ರಿಂದ 2026 ವರೆಗೆ ದೇವದಾಸಿ ಮಹಿಳೆಯರಿಗೆ ಮಂಜೂರಾದ ಮನೆಗಳ ಅಂಕಿ ಅಂಶ ಮತ್ತು ಪ್ರಗತಿಯ ವರದಿಯನ್ನು ನೀಡುವಂತೆ ಕರ್ನಾಟಕ ವಿಮುಕ್ತ ದೇವದಾಸಿ ಮಹಿಳಾ ವೇದಿಕೆ ರಬಕವಿ-ಬನಹಟ್ಟಿ ತಾಲ್ಲೂಕು ಘಟಕದ ಅಧ್ಯಕ್ಷೆ ಮಹಾನಂದಾ ದೊಡಮನಿ ಆಗ್ರಹಿಸಿದರು. ಅವರು ಮಂಗಳವಾರ ರಬಕವಿ-ಬನಹಟ್ಟಿ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. 2016 ರಿಂದ ಪ್ರತಿವರ್ಷ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ ಮತ್ತು ಅವರಿಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ. ಮಂಜೂರಾದ ಮನೆಗಳಲ್ಲಿ ಎಷ್ಟು ಮನೆಗಳ ನಿರ್ಮಾಣ ಕಾರ್ಯವು ಪೂರ್ಣಗೊಂಡಿದೆ ಮತ್ತು ಎಷ್ಟು ಮನೆಗಳ ಕಾಮಗಾರಿ ಇನ್ನೂ ಪ್ರಗತಿಯಲ್ಲಿದೆ. ವಸತಿ ಸೌಲಭ್ಯ ಕೋರಿ ಇಲಾಖೆಗೆ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಮತ್ತು ಎಷ್ಟು ಜನರು ಫಲಾನುಭವಿಗಳು ವಂಚಿತರಾಗಿದ್ದಾರೆ ಮತ್ತು ಮಂಜೂರಾದ ಅನುದಾನಗಳ ಬಗ್ಗೆ ಮಾಹಿತಿಯನ್ನು ನೀಡಬೇಕು ಎಂದು ಮಹಾನಂದ ದೊಡಮನಿ ಆಗ್ರಹಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಘಟಕದ ಉಪಾಧ್ಯಕ್ಷ ಸಂತೋಷ ಜಮಖಂಡಿ, ಜಿಲ್ಲಾ ಕಾರ್ಯದರ್ಶಿ ಕಲಾವತಿ ಮಾದರ, ಸದಸ್ಯರಾದ ಮಾಲಾ ಹರಿಜನ ಮತ್ತು ತಂಗೆವ್ವ ರಡ್ಡರಟ್ಟಿ ಇದ್ದರು.

ವಿರಾಮ
ಪ್ರತಿ ಭಾನುವಾರ

{ಪ್ರಭು ಚವ್ಹಾಣ } ಶಾಸಕ

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ವೇತನ ಹೆಚ್ಚಿಸುವಂತೆ ಸರಕಾ ರಕ್ಕೆ ಆಗ್ರಹಿಸಲಾಗಿದೆ. ಮಕ್ಕಳಿಗೆ ಬಿಸಿಯೂಟ ಪೂರೈಕೆ, ಅಪೌಷ್ಟಿಕತೆ ನಿವಾರಣೆ, ಗರ್ಭಿಣಿಯರು ಹಾಗೂ ತಾಯಂದಿರಿಗೆ ಸರಕಾರ ಯೋಜನೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ವೇತನ ಹೆಚ್ಚಳ ಪ್ರಮುಖ ಬೇಡಿಕೆಯಾಗಿದ್ದು, ಸರಕಾರ ಇವರ ಮನವಿಯನ್ನು ಗಂಭೀರವಾಗಿ ಪರಿಗಣಿಸಬೇಕು.

ಸಿಂಚನ ಮಾರ್ಕೆಟ್ ಮೇಳಕ್ಕೆ ಚಾಲನೆ ನೀಡಿ ಆಶಾ.ಎಂ.ಬಿ ಪಾಟೀಲ ಅಭಿಮತ

ಎಲ್ಲ ಕ್ಷೇತ್ರಗಳಲ್ಲೂ ಮಹಿಳೆ ಸಾಧನೆ

ಜಮಖಂಡಿ: ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಅನೇಕ ರಂಗಗಳಲ್ಲಿ ಸಾಧಿಸಿ ತೋರಿಸಿದ್ದಾರೆ. ಮಹಿಳೆ ಮತ್ತು ಪುರುಷ ಎಂಬ ಲಿಂಗ ಬೇಧ ತೊರೆದು ಎಲ್ಲರೂ ಸಮಾನರೆಂಬ ಮನೋಭಾವ ಹೊಂದಿದಾಗ ಮಾತ್ರ ಸುಂದರ ಸಮಾಜ ನಿರ್ಮಾಣ ಸಾಧ್ಯ ಎಂದು ಬಂಜಾರಾ ಕಸೂತಿ ಸಂಘಟನೆ ಸಂಸ್ಥಾಪಕರಾದ ಆಶಾ.ಎಂ.ಬಿ.ಪಾಟೀಲ ಹೇಳಿದರು.

ಬಿಎಲ್ಡಿಇ ಸಂಸ್ಥೆಯ ವಾಣಿಜ್ಯ, ಬಿಎಚ್ಎಸ್ ಕಲೆ ಹಾಗೂ ಟಿಜಿಪಿ ವಿಜ್ಞಾನ ಮಹಾವಿದ್ಯಾಲಯದ ಮಹಿಳಾ ವೇದಿಕೆ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಕೋಶದ ಆಶ್ರಯದಲ್ಲಿ ನಗರದ ಬಾರ್‌ಹಾಲ್ನಲ್ಲಿ ಆಯೋಜಿಸಿದ್ದ ''ಸಿಂಚನ'' ಮಾರ್ಕೆಟ್ ಮೇಳ-ಮಹಿಳಾ ಉದ್ಯಮಿಗಳ ಸಮಾಗಮ ಕರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜೈವಿಕ ವ್ಯತ್ಯಾಸಗಳನ್ನು ಹೊರತುಪಡಿಸಿ ಧರ್ಯ, ಆತ್ಮವಿಶ್ವಾಸ ಮತ್ತು ಸ್ವಾಭಿಮಾನಕ್ಕೆ ಯಾವುದೇ ಲಿಂಗ ಭೇದವಿಲ್ಲ. ಪುರುಷ ಮತ್ತು ಮಹಿಳೆಯರ ನಡುವಿನ ಸಂಬಂಧವು ಸುಂದರವಾಗಬೇಕಾದರೆ, ಇಬ್ಬರೂ ಪರಸ್ಪರರ ದಣಿವನ್ನು ರ್ಥಮಾಡಿಕೊಂಡು ಬೆಂಬಲವಾಗಿ ನಿಲ್ಲಬೇಕು. ಪುರುಷರು ಮಹಿಳೆಯರ ಸಾಧನೆಯನ್ನು ಗುರುತಿಸಿದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ ಎಂದರು.

ಕವಿವಿ ಧಾರವಾಡದ ಪ್ರಾಧ್ಯಾಪಕ ಡಾ.ಉತ್ತಮ ಕಿನಂಗೆ ಮಾತನಾಡಿ ಮಹಿಳೆಯರು ಸಾಧನೆ ಮಾಡಬೇಕಾದರೆ ಸಾಧಕ ಮಹಿಳೆಯರ ಕುರಿತು ತಿಳಿದುಕೊಳ್ಳಬೇಕು. ಅವರ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಮಹಿಳೆ ಪುರುಷರಿಗಿಂತ ಯಾವುದರಲ್ಲೂ ಕಡಿಮೆಯಿಲ್ಲ. ಹೆಣ್ಣು ಅಬಲೆಯಂದು ಕರೆಯುವುದೇ ಅವಮಾನ. ಸ್ತ್ರಿರ ಇಂದು ಕೇವಲ ಕುಟುಂಬದ ಕಣ್ಣಲ್ಲ, ಜಗತ್ತಿನ ಕಣ್ಣಾಗಿದ್ದಾಳೆ. ಬದಲಾವಣೆ ಹೊಂದುತ್ತಿರುವ ಜಗತ್ತಿಗೆ ಮಹಿಳೆಯ ಕೊಡುಗೆ ಅಪಾರ ಎಂದು ತಿಳಿಸಿದರು. ಕಾಲೆಜಿನ ಪ್ರಾಚರ್ಯ ಡಾ.ಪಿ.ಡಿ.ಪೋಳ ಮಾತನಾಡಿ, ಮಹಿಳೆಯರು ಕಾಲಿಡದ ಕ್ಷೇತ್ರವಿಲ್ಲ. ಭಾರತದಲ್ಲಿಸ್ತ್ರಿರಗೆ ಪೂಜ್ಯನೀಯ ಸ್ಥಾನವಿದೆ. ಹೆಣ್ಣುಮಕ್ಕಳ ಜೀವನ ಪರಿಪರ್ಣವಿದ್ದಂತೆ. ಮಗಳಾಗಿ, ಸಹೋದರಿಯಾಗಿ, ತಾಯಿಯಾಗಿ ಮತ್ತು ಪತ್ನಿಯಾಗಿ ತನ್ನ ಜವಾಬ್ದಾರಿಯನ್ನು ಯಶಸ್ವಿಯಾಗಿ ನರ್ವಹಿಸುತ್ತಾಳೆ. ಇಂತಹ ಮಹತ್ವದ ಕೆಲಸ ಬೇರೆಯಾರು ಮಾಡಲು ಸಾಧ್ಯವಿಲ್ಲ ಎಂದರು.

ಸಿಂಚನ ಮಾರ್ಕೆಟ್ ಮೇಳ-ಮಹಿಳಾ ಉದ್ಯಮಿಗಳ ಸಮಾಗಮ ಕರ್ಯಕ್ರಮವನ್ನು ಆಶಾ.ಎಂ.ಪಾಟೀಲ ಉದ್ಘಾಟಿಸಿದರು.

> **ಬಂಜಾರಾ ಸಮುದಾಯದ ಕಲೆ ಉಳಿವಿಗಾಗಿ ಬಂಜಾರಾ ಕಸೂತಿ ಸಂಘವನ್ನು ಸ್ಥಾಪಿಸಲಾಗಿದೆ. ತಳ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಲಾಗುತ್ತಿದೆ. ಬಂಜಾರಾ ಜನಾಂಗದ ಮಹಿಳೆಯರನ್ನು ಮುಖ್ಯ ವಾಹಿನಿಗೆ ತರುವುದು ನಮ್ಮ ಸಂಘಟನೆ ಉದ್ದೇಶವಾಗಿದೆ. ತಾಂಡಾದ ಮಹಿಳೆಯರಿಗೆ ಕೌಶಲ್ಯಾಧಾರಿತ ತರಬೇತಿ ನೀಡಿ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳಲು ಸಹಾಯ, ಸಹಕಾರ ನೀಡಲಾಗುತ್ತಿದೆ.**
> **ಆಶಾ.ಎಂ.ಪಾಟೀಲ**, ಸಂಸ್ಥಾಪಕರು, ಬಂಜಾರ ಕಸೂತಿ ಸಂಘಟನೆ

ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಅರುಣಕುಮಾರ ಶಹಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಒಂದು ದಿನ ಮಹಳೆಯರನ್ನು ಗೌರವಿಸಿದರೆ ಸಾಲದು, ಇದು ನಿರಂತರವಾಗಬೇಕು. ನಮ್ಮ ಮಹಾವಿದ್ಯಾಲಯದಲ್ಲಿ ಶೇ.50 ಕ್ಕಿಂತ ಹೆಚ್ಚು ಹೆಣ್ಣು ಮಕ್ಕಳೇ ಅಧ್ಯಯನ ಮಾಡುತ್ತಿರುವುದು ವಿಶೇಷ. ಮಹಿಳೆಯರ ಶ್ರೆಯೋಭಿವೃದ್ಧಿಗೆ ನಾವು ಸದಾ ಸಿದ್ದ ಎಂದು ನುಡಿದರು.

ಇದೇ ವೇಳೆ 'ಸ್ಥಳೀಯ ಉತ್ಪನ್ನಗಳನ್ನು ಖರೀದಿಸಿ, ಸಂಸ್ಕೃತಿಯನ್ನು ಉಳಿಸಿ' ಎಂಬ ಧ್ಯೇಯದೊಂದಿಗೆ ಹಮ್ಮಿಕೊಂಡ ಈ ಮಾರ್ಕೆಟ್ ಮೇಳದಲ್ಲಿ ಒಟ್ಟು 62 ಮಳಿಗೆಗಳು ಭಾಗವಹಿಸಿದ್ದವು. ಯುವ ಮಹಿಳಾ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಪ್ರರ್ಶಿಸಿ ಮಾರಾಟ ಮಾಡಿದರು.

ಕರ್ಯಕ್ರಮದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಎಸ್.ಎಚ್.ಲಗಳಿ, ಇನ್ನರ್ವಿಲ್ ಕ್ಲಬ್ ಅಧ್ಯಕ್ಷೆ ಗಿರಿಜಾ ಮೇತ್ರಿ, ರ್ಬನ್ ಬ್ಯಾಂಕ್ ನರ್ದೇಶಕಿ ವೈಶಾಲಿ ಗೊಂದಿ, ಆಶಾ ಗುಡಗುಂಟಿ, ಕರ್ತಿ ನ್ಯಾಮಗೌಡ, ರ್ಚನಾ ಶಹಾ, ಮಾಧುರಿ ಹಮಾಬಲಶಟ್ಟಿ, ನಂದಿನಿ ಬಾಂಗಿ, ಕಲ್ಯಾಣಿ ಗೋಕಲೆ, ಪ್ರಿಯಂಕಾ ಅಪ್ಟೆ, ಶಾರದಾ ಪಾಟೀಲ, ಸುನಂದಾ ಕಲ್ಯಾಣಶೆಟ್ಟಿ. ಅಮೃತಾ ಮೇಟಿ, ರಾಜೇಶ್ವರಿ ಹಿರೇಮಠ, ಉಪಪ್ರಾಚರ್ಯರಾದ ಡಾ.ಡಿ.ಎಸ್.ನಿಟ್ಟೂರ, ಪ್ರೊ. ಮಲ್ಲಿಕರ್ಜುನ ಬೀರಣ್ಣ, ಡಾ.ರವಿಶಂಕರ, ಪ್ರೊ.ಪಿಸಿ. ಸುರಪುರ, ಡಾ.ಆನಂದ ಉಪ್ಪಾರ ಸೇರಿದಂತೆ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯರ್ಥಿಗಳು ಭಾಗವಹಿಸಿದ್ದರು. ಕರ್ಯಕ್ರಮವನ್ನು ಪ್ರೊ.ದೀಪಾ ತಳವಾರ ಸ್ವಾಗತಿಸಿದರು. ವಿದ್ಯರ್ಥಿನಿ ಸಾಕ್ಷಿ ಹಾಗೂ ಆಯಿಶಾ ನಿರೂಪಿಸಿ, ದೀಪಾ ಲಕ್ಕಪಗೋಳ ವಂದಿಸಿದರು.

ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವೆ: ಸಚಿವ ತಿಮ್ಮಾಪುರ

ಮಹಾಲಿಂಗಪುರ: ಇಂದಿನ ಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಎಲ್ಲ ರೀತಿಯ ಸೌಲಭ್ಯ ಹಾಗೂ ಹೆಚ್ಚಿನ ಆದ್ಯತೆ ನೀಡುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್‌ಬಿ ತಿಮ್ಮಾಪುರ ಹೇಳಿದರು.

ಸಮೀಪದ ಅಕ್ಕಿಮರಡಿ ಗ್ರಾಮದಲ್ಲಿ ಜಿಲ್ಲಾ ಪಂಚಾಯತ್ ಬಾಗಲಕೋಟೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ಪಂಚಾಯತ ರಾಜ್ಯ ಎಂಜಿನಿಯರಿಂಗ್ ಇಲಾಖೆ 2022-23 ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯ ಆರ್‌ಐ ಡಿ ಎಫ್ 28 ಅನುದಾನದಡಿ ಸರಕಾರಿ ಪ್ರೌಢಶಾಲೆಯ(ಆರ್‌ಎಂ ಎಸ್ ಎ) ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ನಮ್ಮ ಸರಕಾರ ಶಿಕ್ಷಣಕ್ಕೆ ಅಷ್ಟೇ ಅಲ್ಲದೆ ಬಡ ಹಾಗೂ ದೀನದಲಿತರಿಗೆ ಸಹಕಾರಿಯಾಗುವ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಇದರಿಂದಾಗಿ ಹೆಚ್ಚಿನ ಸಂಖ್ಯೆಯ ಬಡವರಿಗೆ ಸಹಾಯವಾಗಿದೆ. ಜೊತೆಗೆ ರೈತರ ಮತ್ತು ಮಹಿಳೆಯರ ಅಭಿವೃದ್ಧಿಗೆ ಹೆಚ್ಚಿನ ಹೆಚ್ಚಿನ ಆದ್ಯತೆ ನಮ್ಮ ಸರಕಾರ ನೀಡಿದೆ. ಬಡವರಿಗೆ ಶಕ್ತಿ ಕೊಡುವ ಮತ್ತು ಅಭಿವೃದ್ಧಿ ಕಾರ್ಯ ಮಾಡುವಲ್ಲಿ ಯಶಸ್ವಿಯಾಗಿದೆ ಎಂದರು.

ಜತೆಗೆ ಅಕ್ಕಿಮರಡಿ ರಸ್ತೆಯಿಂದ ಬೆಳಗಲಿ ರಸ್ತೆ, ಅಕ್ಕಿಮರಡಿಯಿಂದ ಮಹಾಲಿಂಗಪುರ ರಸ್ತೆಯಲ್ಲಿರುವ ಒತ್ತನೆವ್ವ ದೇವಸ್ಥಾನದವರೆಗೆ ರಸ್ತೆ ಸುಧಾರಣೆ, ಕನಕದಾಸ ಸಮುದಾಯ ಭವನ ನಿರ್ಮಾಣಕ್ಕೆ ಸಚಿವ ಆರ್‌ಬಿ ತಿಮ್ಮಾಪುರ ಭೂಮಿ ಪೂಜೆ ಸಲ್ಲಿಸಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಶಿರೂರದ ಪ.ಪೂ ಶ್ರೀ ಚಿನ್ಮಯಾನಂದ ಮಹಾಸ್ವಾಮಿಜಿ ಮತ್ತು ಮೆಟಗುಡ್ಡದ ಪರಮಪೂಜ್ಯ ಜ್ಯೋತಿಲಕ್ಕಪ್ಪ ಮಹಾರಾಜರು ಆಶೀರ್ವಚನ ನೀಡಿದರು. ಪ್ರೌಢಶಾಲಾ ಮುಖ್ಯ ಶಿಕ್ಷಕ ಎಸ್‌ಎಂ ಸುತಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಬಾಗಲಕೋಟೆ ಡಿವೈಪಿಸಿ ಪಿಎಸ್ ಬಳೋಲಮಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್ ಎಂ ಮುಲ್ಲಾ, ನಾಗರಾಳ ಗ್ರಾಪಂ ಪಿಡಿಓ ರಂಜಿತಾ ಹಟ್ಟಿ, ಅಕ್ಕಿಮರಡಿ ಪ್ರೌಢ ಶಾಲಾ ಎಸ್ಡಿಎಂಸಿ ಅಧ್ಯಕ್ಷ ಶಿವಯ್ಯ ಲಗಳಿ, ಯಶವಂತ ಚೌವ್ಹಾಣ, ಮಲ್ಲಪ್ಪ ಅಣ್ಣೋಜಿ, ಮಡಿವಾಳಯ್ಯ ಕಂಬಿ, ಮಲ್ಲಪ್ಪ ಮಳಲಿ, ರಾಮಪ್ಪ ಕೊಣ್ಣೂರ, ಶಿವಾನಂದ ಮಠದ, ಭೀಮಪ್ಪ ಚಿಕ್ಕೂರ, ಕಾಡಪ್ಪ ಕೊಣ್ಣೂರ, ರಾಮಪ್ಪ ಚೌವ್ಹಾಣ, ಶಿವಾಜಿ ಚೌವ್ಹಾಣ, ಗೋಪಾಲ್ ಇಂಚಲ, ತಮ್ಮಣ್ಣ ಡಂಗಿ, ಆನಂದ ಹಟ್ಟಿ, ಸದುಗೌಡ ಪಾಟೀಲ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಗೋಪಾಲ ಇರಗರ,ಶಿಕ್ಷಕ ಆನಂದ ರಾಠೋಡ ಸೇರಿದಂತೆ ಇತರರಿದ್ದರು.

ಸರಕಾರಿ ಪ್ರೌಢಶಾಲೆಯ(ಆರ್‌ಎಂ ಎಸ್ ಎ) ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಸಚಿವ ಆರ್.ಬಿ. ತಿಮ್ಮಾಪುರ ಉದ್ಘಾಟಿಸಿದರು.

ಇಳಕಲ್‌ನಲ್ಲಿ ರೋಜಾ ವ್ರತಾಚರಿಸಿದ ಮಕ್ಕಳು

ಇಳಕಲ್: ನಗರದ 8 ವರ್ಷದ ಬಾಲಕಿ ಇಕ್ರಾ ನಬಿರಸೂಲ ಹುಣಚಗಿ ಪವಿತ್ರ ರಮಜಾನ್ ಹಬ್ಬದ ಪ್ರಯುಕ್ತ 5 ದಿನ ಉಪವಾಸ ವ್ರತವನ್ನು ಕೈಗೊಂಡು ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ.

ಅದರಂತೆ ನಗರದ ಪಂಚಲಿಂಗೇಶ್ವರ ಬಡಾವಣೆಯ 5 ವರ್ಷದ ಸರದಫ್ರಾಜ್ ಇಮಾಮ ಹುಸೇನ್ ಮಲ್ಲಾ ಒಂದು ದಿನದ ಉಪವಾಸ ಆಚರಿಸಿದ್ದಾನೆ ಹಾಗೂ ಟೀಸ್ಸ್ ಕಾಲೋನಿ ಪಕ್ಕದ ಶ್ರೀನಗರ ಬಡಾವಣೆಯ 6 ವರ್ಷದ ಜಾಸ್ಮೀನ್ ಮರದಾನ್ ಇಟಗಿ 2 ದಿನದ ಉಪವಾಸ ವ್ರತ ಆಚರಿಸಿದ್ದಾಳೆ. ಮತ್ತು ಲಂಪೂರ ಪೇಟೆಯ 7 ವರ್ಷದ ಅರ್ಫಾ ರಿಯಾಜ್ ಇಟಗಿ 4 ದಿನಗಳ ಉಪವಾಸ ವ್ರತ ಆಚರಿಸಿದ್ದಾಳೆ. ರೋಜಾ ವ್ರತಾಚರಿಸ್ಥಿಳೀ ಎಲ್ಲ ಪುಟಾಣಿಗಳಿಗೆ ಅವರ ಪರಿವಾರದವರು ಹಾಗೂ ತಂದೆ ತಾಯಿ ಸೇರಿದಂತೆ ಕುಟುಂಬದ ಸದಸ್ಯರು ಹಾಗೂ ಆಪ್ತರು ಶುಭ ಹಾರೈಸಿದ್ದಾರೆ.

ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ ಉಪವಾಸ ಆಚರಿಸಿದ ಪುಟ್ಟ ಮಕ್ಕಳು.

ಹಿಂದೂ ಸಮಾಜ ಸಂಘಟಿಸುವ ಕೆಲಸವಾಗಲಿ

ಗುಳೇದಗುಡ್ಡ: ಜಾತಿ ಹೆಸರಿನಲ್ಲಿ ವಿಘಟಿತವಾಗುತ್ತಿರುವ ಹಿಂದೂ ಸಮಾಜವನ್ನು ಸಂಘಟಿಸುವ ಕೆಲಸವಾಗಬೇಕು. ಹಿಂದೂ ಸಮಾಜ ಒಗ್ಗಟ್ಟಾದಾಗ ಮಾತ್ರ ಹಿಂದೂ ಶಕ್ತಿ ನಿರ್ಮಾಣವಾಗುತ್ತದೆ. ಆಗ ನಮ್ಮ ರಾಷ್ಟ್ರ ಹಿಂದೂ ರಾಷ್ಟ್ರವಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಳ್ಳಾರಿ ಪ್ರಾಂತಕಾರ್ಯಕಾರಣಿ ಸದಸ್ಯ ಗೋಪಿಜಿ ಹೇಳಿದರು.

ಅವರು ಪಟ್ಟಣದಲ್ಲಿ ನಡೆದ ಹಿಂದೂ ಸಂಚಾಲನಾ ಸಮಿತಿ ವತಿಯಿಂದ ಪಟ್ಟಣದ ಭಂಡಾರಿ ಕಾಲೇಜಿನ ಮೈದನದಲ್ಲಿ ಹಮ್ಮಿಕೊಂಡಿದ್ದ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿ, ಜಗತ್ತಿಗೆ ಧರ್ಮ,ಸಂಸ್ಕೃತಿ, ಪುಣ್ಯದ ಕಲ್ಪನೆಯನ್ನು ಕೊಟ್ಟಿದ್ದೇ ಭಾರತ. ಮನುಷ್ಯ ಯಾವರೀತಿ ಬದುಕಬೇಕು ಎಂದು ಜಗತ್ತಿಗೆ ಹೇಳಿಕೊಟ್ಟ ದೇಶ ನಮ್ಮದು ಎಂದರು.

ಕಾಡಸಿದ್ದೇಶ್ವರ ಶ್ರೀಗಳು ಸಾನಿಧ್ಯವಹಿಸಿ ಮಾತನಾಡಿ, ನಮ್ಮ ಸಂಸ್ಕೃತಿ, ಸಂಪ್ರದಾಯಾಗಳನು ಉಳಿಸಿ ಬೆಳೆಸಬೇಕು. ಈ ನಿಟ್ಟಿನಲ್ಲಿ ಹಿಂದೂಗಳು ಒಗ್ಗಟ್ಟಾಗಿ ನಮ್ಮ ಸಂಪ್ರದಾಯ, ಅಚರಣೆ, ಉತ್ಸವಗಳನ್ನು ಆಚರಿಸುವ ಮೂಲಕ ಮುಂದಿನ ಪೀಳಿಗೆಗೆ ನಮ್ಮ ಶ್ರೀಮಂತ ಸಂಸ್ಕೃತಿಯನ್ನು ತಲುಪಿಸಬೇಕು ಎಂದು ಹೇಳಿದರು.

ಗುರುಸಿದ್ದೇಶ್ವರ ಬ್ರಹನ್ಮಠದ ಬಸವರಾಜ ಪಟ್ಟದಾರ್ಯ ಶ್ರೀಗಳು ಮಾತನಾಡಿದರು. ಹಿಂದೂ ಸಮ್ಮೇಳನ ಸಂಚಾಲನ ಸಮಿತಿಯ ಅಧ್ಯಕ್ಷ ಅಶೋಕ ಹೆಗಡೆ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕರಾದ ಎಂ. ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಸಂಪತಕುಮಾರ್‌ರಾಠಿ, ರಂಗಪ್ಪ ಶೇಬಿನಕಟ್ಟಿ, ಪಿ.ಎನ್. ಪವಾರ, ಸಂಜಯ್ ಕಾರಕೂನ, ಮಲ್ಲಿಕಾರ್ಜುನ ಶೀಲವಂತ. ಅಮಾತೆಪ್ಪ ಕೊಪ್ಪಳ, ಮಧುಸೂಧನ ರಾಂದಡ, ವಿವೇಕಾನಂದ ದೇವಾಂಗಮಠ, ವಿಠ್ಠಲ ಪತ್ತಾರ, ರವಿ ಶೇಬಿನಕಟ್ಟಿ, ಬಸವರಾಜ ಕುಂಬಾರ, ಭುವನೇ ಪೂಜಾರ, ಸಂಗಣ್ಣ ಹುನಗುಂದ, ಶಂಕರಪ್ಪ ರೂಡಗಿ, ಮಹಾದೇವ ಜಗತಾಪ, ಶಿವು ಬಾದವಾಡಗಿ, ಶಿವಕುಮಾರ ಅಚನೂರ, ಈರಣ್ಣ ಬಂಡಿವಡ್ಡರ, ಈರಣ್ಣ ಬಂಡಿ, ಮಹೇಶ ಸೂಳಿಭಾವಿ, ಪ್ರಶಾಂತ ಜವಳಿ ಸೇರಿದಂತೆ ಸಮ್ಮೇಳನ ಸಂಚಲನ ಸಮಿತಿಯ ಸರ್ವ ಸದಸ್ಯರು, ಎಲ್ಲ ಸಮಾಜದ ಗಣ್ಯರು, ಹಿರಿಯರು ಪಾಲ್ಗೊಂಡಿದ್ದರು.

ಗುಳೇದಗುಡ್ಡ ಪಟ್ಟಣದಲ್ಲಿ ನಡೆದ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಳ್ಳಾರಿ ಪ್ರಾಂತಕಾರ್ಯಕಾರಣಿ ಸದಸ್ಯ ಗೋಪಿಜಿ ಮಾತನಾಡಿದರು.

> **ಇಚ್ಛಾಶಕ್ತಿ ಇದ್ದರೆ ಯಾವುದೂ ಅಸಾಧ್ಯವಲ್ಲ**
> **ಕೊಟೆಕಲ್ ಹೊಳೆಹುಚ್ಚೇಶ್ವರ ಶ್ರೀಗಳು ಮಾತನಾಡಿ, ನಾವು ನಮ್ಮ ಸಂಸ್ಕೃತಿ, ಪರಂಪರೆಯನ್ನುಅನುಕರಣೆ ಮಾಡದೇ ಮರೆತಿರುವುದಕ್ಕೆ ಇಂದು ಹಿಂದೂಗಳು ಜಾಗೃತವಾಗುವಂತಾಗಬೇಕಿದೆ. ನಾವು ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಅನುಕರಣೆ ಮಾಡಿ ಪಾಲಿಸಬೇಕು. ನಮ್ಮಲ್ಲಿ ಇಚ್ಛಾಶಕ್ತಿಯ ಕೊರತೆಇದೆ. ಇಚ್ಛಾಶಕ್ತಿ ಇದ್ದರೆ ಯಾವುದೂ ಅಸಾಧ್ಯವಲ್ಲ ಎಂದು ಹೇಳಿದರು.**

ಪರೀಕ್ಷೆ: 1005 ವಿದ್ಯಾರ್ಥಿಗಳು ಹಾಜರು

ಇಳಕಲ್: ಮಾ. 18ರಿಂದ ರಾಜ್ಯಾದ್ಯಂತ ಎಸ್.ಎಸ್.ಎಲ್.ಸಿ ಪರೀಕ್ಷೆ ಆರಂಭಗೊಂಡಿವೆ. ಅದರಂತೆ ಇಳಕಲ್ ನಗರದ ಮೂರು ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 1005 ವಿದ್ಯಾರ್ಥಿ,ವಿದ್ಯಾರ್ಥಿನಿಯರು ಮೊದಲ ದಿನದ ಪರೀಕ್ಷೆಗೆ ಹಾಜರಾದರು.

ನಗರದ ಎಸ್.ಆರ್.ಕಂಠಿ ಬಾಲಿಕೆಯರ ಪ್ರೌಢ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ 241 ಬಾಲಕರು, 248 ಬಾಲಿಕೆಯರು ಹಾಜರಾಗಿದ್ದು ಅದರಲ್ಲಿ ಕನ್ನಡ ಮಾಧ್ಯಮದ 412, ಆಂಗ್ಲ ಮಾಧ್ಯಮದ 67 ಹಾಗೂ ಉರ್ದು ಮಾಧ್ಯಮದ 19 ಸೇರಿ ಒಟ್ಟು 298 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಅದರಂತೆ ಎಸಿಓ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ 146 ಬಾಲಕರು, 149 ಬಾಲಿಕೆಯರು ಹಾಜರಾಗಿದ್ದು ಅದರಲ್ಲಿ ಕನ್ನಡ ಮಾಧ್ಯಮದ 256, ಆಂಗ್ಲ ಮಾಧ್ಯಮದ 27 ಹಾಗೂ ಉರ್ದು ಮಾಧ್ಯಮದ 9 ಸೇರಿ ಒಟ್ಟು 292 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಅಲ್ಲದೆ ಮೂರನೇ ಪರೀಕ್ಷಾ ಕೇಂದ್ರ ಚಿತ್ತರಗಿ ವಿಜಯಮಹಾಂತೇಶ ಪ್ರೌಢ ಶಾಲೆಯಲ್ಲಿ (ಸಿಎಸ್ವಿಎಂ) 208 ಬಾಲಕರು, 207 ಬಾಲಿಕೆಯರು ಹಾಜರಾಗಿದ್ದು ಅದರಲ್ಲಿ ಕನ್ನಡ ಮಾಧ್ಯಮದ 357, ಆಂಗ್ಲ ಮಾಧ್ಯಮದ 46 ಹಾಗೂ ಉರ್ದು ಮಾಧ್ಯಮದ 12 ಸೇರಿ ಒಟ್ಟು 415 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ನಗರದ ಮೂರು ಪರೀಕ್ಷಾ ಕೇಂದ್ರಗಳಲ್ಲಿ ಶಾಂತಯುತವಾಗಿ ಪರೀಕ್ಷೆಗಳು ನಡೆದಿದ್ದು ಅಧಿಕಾರಿಗಳು ಕೇಂದ್ರಗಳಿಗೆ ಭೇಟಿ ನೀಡಿದರು.

ಇಳಕಲ್ ನಗರದ ಮೂರು ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಅಧಿಕಾರಿಗಳ ದಾಳಿ : 13 ಗೃಹ ಬಳಕೆ ಸಿಲಿಂಡರ್ ವಶ

ಹುನಗುಂದ: ಮಧ್ಯ ಪ್ರಾಚ್ಯ ದೇಶಗಳಾದ ಅಮೇರಿಕಾ, ಇಸ್ರೇಲ್ ಹಾಗೂ ಇರಾನ್ ಮಧ್ಯ ನಿರಂತರವಾಗಿ ನಡೆಯುತ್ತಿರುವ ಯುದ್ದದಿಂದ ಗ್ಯಾಸ್ ಸಿಲೆಂಡರ್‌ಸಮಸ್ಯೆ ಯ ಸುದ್ದಿ ವಿಧಾನಸಭಾ ಅಧಿವೇಶನ ಸೇರಿದಂತೆ ಇಡೀ ರಾಜ್ಯಾದ್ಯಂತ ಸದ್ದು ಮಾಡು ತ್ತಿರುವ ಬೆನ್ನಲ್ಲೇ ಹುನಗುಂದ ಆಹಾರ ಇಲಾಖೆಯ ಶಿರಸ್ತೇದಾರ ಎಸ್.ಎಂ.ಬಡ್ಡಿ ಅವರ ನೇತೃತ್ವದ ತಂಡ ಪಟ್ಟಣದ ವಿವಿಧ ಹೊಟೇಲ್, ಬೇಕರಿ, ದಾಬಾಗಳ ಮೇಲೆ ದಿಢೀರ್‌ದಾಳಿ ಮಾಡಿ ನಿಯಮ ಬಾಹಿರವಾಗಿ ಗೃಹಬಳಕೆ ಸಿಲಿಂಡರ್ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿರುವುದು ಪತ್ತೆಯಾಗಿದ್ದು. 13 ಗೃಹ ಉಪಯೋಗಿ ಸಿಲೆಂಡ ರ್ಗಳನ್ನು ಅಧಿಕಾರಿಗಳು ತಮ್ಮ ವಶಪಡಿಸಿ ಕೊಂಡಿದ್ದಾರೆ. ಅಕ್ರಮ ಗೃಹ ಬಳಕೆ ಸಿಲೆಂಡ ರಗಳನ್ನು ಬಳಸುತ್ತಿದ್ದ ಹೋಟೆಲ್ ದಾಬಾ ಮತ್ತು ಬೇಕರಿಗಳಿಂದ ವಶಪಡಿಸಿಕೊಂಡ 13 ಸಿಲೆಂಡರ್‌ಬಗ್ಗೆ ಆಹಾರ ಇಲಾಖೆಯ ಅಧಿಕಾರಿಗಳು ಬಾಗಲಕೋಟ ಉಪವಿಭಾ ಗಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದು.ಮುಂದೆ ಉಪವಿಭಾಗಾಧಿಕಾರಿಗಳು ಇದರ ಕುರಿತು ವಿಚಾರಣೆ ನಡೆಸಿ ದಂಡ ಮತ್ತು ಶಿಕ್ಷೆಯ ನಿರ್ಧಾರವನ್ನು ತಗೆದುಕೊಳ್ಳಲಿದ್ದಾರೆಂದು ಆಹಾರ ಇಲಾಖೆಯ ಆಹಾರ ನಿರೀಕ್ಷಕ ರಾಜಶೇಖರ ತುಂಬಗಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಆರು ಇಲಾಖೆ ಆಹಾರ ನಿರೀಕ್ಷಕ ಎಸ್.ಪಿ. ಹೊರಗಿನಮಠ, ಸಿಬ್ಬಂದಿ ಆನಂದ ನಿಡಗುಂದಿ ಸೇರಿದಂತೆ ಅನೇಕರು ಇದ್ದರು.

ಹುನಗುಂದ ಆಹಾರ ಇಲಾಖೆಯ ಶಿರಸ್ತೇದಾರ ಎಸ್.ಎಂ.ಬಡ್ಡಿ ಅವರ ನೇತೃತ್ವದ ತಂಡ ಪಟ್ಟಣದ ವಿವಿಧ ಹೊಟೇಲ್, ಬೇಕರಿ, ದಾಬಾಗಳ ಮೇಲೆ ದಿಢೀರ್‌ದಾಳಿ ನಡೆಸಿದರು.

> **ಸಿಲಿಂಡರ್ ಸಿಗದೆ ಗ್ರಾಹಕರ ಪರದಾಟ**
> **ಯುದ್ದ ಹಿನ್ನಲೆಯಲ್ಲಿ ಕಳೆದ ಒಂದು ವಾರಗಳಿಂದ ದೇಶಾದ್ಯಂತ ಮತ್ತು ರಾಜ್ಯಾದ್ಯಂತ ಎಲ್ಪಿಜಿ ಮತ್ತು ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಾಸ ಕಂಡು ಬರುತ್ತಿದೆ ಎನ್ನುವ ವದಂತಿ ಎದ್ದಿದ್ದು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಎಲ್ಪಿಜಿ ಮತ್ತು ಅಡುಗೆ ಅನಿಲ ನಮ್ಮಲ್ಲಿ ಅಭಾವವಿಲ್ಲ ಎಂದು ಎಷ್ಟೇ ಅಭಯವನ್ನು ನೀಡಿದರೂ ಕೂಡಾ ಸಿಲೆಂಡರ್ ಗ್ರಾಹಕರಲ್ಲಿ ಮಾತ್ರ ಆತಂಕ ಮನೆಮಾಡಿದ್ದು.ಸಿಲೆಂಡರ ಸಿಗೋದಿಲ್ಲ ಎನ್ನುವ ಆತಂಕದಲ್ಲಿ ಸಿಲೆಂಡರಗಾಗಿ ಗ್ರಾಹಕರು ಸಿಲೆಂಡರ್‌ಬುಕಿಂಗ್ ಮಾಡಲು ಮುಂದಾದರೇ ಅದು ಕೂಡಾ ಸರಿಯಾದ ಸಮಯಕ್ಕೆ ಆಗದಿರುವುದರಿಂದ ಗ್ರಾಹಕರಲ್ಲಿ ಮತ್ತಷ್ಟು ಆತಂಕ ಮೂಡಿದೆ.**

ಹಿಂದೂ ಸಮಾಜ ಒಗ್ಗೂಡಿದರೆ ಹಿಂದೂ ಶಕ್ತಿ ನಿರ್ಮಾಣ

ಗುಳೇದಗುಡ್ಡ: ಜಾತಿ ಹೆಸರಿನಲ್ಲಿ ವಿಘಟಿತವಾಗುತ್ತಿರುವ ಹಿಂದೂ ಸಮಾಜವನ್ನು ಸಂಘಟಿಸುವ ಕೆಲಸವಾಗಬೇಕು. ಹಿಂದೂ ಸಮಾಜ ಒಗ್ಗಟ್ಟಾದಾಗ ಮಾತ್ರ ಹಿಂದೂ ಶಕ್ತಿ ನಿರ್ಮಾಣವಾಗುತ್ತದೆ. ಆಗ ನಮ್ಮ ರಾಷ್ಟ್ರ ಹಿಂದೂರಾಷ್ಟ್ರವಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಳ್ಳಾರಿ ಪ್ರಾಂತಕಾರ್ಯಕಾರಣಿ ಸದಸ್ಯ ಗೋಪಿ ಜಿ ಹೇಳಿದರು. ಅವರು ಪಟ್ಟಣದಲ್ಲಿ ನಡೆದ ಹಿಂದೂ ಸಂಚಾಲನಾ ಸಮಿತಿ ವತಿಯಿಂದ ಪಟ್ಟಣದ ಭಂಡಾರಿ ಕಾಲೇಜಿನ ಮೈದನದಲ್ಲಿ ಹಮ್ಮಿಕೊಂಡಿದ್ದ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿ, ಜಗತ್ತಿಗೆ ಧರ್ಮ,ಸಂಸ್ಕೃತಿ, ಪುಣ್ಯದ ಕಲ್ಪನೆಯನ್ನು ಕೊಟ್ಟಿದ್ದೇ ಭಾರತ. ಮನುಷ್ಯ ಯಾವರೀತಿ ಬದುಕಬೇಕು ಎಂದು ಜಗತ್ತಿಗೆ ಹೇಳಿಕೊಟ್ಟ ದೇಶ ನಮ್ಮದು ಎಂದರು.

ಹಿಂದೂ ಜಾತಿ ಸೂಚಕವಲ್ಲ, ಹಿಂದೂ ಜೀವನ ಪದ್ದತಿ. ಎಲ್ಲರನ್ನು ಆತ್ಮೀಯರನ್ನಾಗಿ, ಭಗವಂತನ ಅಂಶ ಎಂದು ಕಾಣುತ್ತಾನೋ ಅವನು ಹಿಂದೂ. ತನ್ನ ಬದುಕನ್ನು ಇಡೀ ಸಮಾಜಕ್ಕೆ, ಪ್ರಕೃತಿಗೆ ಮೀಸಲು ಎನ್ನುವುದು ಹಿಂದೂಗಳ ಗುಣ. ಬದುಕಿನಲ್ಲಿ ಸೇವೆ ಮತ್ತು ತ್ಯಾಗದ ಭಾವವಿಟ್ಟುಕೊಂಡು ಬದುಕುವವನು ಯಾವುದೇ ದೇಶದಲ್ಲಿರಲಿ ಅವನು ಹಿಂದೂ ಎಂದರು.

ಕಾಡಸಿದ್ದೇಶ್ವರ ಶ್ರೀಗಳು ಸಾನಿಧ್ಯವಹಿಸಿ ಮಾತನಾಡಿ, ನಮ್ಮ ಸಂಸ್ಕೃತಿ, ಸಂಪ್ರದಾಯಾಗಳನು ಉಳಿಸಿ ಬೆಳೆಸಬೇಕು. ಈ ನಿಟ್ಟಿನಲ್ಲಿ ಹಿಂದೂಗಳು ಒಗ್ಗಟ್ಟಾಗಿ ನಮ್ಮ ಸಂಪ್ರದಾಯ, ಅಚರಣೆ, ಉತ್ಸವಗಳನ್ನು ಆಚರಿಸುವ ಮೂಲಕ ಮುಂದಿನ ಪೀಳಿಗೆಗೆ ನಮ್ಮ ಶ್ರೀಮಂತ ಸಂಸ್ಕೃತಿಯನ್ನು ತಲುಪಿಸಬೇಕು ಎಂದು ಹೇಳಿದರು.

ಕೊಟೆಕಲ್ ಹೊಳೆಹುಚ್ಚೇಶ್ವರ ಶ್ರೀಗಳು ಮಾತನಾಡಿ, ನಾವು ನಮ್ಮ ಸಂಸ್ಕೃತಿ, ಪರಂಪರೆಯನ್ನುಅನುಕರಣೆ ಮಾಡದೇ ಮರೆತಿರುವುದಕ್ಕೆ ಇಂದು ಹಿಂದೂಗಳು ಜಾಗೃತವಾಗುವಂತಾಗಬೇಕಿದೆ. ನಾವು ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಅನುಕರಣೆ ಮಾಡಿ ಪಾಲಿಸಬೇಕು. ನಮ್ಮಲ್ಲಿ ಇಚ್ಛಾಶಕ್ತಿಯ ಕೊರತೆಇದೆ.ಇಚ್ಛಾಶಕ್ತಿ ಇದ್ದರೆ ಯಾವುದೂ ಅಸಾಧ್ಯವಲ್ಲ ಎಂದು ಹೇಳಿದರು.

ಗುರುಸಿದ್ದೇಶ್ವರ ಬ್ರಹನ್ಮಠದ ಬಸವರಾಜ ಪಟ್ಟದಾರ್ಯ ಶ್ರೀಗಳು ಮಾತನಾಡಿದರು. ಹಿಂದೂ ಸಮ್ಮೇಳನ ಸಂಚಾಲನ ಸಮಿತಿಯ ಅಧ್ಯಕ್ಷ ಅಶೋಕ ಹೆಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕರಾದ ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಸಂಪತಕುಮಾರ್‌ರಾಠಿ, ರಂಗಪ್ಪ ಶೇಬಿನಕಟ್ಟಿ, ಪಿ.ಎನ್. ಪವಾರ, ಸಂಜಯ್ ಕಾರಕೂನ, ಮಲ್ಲಿಕಾರ್ಜುನ ಶೀಲವಂತ. ಅಮಾತೆಪ್ಪ ಕೊಪ್ಪಳ, ಮಧುಸೂಧನ ರಾಂದಡ, ವಿವೇಕಾನಂದ ದೇವಾಂಗಮಠ, ವಿಠ್ಠಲ ಪತ್ತಾರ, ರವಿ ಶೇಬಿನಕಟ್ಟಿ, ಬಸವರಾಜ ಕುಂಬಾರ, ಭುವನೇಶ ಪೂಜಾರ, ಸಂಗಣ್ಣ ಹುನಗುಂದ, ಶಂಕರಪ್ಪ ರೂಢಗಿ, ಮಹಾದೇವ ಜಗತಾಪ, ಶಿವು ಬಾದವಾಡಗಿ, ಶಿವಕುಮಾರ ಅಚನೂರ, ಈರಣ್ಣ ಬಂಡಿವಡ್ಡರ, ಈರಣ್ಣ ಬಂಡಿ, ಮಹೇಶ ಸೂಳಿಭಾವಿ, ಪ್ರಶಾಂತ ಜವಳಿ ಸೇರಿದಂತೆ ಸಮ್ಮೇಳನ ಸಂಚಲನ ಸಮಿತಿಯ ಸರ್ವ ಸದಸ್ಯರು, ಎಲ್ಲ ಸಮಾಜದ ಗಣ್ಯರು, ಹಿರಿಯರು, ಮುಖಂಡರು ಪಾಲ್ಗೊಂಡಿದ್ದರು.

ಗುಳೇದಗುಡ್ಡ ಪಟ್ಟಣದಲ್ಲಿ ನಡೆದ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಳ್ಳಾರಿ ಪ್ರಾಂತಕಾರ್ಯಕಾರಣಿ ಸದಸ್ಯ ಗೋಪಿಜಿ ಮಾತನಾಡಿದರು.

ಬಾಗಲಕೋಟೆ ವಿಧಾನಸಭೆ ಕ್ಷೇತ್ರದ ಉಪಚುನಾವಣೆಯ ಹಿನ್ನಲ್ಲೆಯಲ್ಲಿ ಗುಳೇದಗುಡ್ಡ ಸಮೀಪದ ಹಳದೂರು ಕ್ರಾಸ್ ನಲ್ಲಿ ಚೆಕ್‌ಪೋಸ್ಟ್ ನಿರ್ಮಿಸಲಾಗಿದ್ದು, ಬುಧವಾರ ಎಸ್ ಎಸ್‌ಐ ಸಿದ್ದಣ್ಣವರ, ಅರ್ಜುನ ಗುಳೇದಗುಡ್ಡ, ಬಿ.ಕೆ. ಭಾವಿ, ಪಾಂಡು ಸಿ. ವಾಹನಗಳನ್ನು ತಪಾಸಣೆ ಮಾಡಿದರು.

ಪುನೀತ್ ಹುಟ್ಟುಹಬ್ಬ: ಮಕ್ಕಳಿಗೆ ಸಿಹಿ ವಿತರಣೆ

ರಟ್ಟೀಹಳ್ಳಿ: ತಾಲೂಕಿನ ಕಣವಿಸಿದ್ಗೇರಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಡಾ. ಪುನೀತ ರಾಜಕುಮಾರ ಸ್ವಯಂ ಸೇವಾ ಸಂಸ್ಥೆ ಆಶ್ರಯದಲ್ಲಿ ಪುನೀತ ರಾಜಕುಮಾರ ಜನ್ಮ ದಿನವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಿ ಎಲ್ಲ ಮಕ್ಕಳಿಗೆ ಸಿಹಿ ವಿತರಿಸಲಾಯಿತು.

ಡಾ. ಪುನೀತ ರಾಜಕುಮಾರ ಸ್ವಯಂ ಸೇವಾ ಸಂಸ್ಥೆಯ ಅಧ್ಯಕ್ಷ ರಾಜು ಬಟ್ಲಕಟ್ಟಿ ಮಾತನಾಡಿ, ಸಂಸ್ಥೆಯು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಾಂಸ್ಕೃತಿಕ ಗ್ರಾಮೀಣಾಭಿವೃದ್ಧಿ ಸಂಸ್ಥೆಯಾಗಿದ್ದು ಅನೇಕ ಸಾಮಾಜಿಕ ಕಾರ್ಯದಲ್ಲಿ ತೊಡಗಿದೆ. ಗ್ರಾಮದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. ಇತ್ತೀಚೆಗೆ ಗ್ರಾಮದ ಶಿದ್ಲಿಂಗಪ್ಪ ಭಾನುವಳ್ಳಿ ಇವರ ದನದ ಕೊಟ್ಟಿಗೆ ಆಕಸ್ಮಿಕ ಬೆಂಕಿ ಬಿದ್ದು 2 ಎತ್ತು, 4 ಆಕಳುಗಳು ಸಾವನ್ನಪ್ಪಿದ್ದು ಮಾಲೀಕರಿಗೆ ಸಂಸ್ಥೆಯ ವತಿಯಿಂದ ಧನ ಸಹಾಯ ನೀಡಲಾಗುತ್ತಿದೆ ಎಂದರು.

ಗ್ರಾಪಂ ಪಿಡಿಒ ರಮು ಆಲದಕಟ್ಟಿ ಮಾತನಾಡಿ, ಈ ಸಂಸ್ಥೆ ಕೇವಲ ಒಂದು ಸಂಸ್ಥೆಯಾಗಿರದೆ ಅನಾಥಾಶ್ರಮಕ್ಕೂ ಅನೇಕ ದೇಣಿಗೆಗಳನ್ನು ನೀಡುವ ಮೂಲಕ ನೆರವಿನ ಹಸ್ತ ಚಾಚಿದೆ. ಸಂಸ್ಥೆಯ ಪದಾಧಿಕಾರಿಗಳ ಆದರ್ಶಗಳು ಮಕ್ಕಳಲ್ಲಿ ಬೆಳೆಯಬೇಕಾಗಿದೆ ಎಂದರು.

ಮುಖ್ಯಶಿಕ್ಷಕ ವಿ.ಆರ್.ಪೂಜಾರ ಮಾತನಾಡಿ, ಗ್ರಾಮದ ಈ ಸಂಸ್ಥೆ ನಮ್ಮ ಶಾಲೆಯ ಮಕ್ಕಳಿಗೂ ಅನೇಕ ರೀತಿಯ ಸಹಾಯ ಹಸ್ತ ನೀಡುತ್ತಾ ಬಂದಿದೆ. ಶಾಲೆಯ ಅಭಿವೃದ್ಧಿಗೂ ಕೈ ಜೋಡಿಸಿದೆ. ಪ್ರತಿ ಗ್ರಾಮದಲ್ಲಿ ಇಂತಹ ಒಂದೊಂದು ಸಂಸ್ಥೆ ಇದ್ದರೆ ಆ ಗ್ರಾಮ ಅಭಿವೃದ್ಧಿಯಾಗಲು ನೆರವಾಗುತ್ತದೆ ಎಂದರು.

ಮಂಜುನಾಥ ಕರಿಯಣ್ಣನವರ, ಸರಸ್ವತಿ ಕರಿಯಣ್ಣನವರ, ಮಂಜಮ್ಮ ಸಿದ್ದಪ್ಪ ಮಾಳಮ್ಮನವರ, ರೇವಣಸಿದ್ದಪ್ಪ ಕರಿಯಣ್ಣನವರ, ಕೆ.ಮಹಂತೇಶ, ಗೀತಾ ಸಿವಪ್ಪ ನಾಯಕ, ಭರಮಗೌಡ ಶಿವಪ್ಪ ಕೋಟಿಹಾಳ, ಕುಮಾರ ಹರಿಜನ. ಮಂಜುನಾಥ ಎತ್ತಿನಹಳ್ಳಿ, ಶಾಲಾ ಸಮಿತಿ ಸದಸ್ಯರು, ಶಿಕ್ಷಕ ವೃಂದ ಉಪಸ್ಥಿತರಿದ್ದರು.

ಕಣವಿಸಿದ್ಗೇರಿ ಗ್ರಾಮದ ಸರಕಾರಿ ಶಾಲೆಯಲ್ಲಿ ಡಾ. ಪುನೀತ ರಾಜಕುಮಾರ ಸ್ವಯಂ ಸೇವಾ ಸಂಸ್ಥೆಯಿಂದ ಪುನೀತ ರಾಜಕುಮಾರ ಜನ್ಮ ದಿನ ಆಚರಿಸಲಾಯಿತು.

ಬೆಣ್ಣೆಹಳ್ಳ ನೆರೆ ತಡೆಗೋಡೆ ಯೋಜನೆ, ಶಾಶ್ವತ ಪರಿಹಾರಕ್ಕೆ ಚಾಲನೆ

ನವಲಗುಂದ ಕ್ಷೇತ್ರದಲ್ಲಿ ಅಭಿವೃದ್ಧಿ ಮನ್ವಂತರ | ಶಾಸಕ ಎನ್.ಎಚ್.ಕೋನರಡ್ಡಿಯವರ ಅವಿರತ ಸಾಧನೆ

ವಿಶ್ವವಾಣಿ ಸುದ್ದಿಮನೆ, ಧಾರವಾಡ

ಜಿಲ್ಲೆಯ ನವಲಗುಂದ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಮಹಾಪರ್ವ ಸುರುವಾಗಿದೆ. ಚಕ್ಕಡಿ ರಸ್ತೆಯಿಂದ ಹಿಡಿದು ಅಗತ್ಯವಿರುವ ಅಭಿವೃದ್ಧಿ ಕಾರ್ಯಗಳು ಭರದಿಂದ ಸಾಗಿವೆ. ಉತ್ತರ ಕರ್ನಾಟಕ ಸಮಸ್ಯೆಗಳಲ್ಲಿ ಒಂದಾಗಿರುವ ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ-ತಡೆಗೋಡೆ ನಿರ್ಮಾಣ ಯೋಜನೆಗೆ ಅಧಿಕೃತವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚಾಲನೆ ನೀಡಿದ್ದು, ರೈತ ವರ್ಗದಲ್ಲಿ ಸಂತಸ ಮೂಡಿಸಿದೆ.

ಈ ಬೆಣ್ಣೆಹಳ್ಳ ಹಾವೇರಿ ಜಿಲ್ಲೆ ಶಿಗ್ಗಾಂವ ತಾಲೂಕಿನ ಧುಂಡಸಿ ಹತ್ತಿರ ಉಗಮವಾಗಿ ಧಾರವಾಡ ಜಿಲ್ಲೆಯ ಕುಂದಗೋಳ, ಹುಬ್ಬಳ್ಳಿ, ನವಲಗುಂದ ಹಾಗೂ ಗದಗ ಜಿಲ್ಲೆಯ ನರಗುಂದ ಮತ್ತು ರೋಣ ತಾಲೂಕಿನ ಮೆಣಸಗಿ ಗ್ರಾಮದ ಹತ್ತಿರ ಮಲಪ್ರಭಾ ನದಿ ಸೇರಿಕೊಳ್ಳುತ್ತದೆ. ಸದರಿ ಹಳ್ಳ 5048.00 ಚ.ಕಿ.ಮೀ ಜಲಾನಯನ ಪ್ರದೇಶ ಹೊಂದಿದ್ದು, ತುಪ್ಪರಿಹಳ್ಳ, ರಾಡಿಹಳ್ಳ, ಯರನಹಳ್ಳ, ಹಂದಿಗನಹಳ್ಳ, ಇರವಿಹಳ್ಳ, ಸವಳಹಳ್ಳ, ಗುಂಡೇನಹಳ್ಳ ಮತ್ತು ಹಿರೇಹಳ್ಳ ಬೆಣ್ಣೆಹಳ್ಳದ ಪ್ರಮುಖ ಉಪ ಹಳ್ಳಗಳಾಗಿರುತ್ತವೆ. ಬೆಣ್ಣೆಹಳ್ಳ ಮಳೆಗಾಲದಲ್ಲಿ ಹಳ್ಳದ ಬದಿ ಇರುವ ಗ್ರಾಮಗಳಲ್ಲಿ ಮಿಂಚು ಪ್ರವಾಹ ಉಂಟಾಗಿ ಧಾರವಾಡ ಹಾಗೂ ಗದಗ ಜಿಲ್ಲೆಯ 37 ಹಳ್ಳಿಗಳಲ್ಲಿ ಅಪಾರ ಪ್ರಮಾಣದ ಹಾನಿ ಉಂಟಾಗುತ್ತಾ ಬರುತ್ತಿತ್ತು.

ಶಿಫಾರಸ್ಸಿಗೆ ಸಮಿತಿ ರಚನೆ: ಬೆಣ್ಣೆಹಳ್ಳ ಪ್ರವಾಹದಿಂದ ಉಂಟಾಗುವ ಹಾನಿ ನಿಯಂತ್ರಿಸಲು ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆ ಯೋಜನೆಯಡಿ ಅನುದಾನ ಪಡೆದು ಕಾರ್ಯಗತಗೊಳಿಸುವುದಕ್ಕೆ ಸಲಹೆ/ಶಿಫಾರಸ್ಸನ್ನು ನೀಡಲು 09/04/2010ರಂದು ಜಲಸಂಪನ್ಮೂಲ ಇಲಾಖೆಯಿಂದ ನಿವೃತ್ತ ಅಧೀಕ್ಷಕ ಅಭಿಯಂತರ ಜಿ.ಎಸ್. ಪರಮಶಿವಯ್ಯ ಅಧ್ಯಕ್ಷತೆಯಲ್ಲಿ ಸದಸ್ಯರನ್ನಾಗಿ ಭಾರತಿಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಪ್ರೋ. ರಾಮಪ್ರಸಾದ, ಜಲಸಂಪನ್ಮೂಲ ಇಲಾಖೆಯ ಜಿಯೋಮೆಟಿಕ್ಸ್ ಕೇಂದ್ರದ ನಿವೃತ್ತ ನಿರ್ದೇಶಕ ಡಾ: ವೈ. ಲಿಂಗರಾಜು, ನಿವೃತ್ತ ಪ್ರಧಾನ ಮುಖ್ಯ ಇಂಜಿನೀಯರ್‌ಜೆ. ಆರ್.ಕೆ. ಕರಡಿ, ಜಲಸಂಪನ್ಮೂಲ ಇಲಾಖೆಯ ಅಧೀಕ್ಷಕ ಅಭಿಯಂತರ ಅನೀಲಕುಮಾರ, ಸರಕಾರದ ಜಲಸಂಪನ್ಮೂಲ ಇಲಾಖೆಯ ಮುಖ್ಯ ಇಂಜಿನೀಯರ್ ಅವರನ್ನು ಒಳಗೊಂಡ ಸಮಿತಿಯನ್ನು ಹಿಂದಿನ ಸರಕಾರದಲ್ಲಿ ರಚಿಸಲಾಯಿತು.

ಕೋನರಡ್ಡಿ ಸತತ ಪ್ರಯತ್ನ : ಬೆಣ್ಣೆಹಳ್ಳ ಪ್ರವಾಹದಿಂದಾಗಿ ಉಂಟಾಗುವ ಹಾನಿಯನ್ನು ನಿಯಂತ್ರಿಸಲು ಕೇಂದ್ರ ಸರಕಾರದ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆ ಯೋಜ ನೆಯಡಿ ವಿವರವಾದ ಯೋ ಜನಾ ವರದಿ ತಯಾರಿಸಿ ಅನುದಾನ ಪಡೆದು ಕಾರ್ಯಗತ ಗೊಳಿ ಸುವುದಕ್ಕೆ ನೇಮಿಸಿದ ಸಮಿತಿ ಯು 30/03/2012 ರಂದು ಸಮಗ್ರ ಅಧ್ಯಯನ ನಂತರ ಬೆಣ್ಣೆಹಳ್ಳದ



ವರದಿ ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಎನ್.ಹೆಚ್. ಕೋನರಡ್ಡಿಯವರು 2013 ರಿಂದ 2018 ರ ವರೆಗೆ ಶಾಸಕರಿದ್ದ ಅವಧಿಯಲ್ಲಿಯ ಯೋಜನೆ ಜಾರಿ ಮಾಡಲು ಪ್ರಯತ್ನಿಸಿದರು.

ರಾಜ್ಯ ವಿಪತ್ತು ಉಪಶಮನ ರಾಜ್ಯ ಕಾರ್ಯಕಾರಿ ಸಮಿತಿಯ 28/10/2013 ರ ನಡುವಳಿಯಂತೆ 125 ಕೋಟಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಬೆಣ್ಣೆಹಳ್ಳ ಹಾಗೂ ಮಲಪ್ರಭಾ ನದಿ ಪ್ರವಾಹ ನಿಯಂತ್ರಣ ಕಾಮಗಾರಿಗಳಿಗೆ 28.6 ಮತ್ತು 7 ಕೋಟಿ ಒಟ್ಟು 35.6 ಕೋಟಿ ಹಂಚಿಕೆ ಮಾಡಲಾಗಿರುತ್ತದೆ.

90 ಲಕ್ಷ ಅನುದಾನ ಬಿಡುಗಡೆ: ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿಗೆ ಜಿ.ಎಸ್. ಪರಮಶಿವಯ್ಯ ವರದಿಯನ್ನಾಧರಿಸಿ ಕೇಂದ್ರ ಜಲ ಆಯೋಗದ ಮಾರ್ಗಸೂಚಿಯಂತೆ ವಿವರವಾದ ವರದಿಯನ್ನು ತಯಾರಿಸಲು 2014ರಲ್ಲಿ ಎಸ್ಡಿಎಂಎಫ್ ಅಡಿ ಬೆಣ್ಣೆಹಳ್ಳ ಹಾಗೂ ಮಲಪ್ರಭಾ ನದಿ ಕಾಮಗಾರಿ ಕೈಗೊಳ್ಳಲು ನೀಡಿದ 35.6 ಕೋಟಿ ಅನುದಾನದಲ್ಲಿ 2013 ರಿಂದ 2018 ರಲ್ಲಿ ಎನ್. ಎಚ್. ಕೋನರಡ್ಡಿ ಶಾಸಕರಾಗಿದ್ದ ಅವಧಿಯಲ್ಲಿ 90 ಲಕ್ಷ ಅನುದಾನವನ್ನು ಪ್ರವಾಹ ನಿಯಂತ್ರಣ ಹಾಗೂ ಶಾಶ್ವತ ಪರಿಹಾರಕ್ಕಾಗಿ ಸಮಗ್ರವಾಗಿ ವಿವರವಾದ ಯೋಜನಾ (ಡಿ.ಪಿ.ಆರ್.)ನ್ನು ವರದಿ ತಯಾರಿಸಲು ಅನು ದಾನ ನೀಡಲಾಗಿ ರುತ್ತದೆ. ಅಂದಿನ ಜಲಸಂಪನ್ಮೂಲ ಸಚಿವರಾದ ಎಂ.ಬಿ. ಪಾಟೀಲರು 2017ರಲ್ಲಿ ಬೆಣ್ಣೆಹಳ್ಳ ಶಾಶ್ವತ ಪರಿಹಾರಕ್ಕಾಗಿ ಸಮೀಕ್ಷೆ ನಡೆಸಿ ಡಿಪಿಆರ್‌ತಯಾರಿಸಲು ಕರ್ನಾಟಕ ನೀರಾವರಿ ನಿಗಮದವರಿಗೆ ಸೂಚಿಸಿರುತ್ತಾರೆ.

ಯೋಜನೆ ಜಾರಿ ಯಶಸ್ವಿ : ಬೆಣ್ಣೆಹಳ್ಳದ ಪ್ರವಾಹ ನಿಯಂತ್ರಣ ಕಾಮಗಾರಿಗೆ ಕೇಂದ್ರ ಜಲ ಆಯೋಗದ ಮಾರ್ಗಸೂಚಿಗಳಿಂದ ಸಮಗ್ರವಾದ ಯೋಜನಾ ವರದಿಯನ್ನು ತಯಾರಿಸಲು ದಿನಾಂಕ: 11/12/2017 ರಂದು ಮೆ. ಇ.ಐ. ಟೆಕ್ನಾಲೋಜಿಸ್ ಪ್ರೈ. ಲಿ. ವಹಿಸಿಕೊಡಲಾಯಿತು. ಈ ವಿಷಯವಾಗಿ ನಂತರ ಬಂದ ಸರಕಾರ 2018 ರಿಂದ 2023 ರವರೆಗೆ ಈ ಯೋಜನೆ ಜಾರಿ ಮಾಡಲು ಯಾವುದೇ ಕ್ರಮ ಜರುಗಿಸಿರಲಿಲ್ಲ. ಎನ್.ಎಚ್. ಕೋನರಡ್ಡಿ 2023 ರಿಂದ ಮತ್ತೇ ಶಾಸಕರಾಗಿ ಇಲ್ಲಿಯವರೆಗೆ ಯೋಜನೆ ಜಾರಿ ಮಾಡಲು ಯಶಸ್ವಿಯಾಗಿದ್ದಾರೆ.

ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಲು 13/07/2023 ರಂದು ವ್ಯವಸ್ಥಾಪಕ ನಿರ್ದೇಶಕರು ಹಾಗೂ ನಿಗಮದ ಹಿರಿಯ ಅಧಿಕಾರಿಗಳೊಂದಿಗೆ ಬೆಣ್ಣೆಹಳ್ಳ ಹಾಗೂ ತುಪ್ಪರಿಹಳ್ಳ ಪ್ರವಾಹ ನಿಯಂತ್ರಣ ಯೋಜನೆಗೆ ಮಂಜೂರಾತಿ ಪಡೆಯಲು ಸಂಬಂಧಿಸಿದಂತೆ ಸಭೆ ಜರುಗಿಸಲಾಯಿತು.

ಈ ಯೋಜನೆಯಡಿ ಬೆಣ್ಣೆಹಳ್ಳದ ಕಿ.ಮೀ. 60 ರಿಂದ ಕಿ.ಮೀ. 125 ರ ನಡುವೆ ಅತೀ ಹೆಚ್ಚು ಪ್ರವಾಹ ಪೀಡಿತ ಪ್ರದೇಶದಲ್ಲಿ ಅತೀ ಅವಶ್ಯವಿರುವಲ್ಲಿ 1.05 ಕಿ.ಮೀ. ತಡೆಗೋಡೆ ಹಾಗೂ 7.15 ಕಿ.ಮೀ. ಏರಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಬೆಣ್ಣೆಹಳ್ಳದ ಕಿ.ಮೀ. 53.30 ರಿಂದ ಕಿ.ಮೀ. 148.00 ರ ನಡುವೆ ಅತೀ ಅವಶ್ಯವಿರುವಲ್ಲಿ 86 ಉಪಹಳ್ಳಗಳು ಕೂಡುವ ಸ್ಥಳದಲ್ಲಿ ಇಂಟಲ್ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿಯಲ್ಲಿ 148.00 ಕಿ.ಮೀ. ಬೆಣ್ಣೆಹಳ್ಳಕ್ಕೆ ಸುಮಾರು 180 ಉಪಹಳ್ಳಗಳು ಸೇರಿತ್ತಿದ್ದು. ಅವುಗಳಲ್ಲಿ ಮುಖ್ಯವಾದ ದೇಸಾಯಿಹಳ್ಳ, ಗುಂಡೇನಹಳ್ಳ ಮತ್ತು ಹಂದಿಗನಹಳ್ಳ 0.50 ಕಿ.ಮೀ. ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಹಳ್ಳದ ಪಾತ್ರದಲ್ಲಿ ಅತೀ ಅವಶ್ಯವಿರುವ ಭಾಗಗಳಲ್ಲಿ ಒಟ್ಟು 7 ಬಾಕ್ಸ್‌ಗಳ, 7 ವಿಯರ್‌ಗಳ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಯಮನೂರ ಆರತಿ ಯೋಜನೆ: ಬೆಣ್ಣೆಹಳ್ಳದ ಉಪಹಳ್ಳಗಳಾದ ಯರನಹಳ್ಳ, ರಾಡಿಹಳ್ಳ, ಹಂದಿಗನಹಳ್ಳ ಮುಂತಾದ ಇತರೇ ಉಪಹಳ್ಳಗಳ ಪ್ರವಾಹದಿಂದ ಉಂಟಾಗುವ ಹಾನಿ ನಿಯಂತ್ರಣಕ್ಕೆ ಹುಬ್ಬಳ್ಳಿ ಹಾಗೂ ನವಲಗುಂದ ತಾಲ್ಲೂಕಿನ ಒಟ್ಟು 12 ಪ್ರಮುಖ ಹಳ್ಳಗಳ ಸುಮಾರು 60 ಕೀ.ಮೀ. ಉದ್ದಕ್ಕೆ ಹೂಳೆತ್ತುವ ಕಾಮಗಾರಿ ಹಾಗೂ ನವಲಗುಂದ ತಾಲೂಕಿನ ಯಮನೂರ ಗ್ರಾಮದ ಹತ್ತಿರ ಬೆಣ್ಣೆಹಳ್ಳದ ದಡದಲ್ಲಿ ಸ್ನಾನಘಟ್ಟ ಹಾಗೂ ಮೂಲಸೌಕರ್ಯ ಅಭಿವೃದ್ಧ ಕಾಮಗಾರಿಗಳನ್ನು ಕೈಗೊಂಡು ''ಯಮನೂರ ಆರತಿ'' ಯೋಜನೆ ಅಳವಡಿಸಿಕೊಳ್ಳಲು ಸೂಚಿಸಿ ಸಮಗ್ರವಾದ ಡಿ.ಪಿ.ಆರ್. ಮರುಪರಿಷ್ಕರಿಸಿ ಸಲ್ಲಿಸಲು ನಿರ್ದೇಶನ ನೀಡಲಾಯಿತು. ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣಾ ಯೋಜನಾ ವಿವರವಾದ ವರದಿ ಮರು ಪರಿಷ್ಕರಿಸಿ 1610 ಕೋಟಿಗಳಿಗೆ ಕರ್ನಾಟಕ ನೀರಾವರಿ ನಿಗಮದ 21/02/2024 ರಂದು ಜರುಗಿದ 108ನೇ ಅಂದಾಜು ಪರಿಶೀಲನಾ ಸಮಿತಿಗೆ ಮಂಡಿಸಿ ತಾಂತ್ರಿಕ ಅನುಮೋದನೆ ಪಡೆದು ನಿಗಮದ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆದು ಆರ್ಥಿಕ ಇಲಾಖೆಗೆ ಸಲ್ಲಿಸಲಾಯಿತು.

ಯಮನೂರ ಆರತಿ ಸ್ಥಾನಘಟ್ಟ: ಈ ಯೋಜನೆಯಡಿ ಬೆಣ್ಣೆಹಳ್ಳ ಕಿ.ಮೀ. 87 ರಲ್ಲಿ ಯಮನೂರು ಗ್ರಾಮದ ಪ್ರಸಿದ್ಧ ಚಾಂಗ ಭಾಗಸವಾರ ದೇವರ ದರ್ಶನ ಪಡೆಯಲು ಸ್ನಾನ ಮಾಡಿ ದರ್ಶನ ಪಡೆಯಲು ಪ್ರಮುಖ ಯಾತ್ರಾ ಸ್ಥಳವಿದ್ದು, ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಿಂದ ಯಾತ್ರಾರ್ಥಿಗಳು ಸೇರುತ್ತಾರೆ. ಸದರಿ ಸ್ಥಳದಲ್ಲಿ ಸಾರ್ವಜನಿಕ ಅನುಕೂಲಕ್ಕಾಗಿ 150 ಮೀ. ಉದ್ದದ ''ಯಮನೂರ ಆರತಿ'' ಸ್ಥಾನಘಟ್ಟ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಸೇರಿಸಲಾಗಿದೆ. ಸದರಿ ಪ್ರವಾಹ ನಿಯಂತ್ರಣ ಕಾಮಗಾರಿ ಕೈಗೊಳ್ಳುವುದರಿಂದ ಹಳ್ಳದ ಬದಿಯ ಧಾರವಾಡ ಹಾಗೂ ಗದಗ ಜಿಲ್ಲೆಯ 37 ಗ್ರಾಮಗಳು ಮತ್ತು 20000 ಹೆಕ್ಟೇರ್‌ಕೃಷಿ ಜಮೀನು ಪ್ರವಾಹ ಮುಕ್ತವಾಗಲಿವೆ.

200 ಕೋಟಿಗೆ ಅನುಮೋದನೆ

ಧಾರವಾಡ ಹಾಗೂ ಗದಗ ಜಿಲ್ಲೆಯಲ್ಲಿ ಹರಿಯುವ ಬೆಣ್ಣೆಹಳ್ಳದ ಪ್ರವಾಹ ನಿಯಂತ್ರಣ, ತಡೆಗೋಡೆ ನಿರ್ಮಾಣ ಹಾಗೂ ಶಾಶ್ವತ ಪರಿಹಾರ ಕಾಮಗಾರಿಗೆ 2024-25 ನೇ ಸಾಲಿನ ಆಯವ್ಯಯದಲ್ಲಿ 200 ಕೋಟಿ ಅನುದಾನವನ್ನು ರಾಜ್ಯ ವಿಪತ್ತು ಉಪಶಮನ ನಿಧಿ ಅಡಿ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಘೋಷಿಸಿರುತ್ತಾರೆ. ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಯೋಜನೆ ಹಾಗೂ ಅತಿಸೂಕ್ಷ್ಮ ಪ್ರದೇಶಗಳಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿಗಳಿಗೆ ಸರಕಾರ 09/10/2024 ರಂದು 200 ಕೋಟಿ ಮೊತ್ತದ ಕಾಮಗಾರಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಯಡಿ ಬೆಣ್ಣೆಹಳ್ಳದ ಕಿ.ಮೀ. 53.30 ರಿಂದ ಕಿಮೀ 148.00ರ ವರೆಗೆ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಯೋಜನೆಗೆ ಸಿಕ್ಕಿದೆ ಮುಖ್ಯಮಂತ್ರಿಯಿಂದ ಚಾಲನೆ

ಧಾರವಾಡ ಹಾಗೂ ಗದಗ ಜಿಲ್ಲೆಗಳಲ್ಲಿ ಹರಿಯುವ ಬೆಣ್ಣೆಹಳ್ಳದ ಪ್ರವಾಹ ನಿಯಂತ್ರಣ ಹಾಗೂ ತಡೆಗೋಡೆ ನಿರ್ಮಾಣದ ರೂ. 200 ಕೋಟಿ ಕಾಮಗಾರಿಯ ಟೆಂಡರ್‌ಪ್ರಕ್ರಿಯೆ ಪೂರ್ಣಗೊಂಡಿದ್ದು ಉತ್ತರ ಕರ್ನಾಟಕದ ಪ್ರಮುಖವಾದ ಈ ಭಾಗದ ರೈತರ ಬಹುದಿನದ ಬೇಡಿಕೆಯಾದ ಕಾಮಗಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿ ಎಲ್ಲ ಮಂತ್ರಿಗಳು 08/02/2026 ರಂದು ನವಲಗುಂದ ವಿಧಾನಸಭಾ ಕ್ಷೇತ್ರದ ಹುಬ್ಬಳ್ಳಿ ತಾಲೂಕಿನ ಶಿರಗುಪ್ಪಿ ಗ್ರಾಮದ ಹತ್ತಿರ ನಡೆದ ಭವ್ಯ ಸಮಾರಂಭದಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಅಲ್ಲದೇ ನವಲಗುಂದ ವಿಧಾನಸಭಾ ಕ್ಷೇತ್ರದ ವಿವಿಧ ಇಲಾಖೆಗಳ ಅಂದಾಜು 150 ಕೋಟಿ ರು.ವೆಚ್ಚದ ಕಟ್ಟಡ, ರಸ್ತೆ ಹಾಗೂ ಇತರೇ ಅಭಿವೃದ್ಧಿ ಕಾಮಗಾರಿಗಳಿಗೂ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಸಿಎಂ, ಡಿಸಿಎಂ ನೆರವೇರಿಸಿದ್ದಾರೆ.

> ಜನರ ಆಶೀರ್ವಾದಿಂದ ನವಲಗುಂದ ಕ್ಷೇತ್ರದಲ್ಲಿ ಇಷ್ಟೆಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧ್ಯವಾಗಿದೆ. ಇನ್ನೂ ಜನರ ಸೇವೆ ಮಾಡುವುದು ತುಂಬಾ ಇದೆ. ಸರಕಾರದ ಮೇಲೆ ಸಾಕಷ್ಟು ಒತ್ತಡ ಹೇರಿ ಅನುದಾನ ಬಿಡುಗಡೆಗೊಳಿಸಿ ಅಭಿವೃದ್ಧಿ ಕಾರ್ಯ ಮಾಡಲಾಗುತ್ತಿದೆ. ಬರುವ ದಿನಗಳಲ್ಲಿ ರಾಜ್ಯಕ್ಕೆ ಮಾದರಿ ಎನ್ನುವಂತೆ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದು.
>
> -ಎನ್.ಎಚ್. ಕೋನರಡ್ಡಿ, ಶಾಸಕರು

ಚಿತ್ತವಿಹಾರ

ಹೊಸ ಯುಗದ ಕಾವ್ಯಾತ್ಮಕ ಉದಯ

• ಅನನ್ಯ ಆನಂದ್, ಸವಣೂರು

ಭಾರತೀಯ ಸಂಸ್ಕೃತಿಯ ಅನಂತ ಪರಂಪರೆಯಲ್ಲಿ ಯುಗಾದಿಯು ಒಂದು ಪ್ರಕಾಶಮಾನ ಹಬ್ಬವಾಗಿ ತೋರುತ್ತದೆ. ಯುಗಾದಿ ಎಂಬ ಪದವು ಯುಗ ಮತ್ತು ಆದಿ ಎಂಬ ಶಬ್ದಗಳ ಸಂಗಮ–ಅರ್ಥಾತ್ ಹೊಸ ಯುಗದ ಆರಂಭ. ಇದು ಕೇವಲ ಪಂಚಾಂಗದ ಹೊಸ ವರ್ಷವಲ್ಲ; ಇದು ಮಾನವನ ಮನಸ್ಸಿನಲ್ಲೂ ಹೊಸ ಭಾವನೆಗಳ ಅರಳುವ ಕ್ಷಣ. ವಸಂತ ಋತುವಿನ ಮೃದುವಾದ ಗಾಳಿ, ಹಸಿರು ಚಿಗುರುಗಳ ನಗು, ಹೂಗಳ ಸುಗಂಧ–ಇವೆಲ್ಲವೂ ಯುಗಾದಿಯ ಆಗಮನವನ್ನು ಕಾವ್ಯಾತ್ಮಕವಾಗಿ ಸಾರುತ್ತವೆ. ಯುಗಾದಿ ದಿನವು ಜೀವನದ ಒಂದು ತತ್ವಶಾಸ್ತ್ರೀಯ ಪಾಠವನ್ನು ನೀಡುತ್ತದೆ. ಬೇವು–ಬೆಲ್ಲದ ಸಂಯೋಜನೆ, ಕಹಿ ಮತ್ತು ಸಿಹಿಯ ಸಮ್ಮಿಳನವಾಗಿ, ಜೀವನದಲ್ಲಿ ಬರುವ ಸುಖ–ದುಃಖಗಳ ಪ್ರತೀಕವಾಗಿದೆ. ಕಹಿತನವನ್ನು ತಾಳುವ ಧೈರ್ಯವೂ, ಸಿಹಿತನವನ್ನು ಸವಿಯುವ ಸಂತೋಷವೂ–ಇವೆರಡನ್ನೂ ಸಮಬಾಳುವುದೇ ಜೀವನದ ಸಾರ್ಥಕತೆ ಎಂಬ

ಸಂದೇಶವನ್ನು ಇದು ಮೌನವಾಗಿ ಹೇಳುತ್ತದೆ. ಈ ಸರಳ ಆಚರಣೆಯಲ್ಲೇ ಒಂದು ಆಳವಾದ ಜೀವನದರ್ಶನ ಅಡಗಿದೆ.

ಈ ಹಬ್ಬದ ಇನ್ನೊಂದು ವೈಶಿಷ್ಟ್ಯವೆಂದರೆ ಪಂಚಾಂಗ ಶ್ರವಣ. ಪಂಡಿತರ ವಚನಗಳಲ್ಲಿ ಭವಿಷ್ಯದ ನಿರೀಕ್ಷೆಗಳು ಪ್ರತಿಧ್ವನಿಸುತ್ತವೆ. ಆದರೆ, ಅದಕ್ಕಿಂತ ಮಹತ್ವದ್ದು–ನಮ್ಮೊಳಗಿನ ವಿಶ್ವಾಸವನ್ನು ಬೆಳೆಸುವುದು. ಭವಿಷ್ಯ ಏನಾಗಬಹುದು ಎಂಬ ಕುತೂಹಲಕ್ಕಿಂತ, ಅದನ್ನು ಎದುರಿಸುವ ಧೈರ್ಯವನ್ನು ಯುಗಾದಿ ನೀಡುತ್ತದೆ. ಯುಗಾದಿ ಕೇವಲ ಒಂದು ಹಬ್ಬವಲ್ಲ; ಅದು ಜೀವನದ ಹೊಸ ಅಧ್ಯಾಯದ ಮುನ್ನುಡಿ. ಹಳೆಯ ನೋವುಗಳ ನೆರಳನ್ನು ಹಿಂದೆ ಬಿಟ್ಟು, ಹೊಸ ಕನಸುಗಳ ಬೆಳಕಿನಲ್ಲಿ ಹೆಜ್ಜೆ ಇಡುವ ಸಮಯ. ಇದು ಮನಸ್ಸಿಗೆ ಹೊಸ ಉತ್ಸಾಹವನ್ನು ನೀಡುತ್ತದೆ, ಬದುಕಿಗೆ ಹೊಸ ದಿಕ್ಕನ್ನು ತೋರಿಸುತ್ತದೆ. ಕುಟುಂಬದವರೊಂದಿಗೆ ಆಚರಿಸುವ ಈ ಹಬ್ಬವು ಸಂಬಂಧಗಳ ಸೌಂದರ್ಯವನ್ನು ಮತ್ತಷ್ಟು ಗಾಢಗೊಳಿಸುತ್ತದೆ.

ಆಧುನಿಕ ಯುಗದ ವೇಗದ ನಡುವೆ, ಯುಗಾದಿಯಂತಹ ಹಬ್ಬಗಳು ನಮ್ಮನ್ನು ನಮ್ಮ ಮೂಲಗಳಿಗೆ ಕೊಂಡೊಯ್ಯುತ್ತವೆ. ಸಂಸ್ಕೃತಿಯ ಸುವಾಸನೆ, ಪರಂಪರೆಯ ಮೌಲ್ಯಗಳು ಮತ್ತು ಜೀವನದ ನಿಜಾರ್ಥವನ್ನು ನೆನಪಿಸುತ್ತವೆ. ಹೊಸ ಬಟ್ಟೆ, ಸಿಹಿ ತಿಂಡಿ, ಪೂಜೆ–ಇವೆಲ್ಲವೂ ಹೊರಗಿನ ಸಂಭ್ರಮವಾಗಿದ್ದರೆ, ಒಳಗೆ ನಡೆಯುವುದು ಒಂದು ಮೌನ ಪರಿವರ್ತನೆ. ಕೊನೆಗೆ, ಯುಗಾದಿ ನಮ್ಮ ಮನಸ್ಸಿನಲ್ಲಿ ಒಂದು ಕವನವಾಗಿ ಉಳಿಯುತ್ತದೆ–

ಪ್ರತಿ ಅಂತ್ಯವೂ ಒಂದು ಹೊಸ ಆರಂಭ,
ಪ್ರತಿ ಕಹಿಯೂ ಒಂದು ಸಿಹಿಯ ಮುನ್ನುಡಿ,
ಪ್ರತಿ ಅಂಧಕಾರವೂ ಒಂದು ಬೆಳಕಿನ ಪ್ರತಿಜ್ಞೆ.

ಹೀಗಾಗಿ, ಯುಗಾದಿ ನಮ್ಮ ಜೀವನದಲ್ಲಿ ನವಚೈತನ್ಯದ ದೀಪವಾಗಿ ಬೆಳಗಲಿ, ಪ್ರತಿಯೊಂದು ಹೆಜ್ಜೆಯನ್ನೂ ಕಾವ್ಯಮಯಗೊಳಿಸಲಿ.

• ಅಂಜಿನಪ್ಪ ಡಿ. ಉಪನ್ಯಾಸಕರು, ಕೊಟ್ಟೂರು

ಭಾರತದಲ್ಲಿ ಆಚರಿಸುವ ಪ್ರತಿಯೊಂದು ಹಬ್ಬಗಳಿಗೂ, ಸಾಂಸ್ಕೃತಿಕ ಹಿನ್ನೆಲೆ ಇದೆ. ಹಬ್ಬಗಳು ಜನರ ಭಾವನೆಗಳ ಬಂಧನದ ಬೆಸಿಗೆಯಾಗಿದ್ದು, ಕುಟುಂಬಗಳಲ್ಲಿ ಸಾಮರಸ್ಯವನ್ನು ಉಂಟು ಮಾಡಿ, ಸಾಂಸ್ಕೃತಿಕವಾಗಿ ಪಾಲ್ಗೊಳ್ಳುವಂತೆ ಮಾಡುತ್ತವೆ. ಆ ಮೂಲಕ ತಲೆಮಾರಿನಿಂದ ತಲೆಮಾರಿಗೆ ಸಂಸ್ಕೃತಿಯನ್ನು ವರ್ಗಾವಣೆ ಮಾಡುತ್ತವೆ. ಅಲ್ಲದೇ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ತನ್ನಲ್ಲಿನ ಕಷ್ಟಗಳನ್ನು ಮರೆತು ಸಂತೋಷ, ಸಂಭ್ರಮ, ಸಡಗರದೊಂದಿಗೆ ಪಾಲ್ಗೊಳ್ಳುವಂತೆ ಮಾಡಿ ಮನುಷ್ಯನಿಗೆ ಹೊಸ ಚೈತನ್ಯವನ್ನು ನೀಡುತ್ತವೆ. ಯುಗಾದಿ ಹಬ್ಬವು ದಕ್ಷಿಣ ಭಾರತದ ಜನರಿಗೆ ಅತ್ಯಂತ ಶ್ರೇಷ್ಠ ಹಬ್ಬವಾಗಿದ್ದು, ಜೀವನದ ಹೊಸ ಆರಂಭದ ಸಂಕೇತವಾಗಿದೆ, ಚೈತ್ರ ಮಾಸದ ಮಾಸದ ಮೊದಲ ದಿನದಂದು, ಬರುವ ಈ ಹಬ್ಬ ವಸಂತ ಋತುವಿನ, ಆಗಮನವನ್ನು ಸೂಚಿಸುತ್ತದೆ.

ಯುಗಾದಿ ಎಂಬುದು 'ಯುಗ ಮತ್ತು ಆದಿ' ಎಂಬ ಸಂಸ್ಕೃತ ಶಬ್ದಗಳಿಂದ ಉಗಮವಾಗಿದೆ. ಕನ್ನಡದಲ್ಲಿ ಹೊಸ ವರ್ಷದ ಆರಂಭ ಎಂದೇ ಇದರ ಅರ್ಥ.

'ಚೈತ್ರ ಮಾಸೇ ಜಗದ್ಬ್ರಹ್ಮಾ ಸಸರ್ಜ ಪ್ರಥಮೇಹಿನಿ
ಶುಕ್ಲ ಪಕ್ಷೇ ಸಮಗ್ರಂತು ತದಾ ಸೂರ್ಯೋದಯ ಸತಿ'

ಬ್ರಹ್ಮ ಪುರಾಣದಲ್ಲಿ ಬರುವ ಈ ಶ್ಲೋಕದಂತೆ ಇಂದು ಪ್ರಪಂಚ ಸೃಷ್ಟಿಯಾದ ದಿನ. ಬ್ರಹ್ಮನು ಈ ಜಗತ್ತನ್ನು, ಚೈತ್ರ ಶುದ್ಧ ಪ್ರತಿಪದೇ ದಿನ ಸೂರ್ಯೋದಯ ಕಾಲಕ್ಕೆ ಸೃಷ್ಟಿಸಿದನು. ಆ ದಿನವೇ, ಗ್ರಹ, ನಕ್ಷತ್ರ, ಮಾಸ ಋತು, ಮಾಸಾಧಿಪತಿಗಳನ್ನು ಸೃಷ್ಟಿಸಿ, ಕಾಲಗಣನೆ ಆರಂಭಿಸಿದನೆಂದು ಪುರಾಣಗಳು ತಿಳಿಸುತ್ತವೆ. ಹಾಗೂ ರಾಮನು ರಾವಣನನ್ನು ಸಂಹರಿಸಿ, ವಿಜಯಿಯಾಗಿ ಹಿಂದಿರುಗಿ ಅಯೋಧ್ಯೆಯಲ್ಲಿ ರಾಮನು ಪಟ್ಟಾಭಿಷೇಕವಾದ ದಿನವೆಂದು ಹೇಳಲಾಗುತ್ತಿದೆ. ಸೂರ್ಯನ ಮೊದಲ ಕಿರಣ ಭುವಿಯನ್ನು ಸ್ಪರ್ಶಿಸಿದ ಕ್ಷಣವೆಂತಲೂ , ಮಹಾವಿಷ್ಣು ಮತ್ಸ್ಯಾವತಾರ ತಾಳಿದ ದಿನವೆಂತಲೂ, ಶ್ರೀರಾಮನು ವಾಲಿಯನ್ನು ವಧಿಸಿದ ದಿನವೆಂದೂ, ಶಾಲಿವಾಹನ ಶಕೆ ಆರಂಭಗೊಂಡ ದಿನವೆಂತಲೂ ಇತಿಹಾಸ ಮತ್ತು ಪುರಾಣಗಳಲ್ಲಿ ಉಲ್ಲೇಖಗಳಿವೆ. ಹನ್ನೆರಡನೇ ಶತಮಾನದ ಭಾಸ್ಕರಾಚಾರ್ಯರು, ಖಗೋಳ ಶಾಸ್ತ್ರದ ಲೆಕ್ಕಾಚಾರಗಳನ್ನು ಯುಗಾದಿಯ ದಿನದಿಂದೇ ಆರಂಭಿಸಿದನಂತೆ, ಹೀಗೆ ಹತ್ತು, ಹಲವು ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಯನ್ನು ಒಳಗೊಂಡು ಯುಗಾದಿ ಹಬ್ಬವನ್ನು ಸಂಭ್ರಮ ಸಡಗರದೊಂದಿಗೆ ಚಂದ್ರಮಾನ ಯುಗಾದಿಯೆಂದು ಆಚರಿಸಲಾಗುತ್ತಿದೆ.

ಸಂಭ್ರಮದ ತಳಿರು ತೋರಣ: ಯುಗಾದಿ ಹಬ್ಬವು ಮನುಷ್ಯನಿಗೆ ಅಷ್ಟೇ ಹೊಸ ವರ್ಷ ಅಲ್ಲ, ಪ್ರಕೃತಿಗೂ ಕೂಡ, ಪ್ರಕೃತಿ ಹಳೆಯ ಪೊರೆಗಳನ್ನು ಕಳಚಿ ಹೊಸತನದ ಚಿಗುರಿನೊಂದಿಗೆ ಕಂಗೊಳಿಸುತ್ತದೆ. ಈ ಸಂದರ್ಭದಲ್ಲಿ ಗಿಡ ಮರ ಲತೆಗಳೆಲ್ಲ, ಚಿಗುರೊಡೆದು, ಇಡೀ ಭೂಮಿಗೆ ಹಸಿರು ತೋರಣ ಕಟ್ಟಿದಂತೆ ಕಾಣುತ್ತದೆ. ಅದೇ ರೀತಿ ಮನೆಗಳಿಗೆ, ಮಾವು ಮತ್ತು ಬೇವಿನ ತೋರಣಗಳನ್ನು ಕಟ್ಟಿ, ಚಿತ್ತ ಚಿತ್ತಾರದ ರಂಗೋಲಿಗಳನ್ನು ಹಾಕಿ ಸಂಭ್ರಮಪಡುತ್ತಾ ಹೊಸ ವರ್ಷವನ್ನು ಬರಮಾಡಿಕೊಳ್ಳುತ್ತೇವೆ.

ಬೇವು ಬೆಲ್ಲದ ಮಹತ್ವ: ಯುಗಾದಿ ಹಬ್ಬದಲ್ಲಿ ವಿಶೇಷವಾಗಿ ಬೇವು ಬೆಲ್ಲವನ್ನು ಹಂಚಿ ಹಿರಿಯರಿಂದ, ಆಶೀರ್ವಾದ ಪಡೆದುಕೊಳ್ಳುತ್ತಾರೆ. ಬೇವು ಬೆಲ್ಲ, ಮನುಷ್ಯನ ಜೀವನದ ಸುಖ–ದುಃಖ, ನೋವು ನಲಿವುಗಳ, ಸಂಕೇತವಾಗಿದೆ. ಶ್ರೀಕೃಷ್ಣ ಪರಮಾತ್ಮನೇ ಹೇಳುವಂತೆ ಸುಖ–ದುಃಖಗಳ ಸಮರಸವೇ ಜೀವನ, ದ್ವೇಷವನ್ನು ಮೆಟ್ಟಿ ಪ್ರೀತಿಯನ್ನು ಬೆಳೆಸಬೇಕು. ಭೂತಕಾಲದ ಕಹಿ ಅನುಭವವನ್ನು ಮರೆತು, ಭವಿಷ್ಯದ ಸಿಹಿ ಅನುಭವಕ್ಕೆ ನಾಂದಿಯಾಗಬೇಕು ಎಂದು ಹೇಳಿದ್ದಾನೆ. ಬೇವು ಅದರಕ್ಕೆ ಕಹಿ, ಉದರಕ್ಕೆ ಸಿಹಿ ಬೇವಿನ ಕಹಿ ಅನುಭವಿಸಿದವರಿಗೆ, ಸಿಹಿಯ ಮಹತ್ವ ತಿಳಿದಿರುತ್ತದೆ, ಜೀವನದಲ್ಲಿ ಎಂದಿಗೂ ಬರೀ ಸುಖವಾಗಲಿ, ಇಲ್ಲವೇ ದುಃಖವಾಗಲಿ ಬರುವುದಿಲ್ಲ. ಸುಖ ದುಃಖಗಳು ಒಂದು ನಾಣ್ಯದ ಎರಡು ಮುಖಗಳಂತೆ, ಜೀವನ ಇವೆರಡುಗಳ ಸಮ್ಮಿಶ್ರಣದಿಂದ ಕೂಡಿರುತ್ತದೆ. ಕೆ.ಎಸ್.ನರಸಿಂಹಸ್ವಾಮಿ ಅವರ ಕವನದಂತೆ,

ಮಾವು ನಾವು ಬೇವು ನಾವು
ನೋವು ನಲಿವು ನಮ್ಮವು
ಹೂವು ನಾವು ಹಸಿರು ನಾವು
ಬೇವು ಬೆಲ್ಲ ನಮ್ಮವು
ಹೊಸತು ವರುಷ ಹೊಸತು ಹರುಷ
ಹೊಸತು ಬಯಕೆ ನಮ್ಮವು
ಹೆಜ್ಜೆಗೊಂದು ಹೊಸ ಯುಗಾದಿ
ಚೆಲುವು ನಮ್ಮ ಜೀವನ

ಎನ್ನುವಂತೆ ಬೇವು ಬೆಲ್ಲ ನೋವು ನಲಿವಿನ, ಸಂಕೇತವೆಂದು ತಿಳಿಸುತ್ತ ಎಲ್ಲವನ್ನೂ ನಗುನಗುತ ಸ್ವೀಕರಿಸಿ ಬಾಳಬೇಕೆಂದು ತಿಳಿಸಿದ್ದಾರೆ.

ಅಭ್ಯಂಜನ ಸ್ನಾನ: ಯುಗಾದಿಯು ಹೊಸ ವರ್ಷದ ಹಬ್ಬವಾಗಿದ್ದು, ಪ್ರತಿಯೊಬ್ಬರೂ ಕೂಡ, ಆ ದಿನದಂದು ಮೈಯೆಲ್ಲ ಎಣ್ಣೆಯನ್ನು ಹಚ್ಚಿಕೊಂಡು, ಬಿಸಿ ನೀರಿಗೆ ಬೇವಿನ ಎಲೆಗಳ ಮಿಶ್ರಣವನ್ನು ಮಾಡಿ ಅಭ್ಯಂಜನ ಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಧರಿಸಿಕೊಳ್ಳುತ್ತಾರೆ. ಇದರ ಹಿಂದೆ ವೈಜ್ಞಾನಿಕ ಮಹತ್ವ ಅಡಗಿದೆ. ಏಕೆಂದರೆ ಬೇಸಿಗೆಕಾಲ ಆರಂಭವಾಗುವುದರಿಂದ ದೇಹದ ಉಷ್ಣಾಂಶ ಹೆಚ್ಚಾಗುತ್ತದೆ. ಆದ್ದರಿಂದ ದೇಹಕ್ಕೆ ತಂಪು ನೀಡಲು ಮತ್ತು ಅಂಗಾಂಗಗಳು ಚಲನಶೀಲಗೊಳ್ಳಲು ಎಣ್ಣೆಸ್ನಾನ ಸಹಾಯ ಮಾಡುತ್ತದೆ.

ಸಾಂಸ್ಕೃತಿಕ ಮಹತ್ವ: ಯುಗಾದಿ ಕೇವಲ ಹಬ್ಬವಲ್ಲ ಅದೊಂದು ಸಾಂಸ್ಕೃತಿಕ ವೈಭವ. ಭಕ್ತಿಯಿಂದ ಮನೆಯಲ್ಲಿ ಪೂಜೆಯನ್ನು ಮಾಡಿ ದೇವರ ದರ್ಶನವನ್ನು ನಡೆದು ಪುನೀತರಾಗುತ್ತಾರೆ. ಹೋಳಿಗೆ ಮತ್ತು ಇನ್ನಿತರ ಸಿಹಿ ಖಾದ್ಯಗಳನ್ನು ತಿಂದು ಸಂಭ್ರಮಿಸುತ್ತಾರೆ. ನಮ್ಮ ಎಲ್ಲಾ ಆಚರಣೆಗಳು ಕೇವಲ ಆಚರಣೆಗಳಾಗದೆ, ನಮ್ಮ ಸಂಸ್ಕೃತಿಯನ್ನು ಮತ್ತು ಸನಾತನ ಪರಂಪರೆಯನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಲು ಹಬ್ಬಗಳು ಸಹಾಯ ಮಾಡುತ್ತವೆ. ಯುಗಾದಿ ಹಬ್ಬದಂದು ಚಂದ್ರನನ್ನು ನೋಡುವುದರ ಮೂಲಕ ಹೊಸ ದಿನ, ಹೊಸ ಸಂಕಲ್ಪದೊಂದಿಗೆ ಹೊಸ ವರ್ಷದ ಆರಂಭಕ್ಕೆ ಮುನ್ನುಡಿ ಸಿಗುತ್ತದೆ, ಇದು ಭಾರತೀಯ ಸಂಸ್ಕೃತಿಯ ಅನಾವರಣವೂ ಹೌದು.

ಪ್ರಾದೇಶಿಕ ವೈವಿಧ್ಯತೆ: ಯುಗಾದಿ ಹಬ್ಬವನ್ನು ಭಾರತ ದೇಶದಲ್ಲಿ ವಿವಿಧ ಹೆಸರುಗಳೊಂದಿಗೆ ಆಚರಿಸಲಾಗುತ್ತದೆ, ಮಹಾರಾಷ್ಟ್ರ ಮತ್ತು ಗೋವಾದಲ್ಲಿ ಗುಡಿಪಾಡ್ವ ಎಂತಲೂ, ಆಂಧ್ರ ಪ್ರದೇಶ, ತೆಲಂಗಾಣ, ಕರ್ನಾಟಕದಲ್ಲಿ ಯುಗಾದಿಯಂತಲೂ, ತಮಿಳುನಾಡಿನಲ್ಲಿ ಪುತುಂಡು, ಪಂಜಾಬಿನಲ್ಲಿ ವೈಶಾಕಿ ಎಂದು, ಒರಿಸ್ಸಾದಲ್ಲಿ ಪಣ ಸಂಕ್ರಾಂತಿಯೆಂದು ಆಚರಿಸಲಾಗುತ್ತಿದೆ. ಈ ಹಬ್ಬಗಳು ಹೊಸ ಸಂವತ್ಸರದ ಆರಂಭವನ್ನು ಸೂಚಿಸಿ ಜನರಿಗೆ ನೆಮ್ಮದಿ ಮತ್ತು ಸಮೃದ್ಧಿಯನ್ನು ನೀಡುವ ಸಂಕೇತವಾಗಿ ಆಚರಿಸಲ್ಪಡುತ್ತವೆ. ಆಯಾ ಪ್ರಾದೇಶಿಕ ಅನುಸಾರವಾಗಿ ಸಿಹಿ ಖಾದ್ಯಗಳನ್ನು ಮಾಡಿ,ಸಂಭ್ರಮ ಸಡಗರೊಂದಿಗೆ ಆಚರಿಸಲಾಗುತ್ತದೆ. ಕುವೆಂಪುರವರ ವಾಣಿಯಂತೆ ಜೀವನವೆಲ್ಲ ಬೇವು ಬೆಲ್ಲ, ಬಲ್ಲವರೆಲ್ಲ ಬಲ್ಲಿದರಲ್ಲ, ಕಷ್ಟ, ಸುಖ, ಸಿಹಿ ಕಹಿ ಸಮವೆಲ್ಲ ಎಂಬಂತೆ... ಯುಗಾದಿ ಹಬ್ಬವು ಹೊಸ ಚೈತನ್ಯದೊಂದಿಗೆ ಕಷ್ಟಸುಖಗಳನ್ನು ಸಮನಾಗಿ ಸ್ವೀಕರಿಸಿ ಉತ್ತಮ ಬದುಕಿನ ಮಾರ್ಗವನ್ನು ನೀಡುತ್ತದೆ. ಬೇಂದ್ರೆಯವರ ಕವನದಂತೆ ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ, ಹೊಸ ವರ್ಷಕ್ಕೆ ಹೊಸ ಹರುಷವನ್ನು ತರುತಿದೆ, ವರುಷಕ್ಕೊಂದು ಹೊಸತು ಜನ್ಮ, ಹರುಷಕೊಂದು ಹೊಸತು ನೆಲೆಯು ಅಖಿಲ ಜೀವ ಜಾತಕೆ, ಒಂದೇ ಒಂದು ಜನ್ಮದಲ್ಲಿ, ಒಂದೇ ಬಾಲ್ಯ, ಒಂದೇ ಹರೆಯು, ನಮಗದಷ್ಟೇ ಎತಕೊ ಎನ್ನುವಂತೆ ಯುಗಾದಿಯ ಹೊಸ ವರುಷ, ಭೂತಕಾಲದ ಕಹಿ ಘಟನೆಗಳನ್ನೆಲ್ಲ ಮರೆಸಿ ಹೊಸ ಹರುಷದೊಂದಿಗೆ ಜೀವನ ಆರಂಭವಾಗಲಿ. ಎಲ್ಲರ ಬದುಕಿನಲ್ಲಿ ಹೊಸ ಬಾಳಿನ ಮನ್ವಂತರ ಉದಯವಾಗಲಿ, ನಮ್ಮ ಜೀವನದ ಪಯಣದ ಪ್ರತಿಹೆಜ್ಜೆಗೂ ಹೊಸ ಅಧ್ಯಾಯ ತೆರೆದುಕೊಳ್ಳಲಿ ಎಂಬುದೇ ನಮ್ಮ ಆಶಯವಾಗಿದೆ. ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು.

ಪರಾಭವ ನಾಮ ಸಂವತ್ಸರಕ್ಕೆ ಸ್ವಾಗತ

• ಪಲ್ಲವಿ ಚೆನ್ನಬಸಪ್ಪ

ಯುಗಾದಿ ಎಂದರೆ ಮೊದಲು ನೆನಪಾಗುವುದು ಬೇವುಬೆಲ್ಲದ ಮಿಶ್ರಣ, ಜೊತೆಗೆ ವಸಂತಮಾಸದ ಚಿಗುರು. ಯುಗಾದಿ ಹಲವು ಆರಂಭಗಳಿಗೆ ಮುನ್ನುಡಿ. ಚೈತ್ರ ಶುದ್ಧ ಪಾಡ್ಯಮಿಯ ದಿನವೇ ಯುಗಾದಿ. ಋತುಗಳ ರಾಜ ವಸಂತಕಾಲ ಆರಂಭವಾಗುವ ಈ ದಿನದಿಂದ ಸೂರ್ಯ ಕೊಂಚ ತನ್ನ ಪ್ರಖರತೆಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುವ ಕಾಲ. ಅಧಿಕೃತವಾಗಿ ಬೇಸಿಗೆಕಾಲ ಆರಂಭವಾಗುವ ದಿನ. ಹಿಂದೂ ಪಂಚಾಂಗದ ಪ್ರಕಾರ 60 ಸಂವತ್ಸರಗಳಿವೆ. ಪ್ರತೀ ವರ್ಷದ ಯುಗಾದಿಗೂ ಹಳತರ ಅಂತ್ಯ ಮತ್ತು ಹೊಸ ಸಂವತ್ಸರದ ಆರಂಭವಾಗುತ್ತದೆ. ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಋತುಗಳಲ್ಲಿ 'ವಸಂತಋತು ನಾನು' ಎಂದು ಹೇಳಿಕೊಂಡಿದ್ದಾನೆ. ಅದಕ್ಕಾಗಿಯೇ ವಿಶೇಷ ಮಹತ್ವವಿದೆ ಈ ಋತುವಿಗೆ.

ಪ್ರಸ್ತುತ 40ನೇ ಶ್ರೀಪರಾಭವ ನಾಮ ಸಂವತ್ಸರಕ್ಕೆ ಕಾಲಿಡುತ್ತಿದ್ದೇವೆ. ಯುಗಾದಿಯಂದು ಸೂರ್ಯೋದಯದ ಸಮಯದಲ್ಲಿಯೇ ಬ್ರಹ್ಮದೇವ ಸೃಷ್ಟಿಯ ಕಾರ್ಯವನ್ನು ಆರಂಭಿಸಿದರು, ಕಾಲಗಣನೆ ಆರಂಭವಾದ ದಿನ ಮತ್ತು ನಾರಾಯಣನ ಏಳನೇ ಪ್ರಸಿದ್ಧ ಅವತಾರವಾದ ಶ್ರೀರಾಮ ತನ್ನ ಸಹೋದರ ಲಕ್ಷ್ಮಣ ಮತ್ತು ಪತ್ನಿ ಸೀತೆಯೊಟ್ಟಿಗೆ 14 ವರ್ಷಗಳ ವನವಾಸ ಮುಗಿಸಿ, ಮರಳಿ ಅಯೋಧ್ಯೆಗೆ ಬಂದು ರಾಜನಾಗಿ ಪಟ್ಟಾಭಿಷಿಕ್ತನಾದ ದಿನ, ಅಂದರೆ ರಾಮರಾಜ್ಯ ಆರಂಭವಾದ ದಿನವೆಂದು ಪುರಾಣ ಗ್ರಂಥಗಳಲ್ಲಿ ಉಲ್ಲೇಖವಿದೆ. ಯುಗಾದಿಯಾದ ಒಂಬತ್ತನೇ ದಿನ ಶ್ರೀರಾಮ ನವಮಿಯ ಆಚರಣೆ. ಅಂದರೆ ಶ್ರೀರಾಮ ಅಯೋಧ್ಯೆಯಲ್ಲಿ ಅವತಾರವೆತ್ತಿಬಂದ ದಿನದ ಸಂಭ್ರಮವನ್ನು ದೇಶದೆಲ್ಲೆಡೆ ಆಚರಿಸಲಾಗುತ್ತದೆ.

ಹಬ್ಬವನ್ನು ಕರ್ನಾಟಕದಲ್ಲಿ ಯುಗಾದಿ ಎಂದರೆ, ಉತ್ತರ ಭಾರತದ ಕಡೆ ಬೈಸಾಖಿ ಎಂದೂ ಮತ್ತು ಮಹಾರಾಷ್ಟ್ರದ ಕಡೆ ಗುಡಿಪಾಡ್ವ ಎಂದೂ ವಿಶೇಷವಾಗಿ ಆಚರಿಸುವ

ಸಂಪ್ರದಾಯವಿದೆ. ಹಿಂದೂಗಳು ಆಚರಿಸುವ ಹಬ್ಬಗಳ ಹಿಂದೆ ಹಲವು ವೈಜ್ಞಾನಿಕ ಕಾರಣಗಳೂ ಇರುತ್ತವೆ. ಈ ಹಬ್ಬದಲ್ಲಿ ಹರಳೆಣ್ಣೆಯ ಅಭ್ಯಂಜನ ಮತ್ತು ಪಂಚಾಂಗ ಶ್ರವಣ ಅಥವಾ ಪಠಣಕ್ಕೂ ಬಹಳ ಮುಖ್ಯವಾದ ಪಾತ್ರವಿದೆ. ಯುಗಾದಿಯಂದು ಅಭ್ಯಂಜನ ಮಾಡಿದರೆ ಅದರ ತಂಪು, ಬೇಸಿಗೆಕಾಲವನ್ನು ಸವೆಸಲು ದೇಹಕ್ಕೆ ಮತ್ತೆ ಚರ್ಮಕ್ಕೆ ಹೊಸ ಉರುಪನ್ನು ತರುತ್ತದೆ. ಬೇವು ಬೆಲ್ಲ ತಿನ್ನುವುದರಿಂದ ದೇಹಕ್ಕೆ ದೃಢತೆ ದೊರೆಯುತ್ತದೆ. ಗ್ರಹ, ನಕ್ಷತ್ರ, ಮಾಸ, ಋತು, ವರ್ಷ, ವರ್ಷಾಧಿಪತಿಗಳೂ ಸೃಷ್ಟಿಯಾದದ್ದನ್ನು ಪಂಚಾಂಗದಲ್ಲಿ ಪಠಿಸುವುದರಿಂದ ಅಥವಾ ಶ್ರವಣ ಮಾಡುವುದರಿಂದ, ಸೃಷ್ಟಿಯ ವಿಸ್ಮಯದ ಅರಿವು ನಮಗಾಗುತ್ತದೆ. ಜೊತೆಗೆ ಹಬ್ಬದ ಮನೆಗಳಲ್ಲಿ ಹೋಳಿಗೆಯ ಸವಿ ಚೆಂದವೂ ಚೆಂದ.

ಇನ್ನು ಈ ವಸಂತಕಾಲದ ಸೊಬಗು ಕಣ್ತುಂಬಿಕೊಳ್ಳುವುದೇ ಚೆಂದ. ಕೋಗಿಲೆಯ ದನಿ ಇಂಪಾಗಲೆಂದೇ ಮಾಮರ ಚಿಗುರಿ ನಿಂತಂತೆ, ಎಲ್ಲ ಗಿಡ ಮರಗಳು ತನ್ನ ಹಳೆತನವನ್ನು ಕಳೆದುಕೊಂಡು ಹೊಸತಾಗಿ ಮೈದುಂಬಿ ಚಿಗುರಿ ನಿಲ್ಲುವ ಕಾಲ. ಎಲ್ಲೆಡೆ ಸಂಭ್ರಮ, ಸೃಷ್ಟಿಯ ಅದ್ಭುತವೆನಿಸುವ ಕುಸುಮಗಳ ಘಮ, ಹೊಸ ಚೈತನ್ಯದೊಂದಿಗೆ ಪ್ರಕೃತಿಯು ಹೊಸ ವರ್ಷವನ್ನು ಸ್ವಾಗತಿಸುವ ಈ ಸುದಿನ ಯುಗದ ಆದಿಯ ದಿನ.

ಯುಗ ಯುಗಾದಿ ಕಳೆದರು ಯುಗಾದಿ ಮರಳಿ ಬರುತಿದೆ ಎಂಬಂತೆ, ಪ್ರತೀ ವರ್ಷವು ಯುಗಾದಿ ಹೊಸತನವನ್ನು ಹೊತ್ತು ಬರುತ್ತದೆ. ಹೊಸ ಚಿಗುರಿನೊಂದಿಗೆ ಹಳೆ ಬೇರಿನ ಸಂಪ್ರದಾಯದ ಶುಭ ಆಚರಣೆಗಳನ್ನು ಉಳಿಸಿ, ಬೆಳೆಸಿಕೊಳ್ಳೋಣ. ಎಲ್ಲರ ಬಾಳಿನಲ್ಲಿ ಈ ಯುಗಾದಿ ನವೀನತೆಯನ್ನು ಚೆಲ್ಲಲಿ. ಚೈತ್ರದ ಚಿಗುರಂತೆ ಬದುಕು ಸದಾ ಚೈತನ್ಯತೆಯಿಂದ ಕೂಡಿರಲಿ. ಒಳಿತಾಗಲಿ. ಎಲ್ಲರ ಬಾಳು ಬೆಳಕಾಗಲಿ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3	■	4		5
	■		■	6			■	
	■	7	8		■	■	■	
9		■		■	10	11		
■	■	12	■	■	■		■	■
13				■	14	■	15	16
	■	■	■	17		18	■	
	■	19			■		■	
20			■		■	21		

ಎಡದಿಂದ ಬಲಕ್ಕೆ

1. ಸೀತಾದೇವಿಯ ತಂದೆ (3)
4. ಪ್ರಸಿದ್ಧ ಕಾರಿನ ಬ್ರಾಂಡ್ ಒಂದನ್ನು ನೆನಪಿಸುವ ಹನುಮಂತ (3)
6. ಹಿಂದಿನ ಪ್ರಧಾನಿಯೊಬ್ಬರನ್ನು ನೆನಪಿಸುವ ತಾವರೆ (3)
7. ಯಾರಿದ್ದರೇನು, ಸಿದ್ಧತೆ ಬೇಕು (3)
9. ಶತ್ರು ಎನ್ನಲು ಎರಡಕ್ಷರ ಸಾಕು (2)
10. ಗ್ರಹ, ನಕ್ಷತ್ರಗಳಿಂದ ಉಂಟಾಗಿರುವ ಫಲ (4)
13. ಸುತ್ತಮುತ್ತಲು ಹರಡು (4)
15. ಮಂಡೂಕನಿರುವ ಬಾವಿ (2)
17. ಅರಿವಿದ್ದವರು ಮಾಡಿದ ವಿಜ್ಞಾಪನೆ (3)
19. ಮಾಡಿದ ಕೆಲಸಕ್ಕೆ ತಕ್ಕ ಸಿಕ್ಕಿದ ಸಂಬಳ (3)
20. ಲೆಕ್ಕ ಬರೆಯುವವನು (3)
21. ರಾಜನ ಬಳಿಗೆ ದಿನವೂ ಬರುವ ಮಂತ್ರಿ (3)

ಮೇಲಿಂದ ಕೆಳಕ್ಕೆ

1. ಆಂಗ್ಲರ ಚಿಂತೆಯ ಜೊತೆಗೂಡಿ ಬಂದಿರುವ ಕ್ಯಾಲೆಂಡರಿನ ಪ್ರಥಮ ತಿಂಗಳು (4)
2. ಕಾಗದಪತ್ರಗಳ ಕಟ್ಟು (3)
3. ಶ್ರೀಕೃಷ್ಣನ ಕೈಯಲ್ಲಿರುವ ಕೊಳಲು (3)
4. ಮಗಳನ್ನು ಧಾರೆ ಎರೆದು ಕೊಟ್ಟವರೆಂದರೆ ಅಳಿಯನಿಗೆ ಖುಷಿ (2)
5. ದೊಡ್ಡ ಗಾತ್ರದ ಸಸ್ತನಿಯಿದು (4)
8. ದಿನದ ಎಂಟನೆಯ ಒಂದು ಭಾಗಕ್ಕೆ ಹೀಗೆನ್ನುವರು (2)
11. ಸಹೋದರಿಯು ಅಣ್ಣನ ಕೈಗೆ ಕಟ್ಟಿದ್ದು (2)
12. ಸವಾರಿ ಹೋಗುವಾಗ ಕುಡಿದ ನೀರು (2)
13. ಎಲೆ, ಹುಲ್ಲಿನಿಂದ ನಿರ್ಮಿಸಿದ ಮನೆ (4)
14. ಹೋಗುವ ಹಾದಿ (2)
16. ಚೆನ್ನಾಗಿರುವ ಹವಾಮಾನದಲ್ಲಿ ಬೀಸಿದ ಗಾಳಿ (4)
17. ಶತ್ರುವಿಗೂ ಇದೆ ತಿಳಿವಳಿಕೆ (3)
18. ಸಾಗರದ ಸಮೀಪದ, ರಾಣಿ ಚೆನ್ನಮ್ಮಳ ಹೆಸರಿನೊಂದಿಗೆ ನೆನಪಾಗುವ ಸ್ಥಳ (3)
19. ತನಯ ಎನ್ನಲು ಮತ್ತೊಂದು ಪದವಿದು (2)

ಸರಿಯುತ್ತರಗಳು

[illegible]

• ರೇಷ್ಮಾ ಶೆಟ್ಟಿ

ಯುಗಾದಿ ಎರಡು ಶ್ರೇಷ್ಠ ಪದಗಳ ಸಂಯೋಜನೆಯಾಗಿದೆ: ಯುಗ ಅಂದರೆ ಅವಧಿ ಎಂದೂ ಹೇಳಬಹುದು. ಆದಿ ಅಂದರೆ ಯಾವುದೋ ಒಂದು ವಿಷಯದ ಆರಂಭ. ಆದ್ದರಿಂದ ಯುಗಾದಿ ಎಂದರೆ ಅಕ್ಷರಶಃ ಹೊಸ ವರ್ಷದ ಆರಂಭ. ಮುಖ್ಯವಾಗಿ ಚಾಂದ್ರಮಾನ ಯುಗಾದಿ ಹಾಗೂ ಸೌರಮಾನ ಯುಗಾದಿ ಎಂಬ ಎರಡು ಪ್ರಭೇದಗಳಿದ್ದು, ಹಿಂದೂ ಧರ್ಮದ ವೇದಾಂಗ ಜ್ಯೋತಿಷ ಶಾಸ್ತ್ರದಿಂದ ನಿರ್ಣಯಗೊಳ್ಳುತ್ತವೆ. ಚಂದ್ರನ ಚಲನೆಯನ್ನಾಧರಿಸಿ, ದಿನಗಣನೆ ಮಾಡುವುದನ್ನು ಚಾಂದ್ರಮಾನ ಯುಗಾದಿ ಹಾಗೂ ಸೂರ್ಯನ ಗತಿಯಿಂದ ಎಣಿಕೆ ಮಾಡುವುದನ್ನು ಸೌರಮಾನ ಯುಗಾದಿ ಎನ್ನುತ್ತಾರೆ. ಕರ್ನಾಟಕದಲ್ಲಿ ಚಾಂದ್ರಮಾನಪದ್ಧತಿ ಮೊದಲಿನಿಂದ ರೂಢಿಯಲ್ಲಿದೆ. ಸೌರಮಾನ ಯುಗಾದಿ ಸಾಮಾನ್ಯವಾಗಿ ಈಗ ಇದು ಏಪ್ರಿಲ್ 14 ಅಥವಾ 15ನೇ ತಾರೀಖಿಗೆ ಬೀಳುತ್ತದೆ. ಕರಾವಳಿಯವರು ಸೌರಮಾನ ಯುಗಾದಿ ಎಂದು ಹೊಸ ವರ್ಷವನ್ನು ಆಚರಿಸುತ್ತಾರೆ.

ಮಹಾರಾಷ್ಟ್ರದಲ್ಲಿ ಗುಡಿಪಾಡ್ ಪಾಡ್ಯಮಿ ದಿವಸ ಗುಡಿಯನ್ನು ಏರಿಸುವುದೇ ಗುಡಿಪಾಡ್ವ. ಒಂದು ಕೋಲಿಗೆ ವಸ್ತ್ರವನ್ನು ಕಟ್ಟಿ, ಹೂವಿನ ಹಾರವನ್ನು ಏರಿಸಿ 'ಗುಡಿ' ಎಂದು

ಚೈತ್ರಮಾಸ, ವಸಂತ ಋತುವಿನ ಮೊದಲ ದಿನ

ಮೂಲೆಯಲ್ಲಿ ಇರಿಸುವರು. ಇದು ಹೊಸ ವರುಷದ ಆಗಮನಕ್ಕೆ ಬಾವುಟವನ್ನು ಹಾರಿಸುವುದರ ಸಂಕೇತ. ಯುಗಾದಿಯ ದಿನ ಸುಖದ ಸಂಕೇತವಾದ ಬೆಲ್ಲವನ್ನೂ ಮತ್ತು ಕಷ್ಟದ ಸಂಕೇತವಾದ ಬೇವನ್ನೂ ಸಮನಾಗಿ ಸ್ವೀಕರಿಸುವರು. ಬೇವು – ಬೆಲ್ಲದ ಮಿಶ್ರಣವನ್ನು ತಿನ್ನುವಾಗ ಈ ಒಂದು ಶ್ಲೋಕ ಹೇಳುತ್ತಾರೆ...

ಶತಾಯುಃ ವಜ್ರದೇಹಾಯ ಸರ್ವಸಂಪತ್ಕರಾಯಚ|
ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ||

ಇದರ ಅರ್ಥ ನೂರು ವರುಷಗಳ ಆಯುಷ್ಯ, ಸದೃಢ ಆರೋಗ್ಯ, ಸಕಲ ಸಂಪತ್ತುಗಳ ಪ್ರಾಪ್ತಿಗಾಗಿಯೂ, ಸಕಲ ಅರಿಷ್ಟ ನಿವಾರಣೆಗಾಗಿಯೂ ಬೇವುಬೆಲ್ಲ ಸೇವನೆ ಮಾಡುತ್ತೇನೆ... ಯುಗಾದಿ ಎಲ್ಲ ಹಬ್ಬದ ಹಾಗಲ್ಲ. ಅದು ಪ್ರಕೃತಿಯೊಂದಿಗೆ ನೇರ ಸಂಬಂಧ ಹೊಂದಿರುವಂತದ್ದು. ಯುಗಾದಿ ಬಂದಿದೆಯೆಂದು ನಿಸರ್ಗವೇ ನಮಗೆ ತಿಳಿಸುತ್ತದೆ.

ಅದುವರೆಗೂ ಎಲೆಗಳುದುರಿ ಬೋಳಾಗಿದ್ದ ಮರಗಿಡಗಳು ಚಿಗುರಿ ಹೂ, ಕಾಯಿ, ಹಣ್ಣು ಹೊತ್ತು ನಿಲ್ಲುತ್ತವೆ. ಸಂಪಿಗೆ, ಮಲ್ಲಿಗೆಗಳು ಅರಳಿ ಘಮಘಮಿಸುತ್ತವೆ. ಹಲಸು, ಮಾವು, ನೇರಳೆ, ಗೇರು ಇನ್ನೂ ಅದೆಷ್ಟೋ ಕಾಡುಹಣ್ಣುಗಳು ಸಿಗುವುದೂ ಈ ಕಾಲದಲ್ಲಿಯೇ. ಹೀಗೆ ವಸಂತಾಗಮನದ ಹೊತ್ತಿಗೆ ಪ್ರಕೃತಿ ಹೊಸ ಚಿಗುರು, ಹೂವು, ಹಣ್ಣಿನೊಂದಿಗೆ ಸಂಭ್ರಮಿಸುವಂತೆಯೇ ಸುತ್ತಲಿನ ಜೀವರಾಶಿಗಳಿಗೂ ಅದೇನೋ ಹೊಸ ಚೈತನ್ಯ, ಅನಂತ ಉಲ್ಲಾಸದಿಂದ ಇರುತ್ತವೆ.

ಯುಗಾದಿ ಎಂದರೆ ಸಂವತ್ಸರದ ಮೊದಲ ದಿನ ಮಾತ್ರ ಅಲ್ಲ ಜೀವನದ ಒಂದೊಂದು ಕ್ಷಣವೂ ಹೊಸತಾಗಬೇಕು. ಬದುಕಿನ ಸಿಹಿ ಕಹಿಗಳೆರಡನ್ನು ಸಮಾನವಾಗಿ ಸ್ವೀಕರಿಸಬೇಕು. ಒಂದೊಂದು ಕ್ಷಣವನ್ನೂ ಖುಷಿಯಿಂದ ಸವಿಯಬೇಕು. ಬ್ರಹ್ಮಾಂಡದ ಅದ್ಭುತವನ್ನು ಕುತೂಹಲದಿಂದ ನೋಡಬೇಕು. ಕಾಲ ನಿಂತ ನೀರ ಅಲ್ಲ, ಸದಾ ಕಾಲ ಸಾಗುತ್ತಿರುತ್ತದೆ. ಹಾಗೆಯೇ ನಾವೂ ಕಾಲದೊಂದಿಗೆ ನವ ಉಲ್ಲಾಸದಿಂದ ಸಾಗಬೇಕು.

ಋತುಚಕ್ರ ತಿರುಗುವುದು ಕಾಲನೆದೆ ಮರುಗುವುದು
ಮೃತನ ಮಣ್ಣಿಂದ ಹೊಸ ಹುಲ್ಲು ಮೊಳೆಯುವುದು
ಕ್ಷಿತಿ ಗರ್ಭಧರಿಸುವಳು ಮತ್ತುದಿಸುವುದು ಜೀವ
ಸತತ ಕೃಷಿಯೋ ಪ್ರಕೃತಿ– ಮಂಕುತಿಮ್ಮ

ಸಾವಿತ್ರಿ ಬುದ್ಧಿವಂತಿಕೆಯಿಂದ, ಪತಿಯ ಮೃತ್ಯುವನ್ನೇ ಗೆದ್ದ ಕಥೆ



ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಮದ್ರ ದೇಶದ ರಾಜ ಅಶ್ವಪತಿಯ ಮಗಳಾದ ಸಾವಿತ್ರಿ, ಸಾಕ್ಷಾತ್ ಸೂರ್ಯ ದೇವನ ವರಪ್ರಸಾದದಿಂದ ಹುಟ್ಟಿದವಳು. ಅವಳು ಸೌಂದರ್ಯವತಿ ಮಾತ್ರವಲ್ಲ, ಮಹಾನ್ ಜ್ಞಾನಿಯೂ ಹೌದು. ಅವಳು ತನ್ನ ಪತಿಯಾಗಿ ಆರಿಸಿಕೊಂಡದ್ದು ದೇಶಭ್ರಷ್ಟನಾದ ದ್ಯುಮತ್ಸೇನನ ಮಗ ಸತ್ಯವಾನನನ್ನು. ಸತ್ಯವಾನನು ಸಕಲ ಗುಣಸಂಪನ್ನನಾಗಿದ್ದರೂ, ಅವನ ಆಯಸ್ಸು ಕೇವಲ ಇನ್ನು ಒಂದು ವರ್ಷ ಮಾತ್ರ ಎಂಬ ಕಟು ಸತ್ಯ ಸಾವಿತ್ರಿಗೆ ತಿಳಿದಿತ್ತು. ಆದರೂ ಅವಳು ಧೃತಿಗೆಡದೆ ಅವನನ್ನೇ ವರಿಸಿದಳು.

ಸತ್ಯವಾನನ ಆಯಸ್ಸು ಮುಗಿಯುವ ದಿನ ಬಂದೇ ಬಿಟ್ಟಿತು. ಕಾಡಿನಲ್ಲಿ ಕಟ್ಟಿಗೆ ಕತ್ತರಿಸುತ್ತಿದ್ದಾಗ ಸತ್ಯವಾನನು ಸಾವಿತ್ರಿಯ ಮಡಿಲಲ್ಲೇ ಪ್ರಾಣಬಿಟ್ಟನು. ಸಾಕ್ಷಾತ್ ಮೃತ್ಯುದೇವತೆಯಾದ ಯಮಧರ್ಮರಾಯನು ಸತ್ಯವಾನನ ಪ್ರಾಣವನ್ನು ತೆಗೆದುಕೊಂಡು ದಕ್ಷಿಣಾಭಿಮುಖವಾಗಿ ಸಾಗತೊಡಗಿದನು. ಸಾಮಾನ್ಯ ಮಾನವರಿಗೆ ಯಮನನ್ನು ನೋಡುವುದೇ ಅಸಾಧ್ಯ, ಇನ್ನು ಅವನನ್ನು ಹಿಂಬಾಲಿಸುವುದು ದೂರದ ಮಾತು. ಆದರೆ ಸಾವಿತ್ರಿ ಯಮನನ್ನೇ ಹಿಂಬಾಲಿಸಿದಳು. ಅವಳನ್ನು ತಡೆದ ಯಮ, ಸಾವಿತ್ರಿ, ನಿನ್ನ ಪತಿಯ ಆಯಸ್ಸು ಮುಗಿದಿದೆ, ಇನ್ನು ನೀನು ಎಷ್ಟು ಹಿಂಬಾಲಿಸಿದರು ಪ್ರಯೋಜನವಿಲ್ಲ ಮರಳಿ ಹೋಗು ಎಂದನು. ಆಗ ಸಾವಿತ್ರಿ ಧರ್ಮರಾಜನೇ, ಎಲ್ಲಿ ಪತಿ ಹೋಗುತ್ತಾನೋ ಅಲ್ಲಿ ಪತ್ನಿಯೂ ಹೋಗುವುದು ಧರ್ಮ. ಸಾಧು–ಸಜ್ಜನರ ಸ್ನೇಹವು ಒಮ್ಮೆ ಉಂಟಾದರೂ ಅದು ವ್ಯರ್ಥವಾಗುವುದಿಲ್ಲ. ನಿಮ್ಮಂತಹ ಧರ್ಮಪ್ರಭುಗಳ ದರ್ಶನವೇ ಒಂದು ಪುಣ್ಯ. ಇಂತಹ ಶ್ರೇಷ್ಠರನ್ನು ಹಿಂಬಾಲಿಸುವುದು ನನಗೆ ಆಯಾಸವೆನಿಸುವುದಿಲ್ಲ ಎಂದಳು ದೃಢವಾಗಿ .

ಸಾವಿತ್ರಿಯ ಮಾತುಗಳಲ್ಲಿನ ಧರ್ಮದ ಆಳ ಮತ್ತು ತರ್ಕವನ್ನು ಕಂಡು ಮೆಚ್ಚಿದ ಯಮ, ಸತ್ಯವಾನನ ಪ್ರಾಣವೊಂದನ್ನು ಬಿಟ್ಟು ನಿನಗೆ ಬೇಕಾದ ಮೂರು ವರಗಳನ್ನು ಕೇಳು ಎನ್ನುತ್ತಾನೆ. ಸಾವಿತ್ರಿ ಜಾಣತನದಿಂದ ಮೊದಲನೆಯದಾಗಿ, ತನ್ನ ಮಾವನಿಗೆ ಕಳೆದುಹೋದ ಕಣ್ಣಿನ ದೃಷ್ಟಿ ಮತ್ತು ರಾಜ್ಯ ಮರಳಿ ಸಿಗಲಿ ಎಂದಳು. ಎರಡನೆಯದಾಗಿ, ತನ್ನ ತಂದೆಗೆ ಪುತ್ರಸಂತಾನವಾಗಲಿ ಎಂದು ಕೇಳಿದಳು. ಯಮ ತಥಾಸ್ತು ಎಂದು ಹೇಳಿ ಮುಂದೆ ಸಾಗಿದರೂ ಸಾವಿತ್ರಿ ಬಿಡಲಿಲ್ಲ. ಅವಳು ಮೃತ್ಯುವಿನ ರಹಸ್ಯ ಮತ್ತು ಧರ್ಮದ ಸಾರವನ್ನು ಕುರಿತು ಯಮನೊಂದಿಗೆ ಅದ್ಭುತವಾಗಿ ಮಾತನಾಡಿದಳು. ಅವಳ ಜ್ಞಾನಕ್ಕೆ ಮಾರುಹೋದ ಯಮ, ಮತ್ತೊಂದು ವರ ಕೇಳು ಎಂದನು.

ಆಗ ಸಾವಿತ್ರಿ, ಮಹಾಪ್ರಭು, ನನಗೆ ನೂರು ಮಂದಿ ಪುತ್ರರು ಜನಿಸುವಂತೆ ವರ ನೀಡಿ ಎಂದಳು. ಯಮಧರ್ಮರಾಯನು ಯೋಚಿಸದೆ ತಥಾಸ್ತು ಎಂದುಬಿಡುತ್ತಾನೆ. ವರ ನೀಡಿದ ಮರುಕ್ಷಣವೇ ಸಾವಿತ್ರಿ ನಸುನಗುತ್ತಾ ಕೇಳುತ್ತಾಳೆ: ಧರ್ಮರಾಜರೇ, ನೀವು ಸತ್ಯವಂತರು. ನಿಮ್ಮ ವರ ಸುಳ್ಳಾಗಬಾರದು. ಪತಿ ಇಲ್ಲದೆ ನಾನು ತಾಯಿಯಾಗುವುದು ಹೇಗೆ ಸಾಧ್ಯ? ಆದ್ದರಿಂದ ನನ್ನ ಪತಿಯ ಪ್ರಾಣವನ್ನು ಮರಳಿ



ನೀಡುವುದು ನಿಮ್ಮ ಧರ್ಮವಲ್ಲವೇ? ಯಮಧರ್ಮರಾಯನು ಬೆರಗಾದನು. ಆಕೆ ಕೇವಲ ಪ್ರಾರ್ಥಿಸಲಿಲ್ಲ, ಬದಲಾಗಿ ತನ್ನ ಬುದ್ಧಿವಂತಿಕೆಯಿಂದ ಯಮನನ್ನೇ ಧರ್ಮಸಂಕಟಕ್ಕೆ ಸಿಲುಕಿಸಿ ಜಯಗಳಿಸಿದಳು. ಸಾವಿತ್ರಿಯ ತರ್ಕಕ್ಕೆ ಸೋತ ಯಮ ಸತ್ಯವಾನನ ಪ್ರಾಣವನ್ನು ಮರಳಿ ನೀಡಿದನು.

ಈ ಕಥೆಯು ನಾವು ದೃಢ ಸಂಕಲ್ಪದಿಂದ ನಮ್ಮವರಿಗೆ ಜೊತೆಯಾಗಿ ನಿಂತರೆ ಮೃತ್ಯುವೂ ಸೋಲಬಲ್ಲದು ಎಂಬ ಆತ್ಮವಿಶ್ವಾಸವನ್ನು ನೀಡುತ್ತದೆ. ಇದು ಕೇವಲ ಭಾವನಾತ್ಮಕ ಕಥೆಯಲ್ಲ, ಇದು ಬೌದ್ಧಿಕ ಯುದ್ಧ . ಎಂತಹ ಸಂಕಷ್ಟದ ಸಂದರ್ಭದಲ್ಲಿ ಕೂಡ ನಾವು ನಮ್ಮ ಜಾಗೃತ ಮನಸ್ಥಿತಿಯನ್ನು ಉಪಯೋಗಿಸಿದರೆ ಅಸಾಧ್ಯವಾದುದನ್ನು ಸಾಧ್ಯವಾಗಿಸುವ 'ಮಹಾಪ್ರಜ್ಞೆ ನಮ್ಮಲ್ಲಿ ಇರುತ್ತದೆ '. ಈ ಕಥೆ ವಿಶೇಷವಾಗಿ ಮಹಿಳೆಯರಲ್ಲಿರುವ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಮತ್ತು ತಾರ್ಕಿಕ ಬುದ್ಧಿವಂತಿಕೆಯನ್ನು ಜಗತ್ತಿಗೆ ಸಾರುತ್ತದೆ. ನಮ್ಮ ಮನೆಯ ಹೆಣ್ಣುಮಕ್ಕಳು ಹೀಗೆ ಎಂತದ್ದೇ ಸಂಕಷ್ಟದ ಸಂದರ್ಭದಲ್ಲಿ ಅದನ್ನು ಜಾಣ್ಮೆಯಿಂದ ನಿಭಾಯಿಸುವುದನ್ನು ಕಲಿಯಬೇಕು. ಒಬ್ಬ ಹೆಣ್ಣುಮಗಳು ಹೀಗೆ ಎಂತದ್ದೇ ಸಂದರ್ಭದಲ್ಲಿ ಪತಿಗೆ ಬೆಂಬಲವಾಗಿ ನಿಂತಾಗ ಅವನು ಜೀವನದಲ್ಲಿ ಸೋಲಲು ಸಾಧ್ಯವೇ ಇಲ್ಲ.

ಸಮಾಚಾರ ಸಣ್ಣದಲ್ಲ

ಹೈದರಾಬಾದ್ ತಂಡಕ್ಕೆ ಇಶಾನ್ ಕಿಶನ್ ನಾಯಕ



ಹೈದರಾಬಾದ್: ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡಕ್ಕೆ ಹಂಗಾಮಿ ನಾಯಕನ್ನಾಗಿ ಇಶಾನ್ ಕಿಶನ್ ಅವರನ್ನು ನೇಮಿಸ ಲಾಗಿದೆ. ಕೆಳ ಬೆನ್ನು ನೋವಿನಿಂದ ಗುಣಮುಖ ರಾಗುತ್ತಿರುವ ಪ್ಯಾಟ್ ಕಮಿನ್ಸ್ ಅವರು ಟೂರ್ನಿಯ ಆರಂಭಿಕ ಕೆಲ ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ. ಈ ಹಿನ್ನೆಲೆಯಲ್ಲಿ ಎಡಗೈ ಬ್ಯಾಟ್ಸ್‌ಮನ್‌ಗೆ ಈ ಜವಾಬ್ದಾರಿಯನ್ನು ನೀಡಲಾಗಿದೆ. ಎಡಗೈ ಆರಂಭಿಕ ಅಭಿಷೇಕ್ ಶರ್ಮ ಅವರನ್ನು ಉಪ ನಾಯಕನ್ನಾಗಿ ನೇಮಿಸಲಾಗಿದೆ. ಇತ್ತೀಚೆಗೆ ಮುಕ್ತಾಯವಾದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಇಶಾನ್ ಕಿಶನ್ ಭಾರತ ತಂಡದ ಪರ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದ್ದರು. 193ರ ಸ್ಟ್ರೈಕ್‌ರೇಟ್‌ನಲ್ಲಿ 317 ರನ್ ಬಾರಿಸಿದ್ದರು. ಆ ಮೂಲಕ ಭಾರತದ ಪರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ್ದ ಎರಡನೇ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದರು. 321 ರನ್‌ಗಳ ಮೂಲಕ ಸಂಜು ಸ್ಯಾಮ್ಸನ್ ಅಗ್ರ ಸ್ಥಾನವನ್ನು ಅಲಂಕರಿಸಿದ್ದಾರೆ. ಅಂದ ಹಾಗೆ ಇಶಾನ್ ಕಿಶನ್, ಟಿ20 ವಿಶ್ವಕಪ್ ಟೂರ್ನಿಯಲ್ಲಿ ತಮ್ಮ ಹೈದರಾಬಾದ್ ತಂಡದ ಜೊತೆಗಾರ ಅಭಿಷೇಕ್ ಶರ್ಮಾ ಅವರನ್ನು ಹಿಂದಿಕ್ಕಿದ್ದಾರೆ.

ಚಿನ್ನಸ್ವಾಮಿಯಲ್ಲಿ ಐಪಿಎಲ್ ಉದ್ಘಾಟನಾ ಪಂದ್ಯಕ್ಕೆ ಇನ್ನು ಹತ್ತೇ ದಿನ ಬಾಕಿ | ಬೆಂಗಳೂರಿಗೆ ಆಗಮಿಸಿದ ಕೊಹ್ಲಿ

ಇಂದಿನಿಂದ ತವರಿನಲ್ಲಿ ಆರ್‌ಸಿಬಿ ತಾಲೀಮು

ಬೆಂಗಳೂರು: ಬಹುನಿರೀಕ್ಷಿತ 19ನೇ ಆವೃತ್ತಿಯ ಐಪಿಎಲ್ ಆರಂಭವಾಗಲು ಇನ್ನು ಕೇವಲ ಹತ್ತು ದಿನಗಳು ಮಾತ್ರ ಉಳಿದಿವೆ. ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಹತ್ತೂ ತಂಡಗಳು ಕಳೆದ ಒಂದು ವಾರದಿಂದ ತಮ್ಮ ತವರು ಕ್ರೀಡಾಂಗಣದಲ್ಲಿ ಅಭ್ಯಾಸ ನಿರತವಾಗಿದ್ದು, ಆರ್‌ಸಿಬಿ ತನ್ನ ತವರು ಕ್ರೀಡಾಂಗಣದಲ್ಲಿ ಗುರುವಾರದಿಂದ ಅಭ್ಯಾಸ ನಿರತವಾಗಲಿದೆ.

ಮಾ.28ರಂದು ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ಮತ್ತು ಹೈದರಾಬಾದ್ ತಂಡಗಳು ಮುಖಾಮುಖಿಯಾಗುವ ಮೂಲಕ ಈ ಸಲದ ಐಪಿಎಲ್ ಪಂದ್ಯಾವಳಿಗೆ ಬೆಂಗಳೂರಿನಲ್ಲಿ ಚಾಲನೆ ಸಿಗಲಿದೆ. ಕಳೆದ ಒಂದು ವಾರದಿಂದ ಆರ್‌ಸಿಬಿ ತಂಡವು ನವಿಮುಂಬೈನ ಡಾ.ಡಿ.ವೈ.ಪಾಟೀಲ್ ಸ್ಟೇಡಿಯಂನಲ್ಲಿ ಅಭ್ಯಾಸ ನಿರತವಾಗಿತ್ತು. ಈ ಮಧ್ಯೆ ತಜ್ಞರ ಸಮಿತಿ ನೀಡಿದ ವರದಿಯನ್ವಯ ಈ ಸಲದ ಐಪಿಎಲ್ ಪಂದ್ಯಾವಳಿಯನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಸಬಹುದೆನ್ನುವ ಷರತ್ತುಬದ್ಧ ಅನುಮತಿಯನ್ನು ರಾಜ್ಯ ಸರಕಾರ ಎರಡು ದಿನಗಳ ಹಿಂದೆ ನೀಡಿರುವ ಕಾರಣಕ್ಕೆ ನವಿಮುಂಬೈಯಿಂದ ಆರ್‌ಸಿಬಿ ತಂಡ ಬುಧವಾರ ಬೆಂಗಳೂರಿಗೆ ತಲುಪಿದೆ. ಗುರುವಾರದಿಂದ ಆರ್‌ಸಿಬಿ ತಂಡವು ತನ್ನ ಮೊದಲ ಪಂದ್ಯದ ವರೆಗೂ ಚಿನ್ನಸ್ವಾಮಿಯಲ್ಲಿ ಸಮರಾಭ್ಯಾಸ ನಡೆಸಲಿದೆ. ತಂಡದ ಬಹುತೇಕ ಎಲ್ಲಾ ಆಟಗಾರರೂ ಬುಧವಾರ ಬೆಂಗಳೂರನ್ನು ತಲುಪಿದ್ದಾರೆ. ಕಳೆದ ಆವೃತ್ತಿಯ ಚಾಂಪಿಯನ್ ಎನಿಸಿರುವ ಆರ್‌ಸಿಬಿ ಈ ಸಲವೂ ಪ್ರಶಸ್ತಿಯನ್ನು ತನ್ನ ಉಳಿಸುವ ಉಮೇದು ಮತ್ತು ತವಕದಲ್ಲಿದೆ.



ಬೆಂಗಳೂರಿಗೆ ಕೊಹ್ಲಿ ಆಗಮನ: ಈ ಬಾರಿಯ ಐಪಿಎಲ್ ಪಂದ್ಯವನ್ನಾಡಲು ವಿರಾಟ್ ಕೊಹ್ಲಿ ಕೂಡ ಬೆಂಗಳೂರಿಗೆ ಬಂದು ತಲುಪಿದ್ದಾರೆ. ಲಂಡನ್‌ನಿಂದ ಮಂಗಳವಾರ ತಡರಾತ್ರಿ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಕೊಹ್ಲಿ, ಬುಧವಾರ ವಿಶ್ರಾಂತಿ ಪಡೆದ ಕಾರಣ, ಗುರುವಾರದಿಂದ ಸಹ ಆಟಗಾರರ ಜತೆ ಅಭ್ಯಾಸದಲ್ಲಿ ತೊಡಗಿಕೊಳ್ಳಲಿದ್ದಾರೆ. ಕಳೆದ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪ್ರಶಸ್ತಿ ಗೆಲ್ಲುವಲ್ಲಿ ಕೊಹ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು 144.71ರ ಅದ್ಭುತ ಸ್ಟ್ರೈಕ್‌ರೇಟ್ ಮತ್ತು 54.75ರ ಸರಾಸರಿಯಲ್ಲಿ ಕಳೆದ ಆವೃತ್ತಿಯಲ್ಲಿ ಒಟ್ಟು 657 ರನ್ ಗಳಿಸಿದ್ದರು, ಅದರಲ್ಲಿ ಎಂಟು ಅರ್ಧಶತಕ ಸೇರಿದ್ದವು.

ಆರ್‌ಸಿಬಿ ತನ್ನ ತವರಿನ 7 ಪಂದ್ಯಗಳ ಪೈಕಿ 5 ಪಂದ್ಯಗಳನ್ನು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಆಡಲಿದೆ. ಇನ್ನೆರಡು ಪಂದ್ಯಗಳು ರಾಯ್ಪುರದಲ್ಲಿ ನಡೆಯಲಿವೆ. ಐಪಿಎಲ್‌ಗೂ ಮುನ್ನ ಆರ್‌ಸಿಬಿ ಅನ್‌ಬಾಕ್ಸ್ ಕಾರ್ಯಕ್ರಮ ಸಹ ಚಿನ್ನಸ್ವಾಮಿ ಕ್ರೀಡಾಂಗಣದಲ್ಲೇ ನಡೆಯಬೇಕಿದೆ. ಆ ಕಾರ್ಯಕ್ರಮದಲ್ಲಿ ಸಾವಿರಾರು ಆರ್‌ಸಿಬಿ ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ.

ಕಳೆದ ಆವೃತ್ತಿಯ ಐಪಿಎಲ್‌ನ ವಿಜೇತ ತಂಡವಾದ ಆರ್‌ಸಿಬಿ ಜೂ.4ರಂದು ಸಂಭ್ರಮಾಚರಣೆಗೆ ಬೆಂಗಳೂರಿಗೆ ಬಂದಿದ್ದ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಹೊರಗಡೆ ನಡೆದ ಕಾಲ್ತುಳಿತ ಘಟನೆಯಲ್ಲಿ 11 ಕ್ರಿಕೆಟ್ ಪ್ರೇಮಿಗಳು ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೆ ಯಾವುದೇ ಪಂದ್ಯಗಳು ನಡೆದಿರಲಿಲ್ಲ. ಹಲವು ಮಹತ್ತರ ಪಂದ್ಯಗಳೂ ಚಿನ್ನಸ್ವಾಮಿ ಕ್ರೀಡಾಂಗಣ ದಿಂದ ಸ್ಥಳಾಂತರಗೊಂಡಿದ್ದವು. ಸರಕಾರ ರಚಿಸಿದ ಸಮಿತಿ ಯ ಹಲವು ಶಿಫಾರಸು ಈಡೇರಿದ ಕಾರಣ ಇದೀಗ ಷರತ್ತು ಬದ್ಧ ಅನುಮತಿ ದೊರೆತಿರುವುದರಿಂದ ಮತ್ತೆ ಬೆಂಗಳೂರಿ ನಲ್ಲಿ ಐಪಿಎಲ್‌ನ ಆರ್‌ಸಿಬಿ ಕಲರವ ಆರಂಭವಾಗಿದೆ.

ಒಂದೇ ಗುಂಪಿನಲ್ಲಿ ಭಾರತ-ಪಾಕ್‌ಗೆ ಸ್ಥಾನ

ಆ.15ರಿಂದ ವಿಶ್ವಕಪ್ ಹಾಕಿ ಟೂರ್ನಿ

ದೆಹಲಿ: ಮುಂಬರುವ ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ಒಂದೇ ಗುಂಪಿನಲ್ಲಿ ಸ್ಥಾನ ಪಡೆದಿವೆ. ಈ ಮಹತ್ವದ ಟೂರ್ನಿಯು ಆಗಸ್ಟ್ 15ರಿಂದ 30ರ ವರೆಗೆ ನಡೆಯಲಿದ್ದು, ನೆದರ್ಲೆಂಡ್ ಮತ್ತು ಬೆಲ್ಜಿಯಂ ಜಂಟಿಯಾಗಿ ಪಂದ್ಯಾವಳಿಯನ್ನು ಆಯೋಜಿ ಸುತ್ತಿವೆ. ಮಂಗಳವಾರ ರಾತ್ರಿ ಆಮ್ಸ್ಟರ್‌ಡ್ಯಾಮ್‌ನ ವ್ಯಾಗೆನರ್ ಕ್ರೀಡಾಂಗಣದಲ್ಲಿ ಡ್ರಾ ಸಮಾರಂಭ ನಡೆದಿದ್ದು, ವಿವರವಾದ ವೇಳಾಪಟ್ಟಿಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡುವ ನಿರೀಕ್ಷೆಯಿದೆ.

ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಇಂಗ್ಲೆಂಡ್ ಮತ್ತು ವೇಲ್ಸ್ ಜತೆಗೆ ಡಿ-ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಈ ಗುಂಪಿನ ಎಲ್ಲಾ ಪಂದ್ಯಗಳು ನೆದರ್ಲೆಂಡ್‌ನಲ್ಲಿ ನಡೆಯಲಿವೆ. 2010ರ ನಂತರ ಮೊದಲ ಬಾರಿಗೆ ವಿಶ್ವಕಪ್ ಹಾಕಿಯಲ್ಲಿ 2 ತಂಡಗಳು ಪರಸ್ಪರ ಮುಖಾಮುಖಿ ಯಾಗುತ್ತಿವೆ.

ಪುರುಷರ ಹಾಕಿ ವಿಶ್ವಕಪ್ ಇತಿಹಾಸದಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಇದುವರೆಗೂ ಐದು ಬಾರಿ ಮುಖಾಮುಖಿಯಾಗಿದ್ದು, ಭಾರತ ಮೂರು ಬಾರಿ ಜಯಗಳಿಸಿದ್ದರೆ, ಪಾಕಿಸ್ತಾನ ಎರಡು ಬಾರಿ ಗೆದ್ದಿದೆ. ನವದೆಹಲಿಯ ಮೇಜರ್ ಧ್ಯಾನ್ ಚಂದ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಹಿಂದಿನ ವಿಶ್ವಕಪ್ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನ ವಿರುದ್ಧ 4-1 ಅಂತರದಿಂದ ಜಯಗಳಿಸಿತ್ತು ಹಾಕಿ ವಿಶ್ವಕಪ್‌ನ ಮುಖಾಮುಖಿಯ ಹೊರ ತಾಗಿ, ಈ ವರ್ಷ ಭಾರತ ಮತ್ತು ಪಾಕಿಸ್ತಾನ ಹಾಕಿ ತಂಡಗಳು ಇನ್ನೂ ಎರಡು ಬಾರಿ ಮುಖಾಮುಖಿ ಯಾಗಲಿವೆ. ವಿಶ್ವಕಪ್ ಮುಖಾಮುಖಿಯ ಮೊದಲು ಎರಡೂ ತಂಡಗಳು ಎಫ್‌ಐಎಚ್ ಪ್ರೊ.ಲೀಗ್‌ನಲ್ಲಿ ಎರಡು ಬಾರಿ ಆಡಲಿವೆ. ಈ ವರ್ಷದ ಕೊನೆಯಲ್ಲಿ ನಡೆಯುವ ಏಷ್ಯನ್ ಕ್ರೀಡಾಕೂಟದಲ್ಲಿ ನಾಲ್ಕನೇ ಪಂದ್ಯ ನಡೆಯುವ ಸಾಧ್ಯತೆಯಿದೆ.

ವಿಶ್ವಕಪ್ ಹಾಕಿ ಗುಂಪುಗಳು

- ಗುಂಪು -ಎ: ನೆದರ್ಲೆಂಡ್, ಅರ್ಜೆಂಟೀನಾ, ನ್ಯೂಜಿಲೆಂಡ್, ಜಪಾನ್
- ಗುಂಪು-ಬಿ: ಬೆಲ್ಜಿಯಂ, ಜರ್ಮನಿ, ಫ್ರಾನ್ಸ್, ಮಲೇಷ್ಯಾ
- ಗುಂಪು-ಸಿ: ಆಸ್ಟ್ರೇಲಿಯಾ, ಸ್ಪೇನ್, ಐರ್ಲೆಂಡ್, ದ.ಆಫ್ರಿಕಾ
- ಗುಂಪು-ಡಿ: ಇಂಗ್ಲೆಂಡ್, ಭಾರತ, ಪಾಕಿಸ್ತಾನ, ವೇಲ್ಸ್

ಮೀಡಿಯಾ ಕ್ರಿಕೆಟ್: 3ನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿದ ವಿಶ್ವವಾಣಿ ತಂಡ

ಬೆಂಗಳೂರು: ವಿಶ್ವವಾಣಿ ಕ್ರಿಕೆಟ್ ತಂಡ 2025ರ ಕರ್ನಾಟಕ ಮೀಡಿಯಾ ಚಾಂಪಿಯನ್ ಲೀಗ್ ಟೆನಿಸ್‌ಬಾಲ್ ಕ್ರಿಕೆಟ್ ಟೂರ್ನಿಯನ್ನು 3 ಗೆಲುವುಗಳ ಮೂಲಕ ತನ್ನ ಅಭಿಯಾನವನ್ನು ಅಂತ್ಯಗೊಳಿಸಿದೆ. ಡಿ ಗುಂಪಿನಲ್ಲಿ ಸ್ಥಾನ ಪಡೆದಿದ್ದ ವಿಶ್ವವಾಣಿ ಕ್ರಿಕೆಟ್ ತಂಡ ಲೀಗ್ ಹಂತದಲ್ಲಿ ಆಡಿದ 5 ಪಂದ್ಯಗಳ ಪೈಕಿ ಮೂರರಲ್ಲಿ ಗೆಲುವು ಸಾಧಿಸಿತು. ಒಟ್ಟು 6 ಅಂಕಗಳನ್ನು ಕಲೆ ಹಾಕಿದರೂ ಡಿ ಗ್ರೂಪ್‌ನ ಅಂಕಪಟ್ಟಿಯಲ್ಲಿ 3ನೇ ಸ್ಥಾನ ಪಡೆದರೂ ಟೂರ್ನಿಯ ಸೂಪರ್-8ಕ್ಕೆ ಅರ್ಹತೆ ಪಡೆಯಲು ವಿಫಲವಾಯಿತು. 3 ಗೆಲುವುಗಳ ಮೂಲಕ ವಿಶ್ವವಾಣಿ ತಂಡ, ಮುಂದಿನ ಟೂರ್ನಿಗೆ ತನ್ನ ವಿಶ್ವಾಸವನ್ನು ಹೆಚ್ಚಿಸಿಕೊಂಡಿತು.

ಗರ್ಭಕಂಠ ಕೋಶ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಹೈಪರ್ ಸ್ಪೋರ್ಟ್ಸ್ ಹಾಗೂ ವೆಲ್ಫೇರ್ ಅಸೋಸಿಯೇಷನ್ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ 6 ಓವರ್‌ಗಳ ಟೆನಿಸ್‌ಬಾಲ್ ಟೂರ್ನಿಯಲ್ಲಿ ಒಟ್ಟು 24 ತಂಡಗಳು 4 ಗುಂಪುಗಳ ಮೂಲಕ ಲೀಗ್ ಹಂತದಲ್ಲಿ ಸೆಣಸಾಟ ನಡೆಸಿದ್ದವು. ವಿಶ್ವವಾಣಿ ತಂಡವು ಡಿ ಗುಂಪಿನಲ್ಲಿ ಸ್ಥಾನ ಪಡೆದಿತ್ತು. ಮಾರ್ಚ್ 16ರಂದು ವಿಶ್ವವಾಣಿ ತಂಡ, ತನ್ನ ಮೊದಲನೇ ಪಂದ್ಯದಲ್ಲಿ ವಿಜಯವಾಣಿ ಎದುರು ಸೆಣಸಾಡಿ 10 ವಿಕೆಟ್‌ಗಳ ಗೆಲುವು ಪಡೆದಿತ್ತು.

ನಂತರ ತನ್ನ 2ನೇ ಪಂದ್ಯದಲ್ಲಿ ಅಶ್ವವೇಗ ಟಿ.ವಿ ವಿರುದ್ಧ ವಿಶ್ವವಾಣಿ ತಂಡವು 8 ವಿಕೆಟ್‌ಗಳ ಗೆಲುವು ಪಡೆಯಿತು. ಬಳಿಕ ನಡೆದಿದ್ದ 3ನೇ ಪಂದ್ಯದಲ್ಲಿ ವಿಶ್ವವಾಣಿ ತಂಡವು ಬ್ಯಾಟಿಂಗ್ ವೈಫಲ್ಯದಿಂದಾಗಿ ವಾರ್ತಾಭಾರತಿ ಎದುರು 9 ವಿಕೆಟ್‌ಗಳ ಸೋಲು ಅನುಭವಿಸಿತ್ತು. ಮಾರ್ಚ್ 17ರಂದು ನಡೆದಿದ್ದ 4ನೇ ಪಂದ್ಯದಲ್ಲಿ ವಿಶ್ವವಾಣಿ ತಂಡವು ಹೊಸದಿಂಗತ ಎದುರು 8 ವಿಕೆಟ್‌ಗಳ ಗೆಲುವು ಪಡೆಯಿತು. ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ವಿಶ್ವವಾಣಿ ತಂಡವು ಪ್ರೆಸ್ ಕ್ಲಬ್ ಬೆಂಗಳೂರು ವಿರುದ್ಧ 8 ವಿಕೆಟ್ ಗೆಲುವು ಪಡೆಯುವಲ್ಲಿ ಸಫಲವಾಯಿತು.

ಬಿಡ್‌ನಿಂದ ಹಿಂದೆ ಸರಿದ 5 ಕಂಪನಿಗಳು | ಮುಂದಿನ ಅವೃತ್ತಿಯಿಂದಷ್ಟೇ ಹೊಸ ಮಾಲೀಕತ್ವ

ಆರ್‌ಸಿಬಿ ಖರೀದಿ: 2 ತಂಡಗಳ ಪೈಪೋಟಿ

ಬೆಂಗಳೂರು: ಹಾಲಿ ಐಪಿಎಲ್ ಚಾಂಪಿಯನ್ ಆರ್‌ಸಿಬಿ ತಂಡದ ಖರೀದಿಯ ಅಂತಿಮ ಹಂತದ ಸ್ಪರ್ಧೆಯಲ್ಲಿ 2 ಕಂಪನಿಗಳು ಮಾತ್ರ ಉಳಿದುಕೊಂಡಿವೆ. ಈ ಮುನ್ನ ಒಟ್ಟು 7 ಕಂಪನಿಗಳು ಆರ್‌ಸಿಬಿ ಫ್ರಾಂಚೈಸಿ ಖರೀದಿಗೆ ಆಸಕ್ತಿ ತೋರಿಸಿದ್ದವು, ಆದರೆ ಈಗ ಅದರಲ್ಲಿ 5 ಕಂಪನಿಗಳು ಹಿಂದೆ ಸರಿದಿವೆ. ಈಗಾಗಲೇ ಆರ್‌ಸಿಬಿ ತಂಡಕ್ಕೆ ಬಿಡ್ ಸಲ್ಲಿಸುವ ಅಂತಿಮ ಗಡುವು ಕೂಡ ಮುಕ್ತಾಯಗೊಂಡಿದೆ ಎನ್ನಲಾಗಿದೆ.

ವರದಿಗಳ ಪ್ರಕಾರ, ಸ್ವೀಡನ್‌ನ ಖಾಸಗಿ ಷೇರು ಸಂಸ್ಥೆ 'ಇ.ಕ್ಯೂ.ಟಿ' ಆರ್‌ಸಿಬಿ ತಂಡದ ಖರೀದಿ ಪ್ರಕ್ರಿಯೆಯಲ್ಲಿ ಸದ್ಯ ಮುಂಚೂಣಿಯಲ್ಲಿದೆ. ಇಕ್ಯೂಟಿ 2ರಿಂದ 2.1 ಶತಕೋಟಿ ಡಾಲರ್ (ಸುಮಾರು 18,463ರಿಂದ 19,386 ಕೋಟಿ ರೂ.) ಬಿಡ್ ಸಲ್ಲಿಸಿದೆ ಎನ್ನಲಾಗಿದೆ. ಮಣಿಪಾಲ್ ಹಾಸ್ಪಿಟಲ್ಸ್‌ನ ಡಾ. ರಂಜನ್ ಪೈ ಅವರು ಅಮೆರಿಕದ ಖಾಸಗಿ ಷೇರು ಸಂಸ್ಥೆ ಕೆಕೆಆರ್ ಮತ್ತು ಸಿಂಗಾಪುರದ ಪ್ರಮುಖ ಹೂಡಿಕೆ ಸಂಸ್ಥೆ ಟೆಮಾಸೆಕ್ ಜತೆಗೂಡಿ ಆರ್‌ಸಿಬಿ ಖರೀದಿ ರೇಸ್‌ನಲ್ಲಿ ಉಳಿದಿದ್ದಾರೆ. ಯುನೈಟೆಡ್ ಮ್ಯಾಂಚೆಸ್ಟರ್ ಮಾಲೀಕ ಅವ್ರಾಮ್ ಗ್ಲೇಜರ್ ಅವರ ಲ್ಯಾನ್ಸರ್ ಕ್ಯಾಪಿಟಲ್ ಕಂಪನಿ ಈ ಮುನ್ನ ಗರಿಷ್ಠ 1.8 ಶತಕೋಟಿ ಡಾಲರ್ (16,616 ಕೋಟಿ ರೂ.) ಬಿಡ್ ಸಲ್ಲಿಸಿತ್ತು. ಆದರೆ ಅಂತಿಮ ಸುತ್ತಿನಲ್ಲಿ ಖರೀದಿ ರೇಸ್‌ನಿಂದ ಹಿಂದೆ ಸರಿದಿದೆ ಎನ್ನಲಾಗಿದೆ. ಆರ್‌ಸಿಬಿ ಖರೀದಿಗೆ ಮೊದಲು ಬಿಡ್ ಸಲ್ಲಿಸಿದ್ದ ಸೀರಮ್ ಇನ್‌ಸ್ಟಿಟ್ಯೂಟ್ ಒಡೆಯ ಅದರ್ ಪೂನಾವಾಲಾ, ಆದರೆ ಅವರು ಹಿಂದೆ ಸರಿದಿದ್ದಾರೆ. ಟೈಮ್ಸ್ ಗ್ರೂಪ್ ಕೂಡ ಅಂತಿಮ ಹಂತದ ರೇಸ್‌ನಿಂದ ಹಿಂದೆ ಸರಿದಿದೆ.

ಮುಂದಿನ ಬಾರಿ ಹೊಸ ಮಾಲಿಕತ್ವ: ಆರ್‌ಸಿಬಿ ತಂಡವು ಮಾ.31ರೊಳಗೆ ಮಾರಾಟ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರೂ ತಂಡ ಹೊಸ ಮಾಲೀಕರ ಕೈಗೆ ಸೇರಲು ಅಕ್ಟೋಬರ್ ವರೆಗೆ ಕಾಯಬೇಕಾಗಬಹುದು ಎನ್ನಲಾಗಿದೆ. ಯಾವುದೇ ಐಪಿಎಲ್ ತಂಡದ ಮಾರಾಟ ಪ್ರಕ್ರಿಯೆಯನ್ನು ಬಿಸಿಸಿಐ ಒಪ್ಪಿಗೆ ಇಲ್ಲದೆ ಅಂತಿಮಗೊಳಿಸುವಂತಿಲ್ಲ. ಹೀಗಾಗಿ ಮುಂದಿನ ವರ್ಷದ 20ನೇ ಆವೃತ್ತಿಯಲ್ಲಿ ಹೊಸ ಮಾಲಿಕತ್ವದಡಿ ಆರ್‌ಸಿಬಿ ಆಡಲಿದ್ದು, ಈ ಬಾರಿ ಡಿಯಾಜಿಯೋ ಒಡೆತನದಲ್ಲೇ ತಂಡ ಮುಂದುವರಿಯಲಿದೆ.

ಲವ್ ಮಾಕ್ಟೇಲ್‌ನ ಪ್ರೀತಿಯ ಪಯಣ

ಡಾರ್ಲಿಂಗ್ ಕೃಷ್ಣ ಮಾಸ್ ಸಿನಿಮಾಗಿಂತ ಪ್ರೇಮಕಥೆ ಚಿತ್ರದ ಮೂಲಕವೇ ಹೆಚ್ಚು ಸದ್ದು ಮಾಡಿದವರು. ಅದಕ್ಕೆ ಕೃಷ್ಣ ನಟಿಸಿ, ನಿರ್ದೇಶಿಸಿದ ಲವ್ ಮಾಕ್ಟೇಲ್ ಸಿನಿಮಾವೇ ನಿದರ್ಶನ. ಲವ್ ಮಾಕ್ಟೇಲ್ ಯಾರೂ ನಿರೀಕ್ಷಿಸದ ಮಟ್ಟಿಗೆ ಯಶಸ್ವಿಯಾಯಿತು. ಆ ಬಳಿಕ ಲವ್ ಮಾಕ್ಟೇಲ್ 2 ಬಂದು ಇದೂ ಕೂಡ ಸೂಪರ್ ಹಿಟ್ ಆಯಿತು. ಈ ಎರಡು ಚಿತ್ರಗಳು ಉತ್ತಮ ಗಳಿಕೆ ಕಂಡವು. ಈಗ ಅದೇ ಖುಷಿಯಲ್ಲಿ ಲವ್ ಮಾಕ್ಟೇಲ್ 3 ಚಿತ್ರ ತೆರೆಗೆ ಬಂದಿದೆ. ತೆರೆಯಲ್ಲಿ ಪ್ರೀತಿಯ ಪಯಣ ಸಾಗುತ್ತಿದೆ. ಮೊದಲ ಭಾಗದಲ್ಲಿ ಆರಂಭವಾದ ಕಾಲೇಜು ಪ್ರೇಮ, ಆ ಬಳಿಕ ಕೈಕೊಟ್ಟ ಹುಡುಗಿ. ಬರಡಾದ ಆದಿಯ ಬಾಳಲ್ಲಿ ಸಿಕ್ಕಿದ ನಿಧಿ. ಕಾಲನ ಕರೆಗೆ ಓಗೊಟ್ಟು ಮರೆಯಾದ ನಿಧಿಯಮ್ಮ. ಇವೆಲ್ಲವೂ ಕಣ್ಣಮುಂದೆ ಹಾದು ಹೋಗುತ್ತವೆ. ನಿಧಿಯಮ್ಮ ಅಗಲಿದ ಮೇಲೆ ಕಹಿಯಾದ ಬಾಳಲ್ಲಿ ಸಿಕ್ಕುವ ಸಿಹಿ. ಮತ್ತೆ ಮಸುಕಾದ ಪ್ರೇಮ, ಇದೆಲ್ಲವೂ ಒಮ್ಮೆ ನೆನಪುಗಳ ಬುತ್ತಿಯನ್ನು ಹೊತ್ತು ತರುತ್ತವೆ. ಈಗ ಆದಿ ಬಾಳಲ್ಲಿ ಯಾರು ಬೆಳಕಾಗಿ ಬರುತ್ತಾರೆ ಎಂಬುದನ್ನು ಈ ಭಾಗದಲ್ಲಿ ಕಟ್ಟಿಕೊಡಲಾಗಿದೆ. ಲವ್ ಮಾಕ್ಟೇಲ್ ಮೂರು ಭಾಗಗಳಲ್ಲಿ ಮೂಡಿಬಂದಿದೆ. ಈ ಭಾಗದೊಂದಿಂಗೆ ಲವ್ ಮಾಕ್ಟೇಲ್ ಅಧ್ಯಾಯ ಮುಕ್ತಾಯವಾಗಲಿದೆ. ನಿಧಿಯಾಗಿ ಮಿಲನಾ ನಾಗರಾಜ್ ಮತ್ತೊಮ್ಮೆ ಮುಗ್ಧತೆಯಲ್ಲಿ ಮನಗೆಲ್ಲುತ್ತಾರೆ. ಉಳಿದಂತೆ ಅಮೃತಾ ಅಯ್ಯಂಗಾರ್, ರಚೆಲ್ ಡೇವಿಡ್, ರಜನಿ ಭಾರದ್ವಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಜಗ್ಗ, ಅಭಿ ಇಲ್ಲಿಯೂ ಕಾಮಿಡಿ ಕಚಗುಳಿ ಇಡುತ್ತಾರೆ.

ತುಂಬಾ ಇಷ್ಟಪಟ್ಟು ಖುಷಿಯಿಂದ ಸಿನಿಮಾ ಮಾಡಿದ್ದೇವೆ. ಪ್ರೇಕ್ಷಕರ ಮನದಲ್ಲಿ ಹೊಸ ಪ್ರೀತಿಯ ಸಿಹಿ ಗಾಳಿ ಬೀಸಲಿದೆ. ನಮ್ಮ ಲವ್ ಮಾಕ್ಟೇಲ್ ಚಿತ್ರವನ್ನು ಕನ್ನಡದ ಪ್ರೇಕ್ಷಕರು ಪ್ರೀತಿಯಿಂದ ಸ್ವೀಕರಿಸುತ್ತಾರೆ ಎಂಬ ನಂಬಿಕೆಯೂ ಇದೆ. ಅದರಲ್ಲಿಯೂ ಯುಗಾದಿ ಸಂಭ್ರಮದಂದೇ ನಮ್ಮ ಚಿತ್ರ ತೆರೆಗೆ ಬಂದಿರುವುದು ಖುಷಿಕೊಟ್ಟಿದೆ.
-ಮಿಲನಾ ನಾಗರಾಜ್ ನಟಿ

ನೆನಪಿನ ಪುಟ ತೆರೆದಾಗ

ಲವ್ ಮಾಕ್ಟೇಲ್ ಮೊದಲ ಭಾಗ ನಿರ್ದೇಶನ ಮಾಡಿದಾಗ ಪ್ರೇಕ್ಷಕರು ಅದನ್ನು ತುಂಬಾ ಪ್ರೀತಿಯಿಂದ ಸ್ವೀಕರಿಸಿದರು. ದ್ವಿತೀಯಾ ಭಾಗ ಮೂಡಿಬರಲಿದೆ ಎಂದಾಗ ಮೊದಲ ಭಾಗದಷ್ಟು ಚೆನ್ನಾಗಿ ಮೂಡಿಬರೋದು ಅನುಮಾನ ಅಂತ ಕೆಲವರು ಅಂದುಕೊಂಡಿದ್ದರು. ಆದರೆ ಲವ್ ಮಾಕ್ಟೇಲ್ 2ಗೂ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಈಗ ಮೂರನೇ ಭಾಗ ಈ ಹಿಂದಿನ ಎರಡು ಭಾಗಗಳಿಗಿಂತ ಅದ್ಭುತವಾಗಿ ಮೂಡಿಬಂದಿದೆ.

ಬೃಂದಾವಿಹಾರಿ ಗಣಿ

ನಟ, ಗಣೇಶ್ ಹಾಗೂ ನಿರ್ದೇಶಕ ಶ್ರೀನಿವಾಸರಾಜು ಕಾಂಬಿನೇಷನ್‌ನಲ್ಲಿ ಬಂದ ಕೃಷ್ಣಂ ಪ್ರಣಯ ಸಖಿ ಚಿತ್ರ ಸೂಪರ್ ಹಿಟ್ ಆಯಿತು. ಈ ಸಿನಿಮಾದ ಬಳಿಕ ಮತ್ತೆ ಒಂದಾಗಿರುವ ಗಣಿ ಮತ್ತು ಶ್ರೀನಿವಾಸ್ ಮತ್ತೊಂದು ಪ್ರೇಮ್ ಕಹಾನಿಯನ್ನು ಪ್ರೇಕ್ಷಕರ ಮುಂದಿಡಲು ಸಿದ್ಧವಾಗಿದ್ದಾರೆ. ವಿರಾಟ್ ಸಾಯಿ ಕ್ರಿಯೇಷನ್ಸ್ ಅರ್ಪಿಸುವ ಈ ಚಿತ್ರವನ್ನು ನಿರ್ಮಾಪಕ ಸಮೃದ್ಧಿ.ವಿ.ಮಂಜುನಾಥ್ ನಿರ್ಮಾಣ ಮಾಡುತ್ತಿದ್ದಾರೆ. ಯುಗಾದಿ ಹಬ್ಬದ ಶುಭ ಸಂದರ್ಭದಲ್ಲಿ ಈ ಚಿತ್ರದ ಶೀರ್ಷಿಕೆ ಅನಾವರಣವಾಗಿದೆ. ರೊಮ್ಯಾಂಟಿಕ್ ಜಾನರ್‌ನ ಈ ಚಿತ್ರಕ್ಕೆ ಬೃಂದಾವಿಹಾರಿ ಎಂದು ಹೆಸರಿಡಲಾಗಿದೆ. ಈ ಶೀರ್ಷಿಕೆಯನ್ನು ಕಂಡು ಸಿನಿಪ್ರಿಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಚಿತ್ರದಲ್ಲಿ ಗಣೇಶ್‌ಗೆ ನಾಯಕಿಯರಾಗಿ ದೇವಿಕಾ ಭಟ್ ಹಾಗೂ ಮಾಳವಿಕಾ ಶರ್ಮ ಅಭಿನಯಿಸಿದ್ದಾರೆ. ಗಣೇಶ್ ಹಾಗೂ ಶ್ರೀನಿವಾಸರಾಜು ಅವರ ಕಾಂಬಿನೇಶನ್‌ನ ಚಿತ್ರ ಎಂದ ಮೇಲೆ ಹಾಡುಗಳ ಬಗ್ಗೆ ತುಸು ನಿರೀಕ್ಷೆ ಹೆಚ್ಚೆ ಇರುತ್ತದೆ. ಅಂತೆಯೇ ಈ ಚಿತ್ರದಲ್ಲಿಯೂ ಮಧುರ ಹಾಡುಗಳಿವೆ. ಖ್ಯಾತ ಸಂಗೀತ ನಿರ್ದೇಶಕ ಹೇಶಮ್ ಅಬ್ದುಲ್ ವಹಾಬ್ ಚಿತ್ರದ ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ಸದ್ಯದಲ್ಲಿಯೇ ಚಿತ್ರದ ಹಾಡುಗಳು ಬಿಡುಗಡೆಯಾಗಲಿದೆ. ನಿರ್ದೇಶಕ ಶ್ರೀನಿವಾಸರಾಜು ಅವರೇ ಕಥೆ, ಚಿತ್ರಕಥೆ ಬರೆದಿದ್ದು, ವೆಂಕಟ್ ಪ್ರಸಾದ್ ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಬೃಂದಾವಿಹಾರಿ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗಿವೆ.